
ಫೆಬ್ರವರಿ ೧೯೭೯
ಬಸವ ಶಕೆ ೮೭೨

ಸಂಪುಟ ೪
ಸಂಚಿಕೆ ೧೦

ಕಲ್ಯಾಣ ಕಿರಣ



ಕಲ್ಯಾಣ ಕಿರಣ

ಮಾಸ ಪತ್ರಿಕೆ

ಫೆಬ್ರವರಿ ೧೯೭೯	ಸಂಪುಟ : ೪
ಬಸವ ಶಕೆ ೮೭೨	ಸಂಚಿಕೆ : ೧೦
ಆಜೀವ ಸದಸ್ಯತ್ವ	ವಾರ್ಷಿಕ ಚಂದಾ
ನೂರಐವತ್ತೊಂದು ರೂಪಾಯಿ	ಹನ್ನೆರಡು ರೂಪಾಯಿ

ಒಳಗೆ ಏನಿದೆ ?

			ಪುಟ
೧.	ನುಡಿ-ನೈವೇದ್ಯ	ಮಾತಾಜಿ	೧
೨.	ನಿಮ್ಮ ಅನಿಸಿಕೆ	ಓದುಗರು	೩
೩.	ಮಾತೃಹರಕೆ	ಮಾತಾಜಿ	೫
೪.	ಮೈಸೂರು ನಗರದಿಂದಾದ ಧನ ಸಹಾಯ ವಿವರ		೧೦
೫.	ಸ್ಫುರಣ-ಕಿರಣ (ಸಂಗ್ರಹ)	ಮಾತಾಜಿ	೧೧
೬.	ಸಮಸ್ಯೆ ? ಸಮಾಧಾನ !	ಸಮಾಧಾನಿ	೧೬
೭.	ಬಸವಣ್ಣನವರ ವಚನಗಳಲ್ಲಿ ಪ್ರಾಣಿ ರೂಪಕ	ಸು.ಜ.ನಾ.	೧೭
೮.	ನಾ ಕಂಡ ಮಾತಾಜಿ ಮತ್ತು ಕೇಳಿದ ಅವರ ಪ್ರವಚನ	ರಾಜಶೇಖರಯ್ಯ	೪೨
೯.	ಮಾತು ಜ್ಯೋತಿರ್ಲಿಂಗ (ಸಂಗ್ರಹ)	ಷಡಕ್ಷರ ಸ್ವಾಮಿ	೪೬
೧೦.	ಮಾತಾಜಿಯವರ ದಿವ್ಯ ಚರಣಕೆ (ಕವನ)	ಡಾ|| ಭಾರತಿ	೪೮
೧೧.	ವಚನ ನವನೀತ	ಸ್ವಾಮಿ ಲಿಂಗಾನಂದರು	೫೦
೧೨.	ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ವರದಿ	ಸ್ವಾಮಿ ದಯಾನಂದ	೫೩
೧೩.	ಆನು ಒಲಿದಂತೆ ಹಾಡುವೆ	ಮಾತಾಜಿ	೬೦
೧೪.	ಷಡಕ್ಷರದೇವ	ಪುಲಿಕೇಶಿ	೬೮

ಮುಖಪುಟ : ಜೋಗ್ ಜಲಪಾತ

ಕಲ್ಯಾಣ ಕಿರಣ

ನುಡಿ ನೈವೇದ್ಯ

ಕಾವೇರಿಯ ಗುಡಿ

ಭಕ್ತಿಯಿಂ ಬಿರಿದು ಬಾ ಶಿವದ ಆರಾಧಕನೆ
ಪ್ರಕೃತಿಯ ಈ ಗುಡಿಗೆ ಕಾವೇರಿಯೊಡಲಿಗೆ ‖ ಪ ‖
ಸಂಸಾರ ಸಂತೆಯಲಿ ಬೇಸತ್ತು ಬಳಲಿಹ
ಮನದ ಮಗುವನು ನೀನು ಸಂತೈಸಲಿಲ್ಲ ಬಾ ‖ ಅ. ಪ ‖
ಚಿಲಿಪಿಲಿ ರವದೊಡನೆ ದನಿತೆಗೆದು ಉಲಿಯುತಿಹ
ವಿಹಗಗಳು ಹಾಡುತಿವೆ ಉದಯರಾಗವನು ‖
ಗಿರಿಯ ತುದಿಯಿಂದಿಳಿದು ಕೊಳ್ಳ ಮಧ್ಯದಿ ಸರಿದು
ಹರಿವ ಝರಿಗಳು ಅವಗೆ ಮಜ್ಜನವ ಎರೆಯುತಿವೆ ‖
ಕಾಡಕುಸುಮವ ತಾಡಿಸಿ ಸೌರಭವ ತಾ ಹೊತ್ತು
ಧೂಪವನ್ನರ್ಪಿಸಲು ತಣ್ಣೆಲರು ತಿರುಗುತಿದೆ ‖
ಸುಯ್ಯನೆ ಬೀಸುತ ಗಿರಿಯ ವೀಣೆಯ ಮಿಡಿದು
ರೊಯ್ಯೆಂದು ಗಾಳಿಯು ಜಾಗಟೆಯ ಬಡಿಯುತಿದೆ ‖
ಸುಪ್ರಭಾತದ ರವಿಯ ಹೊಂಗಿರಣಗಳ ದೀಪ್ತಿ
ಸುಪ್ರಸನ್ನತೆಯಿಂದ ಎತ್ತುತಿದೆ ಆರತಿಯ ‖
ತಲೆ ಎತ್ತಿ ನಿಂತಿಹ ಒತ್ತುಗಿಡಗಳ ರೆಂಬೆ
ಒಲಿದೊಲಿದು ಬೀಸುತಿವೆ ಮೃಡಗೆ ಚಾಮರವ ‖
ಬಣ್ಣಬಣ್ಣದ ಪುಷ್ಪ ವಾರಾಶಿ ಮೈಬಿರಿದು
ಚಣಚಣಕು ಗೈಯುತಿದೆ ಪುಷ್ಪಾರ್ಚನೆಯ ಸೇವೆ ‖
ಕಂದರದಿ ಮೇಲೆದ್ದ ಉತ್ತುಂಗ ಶೃಂಗಗಳು
ಮೌನಧ್ಯಾನದಿ ಕುಳಿತ ತಾಪಸಿಗಳಂತಿಹವು ‖
'ಅರ್ಥವಿಲ್ಲದವಿವೇಕದ ಸಂತೆಯೆಲ್ಲವೀ ಸೃಷ್ಟಿ
ರಸ ಕಬ್ಬಿನ ತೆರದಿ ಭರಿತವಾಗಿದೆ ಶಿವದಿಂ' ‖
ಎಂದೆನುತ ಸಾರುತಿದೆ ನಿತ್ಯಸತ್ಯ ಘೋಷಣೆಯ
ಸಚ್ಚಿದಾನಂದದ ನಿಲುವ ಕಾವೇರಿಯ ಮಡಿಲು ‖

ಕಲ್ಯಾಣ ಕಿರಣ

ಮಾಸಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನಪಡಿಸುವುದು.

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ.
ಬೆಂಗಳೂರು-೫೬೦೦೧೦

ಕಲೆ :

ಬಿ. ಪಿ. ಕೃಷ್ಣಯ್ಯ

ಮುದ್ರಣ: ಸೂಪರ್ ಪ್ರಿಂಟರ್ಸ್

ಬೆಂಗಳೂರು-೫೬೦೦೫೩

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಆವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.

* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ).

* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ನಿಮ್ಮ ಅನಿಸಿಕೆ

ಪರಮ ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರ ಪಾದಪದ್ಮಂಗಳಲ್ಲಿ ನಮ್ಮ ಭಕ್ತಿಯ ಪ್ರಣಾಮುಗಳು.

ತಮ್ಮ ಸಂಪಾದಕತ್ವದಲ್ಲಿ ಹೊರಬರುತ್ತಿರುವ 'ಕಲ್ಯಾಣ ಕಿರಣ' ನಿಜಕ್ಕೂ ಜನತೆಯ ಕಲ್ಯಾಣವನ್ನುಂಟುಮಾಡುವಂಥ ಪತ್ರಿಕೆ. ನಾವಂತೂ ತಪ್ಪದೆ ಓದುತ್ತೇವೆ. ವಿಚಾರವಂತರಲ್ಲಿ ನಾಸ್ತಿಕತೆಯು ಹೆಚ್ಚುತ್ತಿರುವ ಕಾಲದಲ್ಲಿ ಆಸ್ತಿಕತೆಯನ್ನು ಹುಟ್ಟಿಸುವುದಷ್ಟೇ ಅಲ್ಲ, ಜೀವನದಲ್ಲಿ ನೊಂದು ಬೆಂದವರಿಗೆ ಜೀವನಮಾರ್ಗ ತೋರಿಸುತ್ತದೆ.

ಬಸವಗಂಗೋತ್ರಿ ಯೋಜನೆ ನೋಡಿದ ಮೇಲಂತೂ ನನ್ನ ಕಣ್ಣಲ್ಲಿ ಆನಂದಬಾಷ್ಪಗಳು ತಾನಾಗಿಯೇ ಉದುರಿದುವು. ಕೋಟ್ಯಾಧೀಶ ಎನಿಸಿಕೊಂಡ ಮಠಗಳೂ ಸಹ ಮಾಡಲಾಗದಂತಹ ಕಾರ್ಯ ತಾವು ಮಾಡುತ್ತಿದ್ದೀರಿ. ನಿಜಕ್ಕೂ ತಾವು ದೈವೀ ಪುರುಷರು, ಅವತಾರಿಕರು ಎಂದು ಎಂಥವರಿಗೂ ಅನಿಸದೆ ಇರದು.

ಈ ಯೋಜನೆಗಳು ಬೇಗ ಮುಗಿಯಲಿ 'ಕಲ್ಯಾಣ ಕಿರಣ' ಚಿರಕಾಲ ಬಾಳಲಿ ಎಂದು ಬಸವಗುರುವಿನಲ್ಲಿ ಪ್ರಾರ್ಥಿಸುವೆವು.

ಪೂಜ್ಯ ಶ್ರೀ ಚನ್ನಬಸವಪಟ್ಟದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ
೨೯-೧೧-೭೮

ಪೂಜ್ಯ ಮಾತಾಜಿಯವರ ಪಾದಪದ್ಮಂಗಳಲ್ಲಿ ಶಿರಸಾಷ್ಟಾಂಗ ಪ್ರಣಾಮುಗಳು.

ತಮ್ಮ ಲಿಂಗಪೂಜಾ ನಿಷ್ಠೆ, ಕಾಯಕ ನಿಷ್ಠೆ, ಬಸವಧರ್ಮದ ಬಗೆಗಿರುವ ಶ್ರದ್ಧೆ, ಮುಂದಿಟ್ಟ ಹೆಜ್ಜೆಯನ್ನು ಹಿಂದೆಗೆಯದ ಅತುಳ ಸಾಹಸ, ಪಿಡಿದ ನೇಮವನು ಬಿಡದ ಸಛ್ಛಲ ಲೋಕದ ಸ್ತುತಿನಿಂದೆಗಳಿಗೆ ಕಿವಿಗೊಡದೆ ಸ್ಥಿತಪ್ರಜ್ಞೆ, ಕಡುವೈರಿಯಿಂದಲೂ ಮೆಚ್ಚುಗೆ ಗಳಿಸಬಲ್ಲ ಯೋಜನಾಚಾಕಚಕ್ಯತೆ, ಪ್ರಿಯವ್ಯಕ್ತಿತ್ವ ಔದಾರ್ಯ ಮುಂತಾದ ನೂರಾರು ಗುಣ ಸಂತತಿಗಳು ನನ್ನನ್ನು ಮೂಕನನ್ನಾಗಿಸಿವೆ. ಅಂತೆಯೇ ನನ್ನನ್ನು ಸೆರೆಹಿಡಿದು ತಮ್ಮ ಪದತಲದಲ್ಲಿ ಕೆಡೆದಿವೆ. ತಮ್ಮ ಬೃಹತ್ಕಲ್ಪನೆಗಳೆಲ್ಲವೂ ಕೈಗೂಡಲೆಂದು ವಿಶ್ವಗುರು ಬಸವಣ್ಣನವರಲ್ಲಿ ಶಿರ ಬಾಗಿ ಬೇಡುತ್ತೇವೆ.

ಇಂತಿ ಶಿರಸಾಷ್ಟಾಂಗಪ್ರಣಾಮುಗಳು

ಪಿ. ಬಸವಣ್ಣ
ನಿಜಗುಣ ಮುದ್ರಣಾಲಯ,
ಕೊಳ್ಳೇಗಾಲ
೪-೧೧-೭೮

* * *

ಧರ್ಮಕ್ರಾಂತಿಯ ದಿವ್ಯಜ್ಯೋತಿಯ ಪಾದಾರವಿಂದಗಳಿಗೆ ಸಾಷ್ಟಾಂಗ ನಮಸ್ಕಾರಗಳು.

೨೦ನೆಯ ಶತಮಾನದಲ್ಲಿ, ದಿಕ್ಕೆಟ್ಟು ನಾಗಾಲೋಟದಲ್ಲಿ ಓಡುತ್ತಿರುವ ಸಮಾಜಕ್ಕೆ, ತಮ್ಮ ಧರ್ಮಜ್ಯೋತಿ, ದಿವ್ಯವಾದ ಪ್ರವಚನಗಳ ಮೂಲಕ, ಧರ್ಮಕ್ರಾಂತಿಯ "ಕಲ್ಯಾಣ ಕಿರಣದ" ಮೂಲಕ ನಮ್ಮ ನಾಡಿನ ಜನತೆಯಲ್ಲಿ ಧರ್ಮ, ಸತ್ಯಗಳ ಕಿಚ್ಚನ್ನು ಕೆಚ್ಚೆದೆಯಿಂದ ನಿರ್ಭೀತವಾಗಿ ನಿರಂತರವಾಗಿ ಬಾಳುಸಿರಾಗಿಸಿ ಆದರ್ಶ ಬದುಕಿಗೆ ಬೆಳಕಾಗುವುದರಲ್ಲಿ ಸಂದೇಹವಿಲ್ಲ.

ಗೊ. ರು. ಜಗದೀಶಪ್ಪ
ಅಜ್ಜಂಪುರ

* * *

ಭಕ್ತಿರಸವ ದಣಿಯೆ ಮೇಯಿಸಿ, ಸುಬುದ್ಧಿ ಎಂಬ ಉದಕವ ಎರೆವ ಕಾಯಕವನ್ನು ಕಲ್ಯಾಣ ಕಿರಣ ಚೆನ್ನಾಗಿ ಮಾಡುತ್ತಿದೆ.

ಬಸವರಾಜ ಮಠಪತಿ
ನಿಡ್ರಾ

ಪೂಜ್ಯರೇ,

ಕಲ್ಯಾಣಕಿರಣ ಸಂಚಿಕೆ ಳ, ಸಂಚಿಕೆ ೫ ತಲುಪಿತು. ಸಂಚಿಕೆ ಬಹು ಅರ್ಥಪೂರ್ಣವಾಗಿ, ಸುಂದರವಾಗಿ ಹೊರಬಂದಿದೆ. ಶ್ರೀಮಾನ್ ಸುಜನಾ ಮತ್ತು ಶ್ರೀ ಬಸವಾರಾಧ್ಯರ ಲೇಖನಗಳು ಮನನೀಯವಾಗಿವೆ. ಪೂಜ್ಯ ಮಾತಾಜಿಯವರ ಮೈಸೂರಿನಲ್ಲಿನ ಕಾರ್ಯಕ್ರಮಗಳು, ಶ್ರೀ ಲಿಂಗಾನಂದ ಸ್ವಾಮಿಗಳವರ ಅಭೂತಪೂರ್ವ ಪ್ರವಚನ ಕಾರ್ಯಕ್ರಮಗಳು ಹೃದಯವನ್ನುಕ್ಕಿಸಿದವು. ಪತ್ರಿಕೆ ಇನ್ನೂ ಯಶಸ್ವಿಯಾಗಿ ಹೊರಬರುವ ಆಸೆ ಪೂರ್ಣಗೊಳ್ಳುತ್ತಿದೆ. ಧನ್ಯವಾದಗಳು. ಪೂಜ್ಯರಿಬ್ಬರ ಸಾಹಸ ಅತ್ಯಂತ ಶ್ಲಾಘನೀಯ. ಇತೀ ಅನೇಕ ನಮಸ್ಕಾರಗಳೊಡನೆ,

ತಮ್ಮ ವಿಶ್ವಾಸಿ
ಪಂಡಿತ ಚನ್ನಪ್ಪ ಎರೆಸೀಮೆ
ಬೆಂಗಳೂರು ೫-೧-೭೯

* * *

ಸಜ್ಜನರು ಎಲ್ಲರನ್ನೂ ತಮ್ಮಂತೆಯೇ
ಎಂದು ಭಾವಿಸುತ್ತಾರೆ

—ಚಾಣಕ್ಯ


ಜ್ಞಾನವನ್ನು ಪೇಟೆಯಲ್ಲಿ ಕೊಳ್ಳಬಹುದು.
ನಡತೆ ಮಾತ್ರ ದೇವರು ಕೊಟ್ಟದ್ದು:

—ಎ. ಎಚ್. ಕ್ಲಾಫ್

ಒಮ್ಮೊಮ್ಮೆ ನಂಬಿ ಕೆಟ್ಟರೂ ಚಿಂತೆಯಿಲ್ಲ.
ನಂಬದಿರುವುದಕ್ಕಿಂತಲೂ ನಂಬಿ ಕೆಡುವುದು ಲೇಸು.

—ಆದರ್ಶವಾದಿ

ದುಃಖ ನೋಡಿ ಕರುಣೆ ತೋರಿಸುವುದು ಮನುಷ್ಯತ್ವ,
ಪರಿಹಾರ ತೋರಿಸುವುದು ದೈವತ್ವ. —ಗೀತಾರಾಜನ್



ಹಾಲುಂಡ ತೌರೀಗೆ ಏನೆಂದು ಹಾಡಲಿ
ಹೊಳೆದಂಡೇಲಿರುವ ಕರಿಕೆಯ । ಕುಡಿಯಂಗ
ಹಬ್ಬಲೇ ಅವರ ರಸಬಳ್ಳಿ ॥

ಇದು ಓರ್ವ ಜಾನಪದ ಗೃಹಿಣಿ ತನ್ನ ತೌರಿಗೆ ಹಾಕುವ ಹರಕೆ. ಈ ಜಗತ್ತಿನಲ್ಲಿ ಎಲ್ಲಕ್ಕಿಂತ ಹೆಚ್ಚಿನ ಋಣ ತಾಯಿಯ ಹಾಲಿನ ಋಣ. There is no substitute for either mother or mother's milk. ತಾಯಿಗೆ ಮತ್ತು ತಾಯಿ ಹಾಲಿಗೆ ಸಮನಾದ ಇನ್ನೊಂದು ವಸ್ತುವು ದೊರೆಯುವುದು ಕಷ್ಟಸಾಧ್ಯ. ಅಂಥ ತೌರಿನ ಋಣ ಎದೆಹಾಲಿನ ಮುಖಾಂತರ ಹರಿದುಬಂದು ಮೈಗೂಡುವುದು. ಆ ಋಣವನ್ನು ತೀರಿಸಲೋಸುಗ ಹರಕೆಯನ್ನು ಹಾಕುತ್ತಾಳೆ ಈ ಗೃಹಿಣಿ. 'ಹೊಳೆಯ ದಂಡೆಯಲ್ಲಿರುವ ಕರಿಕೆಯ ಬಳ್ಳಿಯಂತೆ ಅವರ ವಂಶವೃಕ್ಷ ಬೆಳೆಯಲಿ; ಸಂಪದವೃಕ್ಷವೂ ವಿಸ್ತರಿಸಲಿ' ಎನ್ನುತ್ತಾಳೆ. ಕರಿಕೆ ಆಳವಾಗಿ, ದೃಢವಾಗಿ ಬೆಳೆಯುತ್ತದೆ; ಅಷ್ಟೇ ತ್ವರಿತವಾಗಿ ಹಬ್ಬುತ್ತಲೂ ಹೋಗುತ್ತದೆ; ಅದು firmest in root, fastest in growth. 'ಅದರಂತೆ ಹೆತ್ತವರ ಜೀವನ ವೃಕ್ಷ ಹಬ್ಬಲಿ' ಎಂದು ಸಾಮಾನ್ಯ ಲೌಕಿಕರು ಹರಸುವುದು ಸ್ವಾಭಾವಿಕ. ಆದರೆ ಇಂಥ ಹರಕೆ-ಆಕಾಂಕ್ಷೆಗಳು ವಿರಕ್ತರಿಗಿರಲುಂಟೆ? ಇದ್ದರೆ ಅಸ್ವಾಭಾವಿಕವೆ?

ಇಂಥದೊಂದು ತೌರನ್ನು ಕಂಡುಬಂದ ಬಳಿಕ, ಅಲ್ಲಿ ಉಂಡು ಬಂದ ಬಳಿಕ, ಉಡಿ ತುಂಬಿಸಿಕೊಂಡು ಬಂದ ಬಳಿಕ ಇಂಥ ಹರಕೆಯೊಂದನ್ನು ಹಾಕಬೇಕೆನ್ನಿಸಿತು. ಏನೀ ವಿಚಿತ್ರ ಒಕ್ಕಣಿಕೆ, ಲೆಕ್ಕಣಿಕೆ ಎಂದು ನೀವೆಲ್ಲ ಕುತೂಹಲಿತರೆ? ಅಕ್ಟೋಬರ್ ತಿಂಗಳ ೨೩ನೆಯ ತಾರೀಖು ಭಾನುವಾರದಂದು ಸಾಂಸ್ಕೃತಿಕ, ಶೈಕ್ಷಣಿಕ, ಆಧ್ಯಾತ್ಮಿಕ ಕೇಂದ್ರವಾದ ಮೈಸೂರು ನಗರದಲ್ಲಿ ಪ್ರವಚನವನ್ನಾರಂಭಿಸಿದೆ. ಉದ್ಯಾನವನಗಳಿಂದ ನಳನಳಿ

ಸುವ, ಬೃಹದಾಕಾರದ ನಗರವಾಗಿದ್ದರೂ ಪ್ರಶಾಂತತೆಯನ್ನು ಕಾಪಾಡಿಕೊಂಡು ಬಂದಿರುವ, ಇಂಚುಪಟ್ಟಿಯಿಂದ ಗೆರೆ ಕೊರೆದಂತಹ ನೇರರಸ್ತೆಗಳಿಂದ, ಭವ್ಯ ಹರ್ಮ್ಯಗಳಿಂದ, ಸನಿಹದಲ್ಲೇ ಭದ್ರಕೋಟೆಯಂತೆ ತಲೆ ಎತ್ತಿ ನಿಂತಿರುವ ಚಾಮುಂಡಿಬೆಟ್ಟದಿಂದ, ಆಗಸದಲ್ಲಿ ಥಳಗುಟ್ಟುವ ನಕ್ಷತ್ರಮಾಲಿಕೆಗಳಂತೆ ಮಿಂಚುವ ಮರ್ಕ್ಯುರಿ ಸಾಲುದೀಪಗಳಿಂದ, ವಿಶಾಲವಾದ, ರಮ್ಯವಾದ ವೃತ್ತಗಳಿಂದ ಕಂಗೊಳಿಸುವ ಮೈಸೂರು ನಗರ ಪ್ರೇಕ್ಷಕರ ಪ್ರವಾಸಿಗರ ಸ್ವರ್ಗ. ಊರಿನಲ್ಲೆಲ್ಲೆಲ್ಲೂ ಗಿಡಗಂಟಿಗಳ, ಹುಲ್ಲು ಹಾಸಿಗೆಗಳ ಹಸಿರು, ಜನತೆಯ ಹೃದಯವೂ ಹಚ್ಚ ಹಸಿರು. ಇಂಥ ನಗರಕ್ಕೆ ಕಳಸವಿಟ್ಟಂತೆ ಇದೆ ಸುಂದರವಾದ ಪುರಭವನ ಮೈದಾನ. ನಿಂತಂತಹವರನ್ನು ಆಕರ್ಷಿಸಿ, ಕುಳಿತುಕೊಳ್ಳಲು ಆಮಂತ್ರಿಸುವ ಸೌಜನ್ಯ, ಸಾಮರ್ಥ್ಯ ಅಲ್ಲಿನ ಹುಲ್ಲಿನ ಹಾಸುಗೆಗಿದೆ.

ನಿರೀಕ್ಷೆಗೆ ಮೀರಿದ ಶ್ರೋತೃ ಸಂಖ್ಯೆಯಿಂದ ಪ್ರವಚನಾರಂಭ. ದಿನದಿನಕ್ಕೆ ವರ್ಧನೆ. ಉತ್ಸಾಹದ ಹೊನಲು ನಿರಂತರವಾಗಿ ಹರಿಯುತ್ತಿತ್ತು ಶ್ರೋತೃಗಳ ಮೊಗಾರವಿಂದದಲ್ಲಿ. ಸಹಸ್ರಗಟ್ಟಳೆ ಜನರು ಸಮಾವೇಶವಾಗತೊಡಗಿದರು. ಭಾರತೀಯ ಸಮಾಜದ ಒಂದು ಪ್ರಾತಿನಿಧಿಕ ಸಭೆಯಂತೆ ಅದು ತೋರುತ್ತಿತ್ತು. ಎಲ್ಲ ಜಾತಿ ಮತ ಪಂಥ ಭಾಷೆ ವರ್ಗ ಅಂತಸ್ತುಗಳವರು ನೆರೆಯಲಾರಂಭಿಸಿದರು. ನೆಲಕ್ಕೆ ನಾವು ಹಾಸಿದ ನೆಲಹಾಸುಗೆಗಳು ಸಾಲದಾದವು. ಪುಕ್ಕಟ್ಟೆ ಅನ್ನದಾಸೋಹವಿಟ್ಟರೂ ನೆರೆಯದಷ್ಟು ಜನರ ಸಂದಣಿ ಅಲ್ಲಿ. ಎಲ್ಲಿ ಯಾವ ವಿಷಯ ಕಳೆದುಕೊಂಡೇವೋ ಎಂಬ ಆತುರ, ಕಾತುರಗಳಿಂದ ಜನರು ಸಮಯಕ್ಕೆ ಸರಿಯಾಗಿ ಧಾವಿಸುವವರೊಂದು ಕಡೆಯಾದರೆ, ಮೊದಲ ಸಾಲುಗಳೇ ಬೇಕೆಂದು ಗಂಟೆಗಟ್ಟಲೆ ಮೊದಲೇ ಬಂದು ಕಾಯುತ್ತಾ ಕುಳಿತುಕೊಳ್ಳುವವರು ಇನ್ನೊಂದು ಬಗೆ. ಮುಸ್ಸಂಜೆಯ ವೇಳೆಯಲ್ಲಿ ಮೇಯಲು ಹೋದ ಹಸು ಮನೆಯ ಬಳಿಗೆ ಧಾವಿಸುತ್ತ 'ಅಂಬಾ' ಎಂದುಲಿದಾಗ ಗೂಟಕ್ಕೆ ಕಟ್ಟಿದ ಕರುಗಳು ಜಗ್ಗಾಡುತ್ತ ಕಟ್ಟಿದಲ್ಲೇ ಕುಣಿದಾಡುವ ಉತ್ಸಾಹ ಅಲ್ಲಿ ಕಾಣಬರುತ್ತಿತ್ತು. ಕೇವಲ ಪ್ರವಚನ ಕೇಳಿ ತಲೆದೂಗಿ, ಬಾಯಿಮರುಕ ಸೂಚಿಸುವ ತೋರಿಕೆಯ ಸಹಾನುಭೂತಿ ತೋರದೆ, ತನು ಮನ ಧನ—ತ್ರಿವಿಧದಿಂದಲೂ ಸಹಾಯ ಸಲ್ಲಿಸಲು ಮುಂದಾದರು. ಸಹಸ್ರಾರು ರೂಪಾಯಿಗಳ ಪುಸ್ತಕಗಳನ್ನು ಖರೀದಿಸಿ ನೆತ್ತಿಯನ್ನು ತುಂಬಿಕೊಂಡರು. ನಾನು ನಡೆಯಿಸಿದ ಸಾಮೂಹಿಕ ಪೂಜೆಯಲ್ಲಿ ಒಂದೂವರೆ ಸಾವಿರ ಜನ ಭಾಗಿಗಳಾಗಿ ಪ್ರತ್ಯಕ್ಷ ಕೈಲಾಸವನ್ನು ಕಂಡೆವೆಂದು ಉದ್ಗಾರ ತೆಗೆದರು. ಜಗನ್ಮೋಹನ ಅರಮನೆಯು ವಿಶೇಷವಾದ ಚಿತ್ಕಳೆಯಿಂದ ತೊಳಗಿ ಬೆಳಗುತ್ತಿತ್ತು ಅಂದು. ಎಲ್ಲ ಜಾತಿಮತಗಳವರೂ ಅವರವರ ಸಮಾಜಗಳಿಗೆ ಸ್ವಾಗತಿಸಿ, ಗೌರವಿಸಿ, ವಚನಾಮೃತವನ್ನು ಪಾನಮಾಡಿ ಸಹಸ್ರಾರು ರೂಪಾಯಿಗಳ ಕಾಣಿಕೆ ಸಲ್ಲಿಸಿದರು. "ಬಸವ ಗಂಗೋತ್ರಿ" ಆಧ್ಯಾತ್ಮ ವಿದ್ಯಾಲಯಕ್ಕೆ ಅಡಿಪಾಯ ಅಕ್ಟೋಬರ್ ೮ ರಂದು ಹಾಕಿ, ತಕ್ಷಣವೇ ಮೈಸೂರಿಗೆ ನಾನು ಧಾವಿಸಿದ್ದೆ. ಅತ್ಯಂತ ಗುರುತರವಾದ ಜವಾಬ್ದಾರಿಯೊಂದು ತಲೆಯಮೇಲಿತ್ತು. ರಿಜಿಸ್ಟ್ರೇಷನ್ ಆದನಂತರ, ಆ ಜಾಗದ ಸಂಪೂರ್ಣ ಮಾಲೀಕತ್ವ ಹಸ್ತಾಂತರಿಸಿದ ಶ್ರೀ

ಅಶೋಕ್‌ಕುಮಾರರು ನಾವು ಖರೀದಿಸಿದ ಭೂಮಿಯ ಮೇಲೆ ಕೊಡಬೇಕಾಗಿದ್ದ ಇನ್ನೂ ಎರಡು ಲಕ್ಷ ರೂಪಾಯಿ ಕೊಡಲು ನಮಗೆ ನಾಲ್ಕು ತಿಂಗಳ ಅವಧಿ ನೀಡಿದ್ದರು. ಇಂಥ ಸಾಲದ ಹೊರೆ ತಲೆಯ ಮೇಲಿದ್ದುದರಲ್ಲಿ ಅರ್ಧಭಾಗವನ್ನು ಅಂದರೆ ಒಂದು ಲಕ್ಷದಷ್ಟನ್ನು ಎರಡೇ ತಿಂಗಳ ಅವಧಿಯಲ್ಲಿ ಕೊಡುವಂತೆ ಮಾಡಿದ ಔದಾರ್ಯ ಮೈಸೂರು ನಗರದ ಸದ್ಭಕ್ತರದು.

"ಬಸವ ಭಾರತಿ" ವಸತಿ ಸಹಿತ ವಿದ್ಯಾಲಯ ಕಟ್ಟಡಕ್ಕಾಗಿ ಅನೇಕರು ಅತ್ಯಂತ ಉದಾರವಾಗಿ ಸಹಾಯಗೈದರು. ಸಾಹಿತ್ಯ ಪ್ರಕಟಣೆಗಾಗಿ ದಾನಿಗಳು ಮುಂದೆಬಂದರು. ನಮ್ಮ ಪ್ರಕಟಣೆಗಳನ್ನು ಓದಿ ಸ್ಫೂರ್ತಿಗೊಂಡು ಕೆಲವು ದಾತರು ಪುಸ್ತಕಗಳನ್ನು ಖರೀದಿಸಿ ಶಾಲೆ-ಕಾಲೇಜುಗಳ ಗ್ರಂಥಾಲಯಗಳಿಗೆ ಕೊಡುಗೆಯಾಗಿ ನೀಡಿದರು. ಪ್ರಾರಂಭವಾಗಲಿರುವ ವಿದ್ಯಾಲಯಕ್ಕಾಗಿ ವಿವಿಧ ಶಾಲಾ ಸಾಮಗ್ರಿಗಳನ್ನು, ಪ್ರಸಾದ ವ್ಯವಸ್ಥೆಗಾಗಿ ವಿಪರೀತ ಸಂಖ್ಯೆಯಲ್ಲಿ ಪಾತ್ರೆ ಸಾಮಾನುಗಳನ್ನು ಸಮರ್ಪಿಸಿದರು. ಜನತೆಗಳಲ್ಲಿ ಉತ್ಸಾಹದ ಮಹಾಪೂರ, ಭಕ್ತಿಯ ಬೆಳವಿಗೆಯನ್ನು ಕಂಡು ಹೃದಯವು ತುಂಬಿ ಬರುತ್ತಿತ್ತು. ವಿಜಯನಗರ ಸಾಮ್ರಾಜ್ಯವನ್ನು ರೂಪಿಸುವ ಕಾಲಕ್ಕೆ ವಿದ್ಯಾರಣ್ಯರು (ಕ್ರಿಯಾಶಕ್ತಿ ಮುನಿಗಳೆಂದು ಕೆಲವರ ಅಭಿಪ್ರಾಯ) ಸಹಾಯ ಬೇಡಿ, ಜೋಳಿಗೆ ಹಾಕಿಕೊಂಡು ಹೊರಟಾಗ ಚಿನ್ನದ ಮಳೆ ಸುರಿಯಿತಂತೆ. ಮೋಡದಿಂದ ಸುರಿಯುವ ಅನೈಸರ್ಗಿಕ ಪವಾಡವಾಗಿಯೇನೂ ನಾವು ಭಾವಿಸಬೇಕಾಗಿಲ್ಲ. ಜನತೆಯು ಉದಾರಿಗಳಾಗಿ ಚಿನ್ನದ ಮಳೆ ಸುರಿಸಿರಬಹುದು. ಮೈಸೂರು ನಗರದ ಮಹಾಜನತೆ ಸಹಾಯ ಸಲ್ಲಿಸಿದ ಬಗೆ ನೋಡಿದರೆ ಚಿನ್ನದ ಸುರಿಮಳೆಯ ಕಲ್ಪನೆ ಅಸಂಭವ ಎನಿಸಲಿಲ್ಲ.

'ಐದು ವಾರಗಳ ಕಾಲ ಪ್ರವಚನ' ಎಂದು ಘೋಷಿಸಲಾಗಿತ್ತು. ಆದರೆ ಅದು ಆರು ವಾರಗಳಿಗೆ ಮುಂದುವರಿದು, ಕಡೆಗೆ ಎರಡು ತಿಂಗಳೆಂದು ಮುಂದುವರಿದು, ಎಪ್ಪತ್ತೊಂದನೆಯ ದಿನಕ್ಕೆ ಮಂಗಲುಗೊಂಡಿತು. ಅಂದು ಪುರಭವನ ಮೈದಾನದಲ್ಲಿ ನೆರೆದಿದ್ದ ಜನಸಮುದ್ರವನ್ನು ಕಂಡು ಬೆರಗಾಗದವರೇ ಇಲ್ಲ. ಎಂತೆಂಥ ರಾಜಕೀಯ ಸಮಾರಂಭಗಳು ನಡೆದಿದ್ದರೂ ಅಂಥದೊಂದು ಸಭೆ ನಡೆದಿರಲಿಲ್ಲವೆಂದು ಜನರು ಉದ್ಗರಿಸುತ್ತಿದ್ದರು. ಹಿಂದೆ ಮಹಾರಾಜರ ಆಳ್ವಿಕೆ ವೈಭವಯುತವಾಗಿ ನಡೆದಿದ್ದಾಗ ಅವರ ಮೆರವಣಿಗೆ, ಜಂಬೂಸವಾರಿಗೆ ಜನ ನೆರೆಯುತ್ತಲಿದ್ದರಂತೆ. ಅಂದು ಸಮಾವೇಶವಾಗಿದ್ದ ಜನರ ಮಧ್ಯೆ ಆರತಿಯ ಬಿಂದಿಗೆ ಹಿಡಿದು ಹೊರಟಾಗ ೬೦೦೦ (ಆರು ಸಾವಿರ) ರೂಪಾಯಿಗಳ ಹಣ ಅದರಲ್ಲಿ ಬಿದ್ದಿತೆಂದರೆ ಎಷ್ಟು ಜನ ಸೇರಬಹುದೆಂಬುದನ್ನು ಊಹಿಸಬಹುದು. ಅಂಥ ಬೃಹತ್ತಾದ ಸಭೆ ಇದಾಗಿದ್ದರೂ ನೀರವತೆ ; ಧ್ಯಾನೋನ್ಮುಖ ಶಾಂತಿ. ಸಮಾರಂಭ ಮುಗಿಯುವಾಗ ರಾತ್ರಿ ಹತ್ತೂವರೆಯಾಗಿದ್ದರೂ ಒಂದು ವ್ಯಕ್ತಿಯೂ ಸರಿಯದ ದೃಢತ್ವ. ಕೊಳ್ಳೇಗಾಲದ ಪಿ. ಬಸವಣ್ಣನವರು ಮುಖ್ಯ ಅತಿಥಿಗಳಾಗಿ ಬಂದಿದ್ದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹೆಚ್. ಗಂಗಾಧರನ್ ಹೃತ್ಪೂರ್ವಕವಾಗಿ ಮಾತನಾಡುತ್ತ,

ಮಾತಾಜಿಯವರಿಗೆ ಇದನ್ನು ತೌರಾಗಿ ಮಾಡಿರಿ. ಅಂದರೆ ನಿಮ್ಮ ಭಕ್ತಿ–ಮಮತೆಯ ಒತ್ತಡಕ್ಕೆ ಮನಸೋತು ಅವರು 'ಮತ್ತೆ ಮತ್ತೆ ಇತ್ತ ಬರಲಿ. ಬಂದು ಜ್ಞಾನಾಮೃತ ವನ್ನು ಹರಸಲಿ' ಎಂದರು.

ಆ ಮಾತು ನಿಜವೇ ! ಮೈಸೂರು ನಗರದ ಜನತೆ ತೌರಿನ ಮಮತೆಯನ್ನು ತೋರಿದರು. ಉಜ್ವಲವಾದ ಗೌರವ ಭಕ್ತಿಗಳನ್ನು ಸಮರ್ಪಿಸಿದರು ; ಅದು ಕೇವಲ ಆಢ್ಯತೆಯಿಂದ ಕೂಡಿದುದಲ್ಲ. ಮಮತೆ–ವಿಶ್ವಾಸ–ಆಧ್ಯಾತ್ಮ ಪ್ರಜ್ಞೆಯಿಂದ ಉದ್ದೀಪಿತವಾದುದು. ಅತ್ಯಂತ ಸಾಂಕೇತಿಕವಾಗಿ ಕಡೆಯ ದಿವಸ 'ಸಜ್ಜನ ಸಮಾಜ'ದ ಶರಣೆಯರು ವಸ್ತ್ರಗಳನ್ನು ಸಮರ್ಪಿಸಿದರೆ, 'ವಿಶ್ವಕಲ್ಯಾಣ ಮಿಷನ್' ಬೆಳಗಲೆಂದು ಸಮಾಜದ ಪ್ರಮುಖರು ಬೆಳ್ಳಿಯ ಬೆಲೆ ಬಾಳುವ ಕಾಲುದೀಪಗಳನ್ನು ಸಲ್ಲಿಸಿದರು. ಹೀಗೆ ಭಕ್ತಿ–ಮಮತೆಗಳು ಮಿಶ್ರಣಗೊಂಡ ಹದುಳಿಗತೆಯ ಕೊಡುಗೆಯಿಂದಾಗಿ ಮೈಸೂರು ತವರೇ ಆಯಿತು. ಆದ್ದರಿಂದ ಅಂಥ ತವರಿನ ಜನತೆ ಸದಾ ಸುಖಿಗಳಾಗಿರಲಿ, ಆಯುರಾರೋಗ್ಯ ಭಾಗ್ಯಗಳಿಂದ ಶೋಭಿಸಲಿ ; ಅವರ ರಸಬಳ್ಳಿ ನಾಡಿನಾದ್ಯಂತ ಹರಿದು ಅದೇ ಸಜ್ಜನಿಕೆಯನ್ನು ಉಳಿದವರ ಮೇಲೂ ಪ್ರಭಾವಿಸಲಿ ಎಂದು ಹೃತ್ಪೂರ್ವಕವಾಗಿ ಹರಸುವೆ.

ಇಂಥದೊಂದು ಧನ ಸಹಾಯದ ಹಿಂದೆ, ಜನತೆಯ ಆಶೋತ್ತರ, ಆಕಾಂಕ್ಷೆ, ಆದರ್ಶ ಬಹಳಷ್ಟಿವೆ. ನಮ್ಮಿಂದ ಏನಾದರೂ ಉತ್ತಮ ಕಾರ್ಯ ಸಂದೀತೆಂಬ ಭರವಸೆ ಇದೆ. ಅದೆಂದೂ ಹುಸಿಯಾಗದೆಂಬ ಮರುಭರವಸೆ ನಾನು ನೀಡಬಯಸುವೆ. ನಮ್ಮ ಸಂಸ್ಥೆಯು ದಿನದಿನಕ್ಕೆ ಸಾಧಿಸುತ್ತಿರುವ ಪ್ರಗತಿ, ಪಡೆಯುತ್ತಿರುವ ಜನಬೆಂಬಲ, ಹೊಂದುತ್ತಿರುವ ಧನಸಹಾಯದ ಪ್ರಮಾಣ ಸ್ಮರಿಸಿಕೊಂಡರೆ ನಮಗೆ ಅಚ್ಚರಿಯಾಗುತ್ತ ; ಮರುಕ್ಷಣವೇ ಅರಿವಾಗುತ್ತದೆ :

"ಮಾಡುವಾತ ನಾನಲ್ಲಯ್ಯ ನೀಡುವಾತ ನಾನಲ್ಲಯ್ಯ
ಮನೆಯ ತೊತ್ತಲಸಿದರೆ ಮನೆಯೊಡತಿ ಮಾಡಿಕೊಂಬಂತೆ"

ಬಸವ ಮಹಾಪ್ರಭು ತನ್ನ ಆಸೆ–ಆಕಾಂಕ್ಷೆಗಳನ್ನು ನಮ್ಮಗಳ ದುಡಿಮೆಯ ಮೂಲಕ ಪೂರೈಸಿಕೊಳ್ಳುತ್ತಿದ್ದಾನೆ. ನಾವು ನಿಮಿತ್ತಮಾತ್ರರಷ್ಟೆ. ಹಸ್ತಗತ ವೀಣೆಯಿಂದ ಸುಸ್ವರವ ನುಡಿಸಿಕೊಳ್ಳುವುದು ; ಕೈಲಿಡಿದ ಕುಂಚದಿಂದ ಚಿತ್ತಾರವ ಬರೆಸಿಕೊಳ್ಳುವುದು ಹಿಡಿದ ಕೈಯ ಹೊಣೆಗಾರಿಕೆ. ಊರಿಂದೂರಿಗೆ ಸಂಚರಿಸುವಾಗ ಹಣ ತುಸು ಜಾಸ್ತಿ ಇದ್ದರೆ ಭಯ. ಆಗ ಆ ಹಣವನ್ನು ಬ್ಯಾಂಕಿನಲ್ಲಿ ಮೆಯಿಲ್ ಟ್ರಾನ್ಸ್‌ಫರ್ (M. T.) ಮಾಡಿದರೆ ನಂತರ ನಿಶ್ಚಿಂತೆ. ನಮ್ಮ ಹಣವನ್ನು ಸುರಕ್ಷಿತವಾಗಿ ಬ್ಯಾಂಕ್, ವಿಶ್ವಕಲ್ಯಾಣ ಮಿಷನ್ ಖಾತೆಗೆ ತಾನೇ ಕಳಿಸುವುದೆಂಬ ಧೈರ್ಯ. ಹಾಗೆಯೇ ನಮ್ಮ ಜೀವನವನ್ನು ಬಸವ ಗುರುವೆಂಬ ಬ್ಯಾಂಕ್ ಅಧಿಕಾರಿಯ ಕೈಲಿ ಒಪ್ಪಿಸಿ ಎಂ. ಟಿ. ಮಾಡಿರುವುದರಿಂದ ಈಗ ನಿಶ್ಚಿಂತೆ, ಏಕೆಂದರೆ ಈ ಬದುಕನ್ನು ಪರಮಾತ್ಮನ ಹೃದಯ ಕಮಲವೆಂಬ ಮೂಲಖಾತೆಗೆ ಕಳಿಸುವ ಹೊಣೆಗಾರಿಕೆ. ಈಗ ಅವನದು.

ಈ ಸಮರ್ಪಣೆಯ ಭಾವದಿಂದಲೇ ಅಕ್ಕಮಹಾದೇವಿಯ ವಚನವೊಂದನ್ನು ಉದಾಹರಿಸಿ ಪ್ರತಿಜ್ಞೆಗೈಯುವೆನು.

ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ
ಪಾರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ !
. . . .
ಬಸವಣ್ಣ ಮೆಚ್ಚುವಂತೆ ಒಗೆತನವ ಮಾಡುವೆ
ಚನ್ನಮಲ್ಲಿಕಾರ್ಜುನನ ಕೈಹಿಡಿದು
ನಿಮ್ಮ ಮುಂಡೆಗೆ ಹೂವ ತಹೆನಲ್ಲದೆ ಹುಲ್ಲತಾರೆನವಧರಿಸಿ
. . . . ಶರಣು ಶರಣಾರ್ಥಿ !

ಮಾತೆ ಮಹಾದೇವಿ

* * *

ಮೈಸೂರು (ಹಿಂದಿನ ಸಂಚಿಕೆಯಿಂದ ಮುಂದುವರಿದುದು)

1.	ಶ್ರೀ ಆರ್. ಪುಟ್ಟಣ್ಣನವರ ಮಕ್ಕಳಾದ ಶ್ರೀ ಸದಾನಂದ, ಶ್ರೀ ಶಿವಶಂಕರಪ್ಪ, ಶ್ರೀ ಶಿವಾನಂದರು	೨೦೦೦–೦೦
2.	ಶ್ರೀಮತಿ ಪುಟ್ಟಸುಬ್ಬಮ್ಮ ಮೈಸೂರು	೫೦೦೦–೦೦
3.	ಶ್ರೀ ಹೊಸಕೋಟೆ ಗುರುಮಲ್ಲಪ್ಪ	೧೦೦೦–೦೦
4.	ಶ್ರೀಮತಿ ಯಶೋದ ರಾಮಶೇಷು	೧೦೦೦–೦೦
5.	ಶ್ರೀಮತಿ ಕಮಲಮ್ಮ ಮತ್ತು ಮಕ್ಕಳು	೧೦೦೦–೦೦

ಹೊಳೆನರಸೀಪುರ

6.	ಕೃಷ್ಣಪ್ಪ ಮತ್ತು ಸಹೋದರರು	೧೦೦೦–೦೦
	ಗುಪ್ತ ಕಾಣಿಕೆ	೨೦೦೦–೦೦
7.	ಎಸ್. ಎನ್. ನಂಜಪ್ಪ	೫೦೦–೦೦
8.	ಕುರುಹಿನ ಶೆಟ್ಟಿ ಸಮಾಜ	೧೦೦೦–೦೦
9.	ದೇವಾಂಗ ಸಮಾಜ	೧೦೦೦–೦೦
10.	ವೀರಶೈವ ಸಮಾಜ	೧೦೦೦–೦೦
11.	ಗೋರೂರು ನಾಗರಿಕರ ಸಾಮೂಹಿಕ ಕಾಣಿಕೆ	೬೫೦೦–೦೦

ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ
ಮೈಸೂರು ನಗರದಿಂದಾದ ಧನ ಸಹಾಯ

೧. ಕಾಣಿಕೆ	೮೦,೦೦೦-೦೦
೨. ಕಟ್ಟಡ ನಿಧಿ	೪೦,೦೦೦-೦೦
೩. ಪುಸ್ತಕ ನಿಧಿ	೩೪,೦೦೦-೦೦
೪. ಕಲ್ಯಾಣ ಕಿರಣ ನಿಧಿ	೧೦,೦೦೦-೦೦
೫. ಪಾತ್ರೆ, ಅಲ್ಮೈರಾ ಇತ್ಯಾದಿ ಸಾಮಾನು	೩,೦೦೦-೦೦
೬. ಬೆಳ್ಳಿ-ಬಂಗಾರ ಇತ್ಯಾದಿ ಸಾಮಾನು	೩,೦೦೦-೦೦
ಒಟ್ಟು	೧,೭೦,೦೦೦-೦೦
ಪ್ರವಚನ ವ್ಯವಸ್ಥೆ ಖರ್ಚು	೧೦,೦೦೦-೦೦
ವಿ.ಕ.ಮಿ ಸಂಸ್ಥೆಗೆ ಜಮಾ ಆದ ಮೊತ್ತ	೧,೬೦,೦೦೦-೦೦

ಕೃತಜ್ಞತಾಪೂರ್ವಕ ಆಶೀರ್ವಾದಗಳು

ಮೈಸೂರು ನಗರದ ಸದ್ಭಕ್ತ ಮಹಾಶಯರಿಗೆ ಬಸವ ಸ್ಮರಣಪೂರ್ವಕ ಶುಭಾಶೀರ್ವಾದ.

ಪೂಜ್ಯ ಮಾತಾಜಿಯವರ ಪ್ರವಚನಾಮೃತ ಕೇಳಿ ಸಂತೋಷಭರಿತರಾಗಿ, ಸ್ಫೂರ್ತಿಗೊಂಡು ಉದಾರವಾದ ಸಹಾಯ ನೀಡಿ, ನಾವು ಕೈಗೊಂಡಿರುವ ಮಹಾಮಣಿಹದಲ್ಲಿ ಸಹಕರಿಸಿದ್ದೀರಿ. ನಿಮ್ಮ ಕೊಡುಗೆಯ ಪ್ರತಿ ಅಂಶವೂ ಸಾರ್ಥಕತೆಗೆ ಸಲ್ಲುತ್ತದೆ. ಮಹೋನ್ನತ ಸಂಸ್ಥೆಯ ನಿರ್ಮಾಣಕ್ಕೆ ವಿನಿಯೋಗವಾಗುತ್ತದೆಂಬ ಭರವಸೆ ನೀಡುತ್ತೇವೆ. ತಮ್ಮ ಕೊಡುಗೆಯನ್ನು ವಿಶ್ವಕಲ್ಯಾಣ ಮಿಷನ್ ಸಂಸ್ಥೆಗೆ ಹೃತ್ಪೂರ್ವಕವಾಗಿ ಸ್ವೀಕರಿಸಿ ವಿಶ್ವಗುರು ಬಸವೇಶ್ವರರು ತಮಗೆ ಆಯುರಾರೋಗ್ಯ ಭಾಗ್ಯಗಳನ್ನು ದಯಪಾಲಿಸಲೆಂದು ಹೃದಯಪೂರ್ವಕವಾಗಿ ಹರಸುವೆವು.

ಚೇರ್ಮನ್, ವಿಶ್ವಕಲ್ಯಾಣ ಮಿಷನ್
ಮತ್ತು ಸಲಹಾ ಸಮಿತಿ
ಬೆಂಗಳೂರು—೧೦

* * *

ಒಬ್ಬ ವ್ಯಕ್ತಿಯ ಸ್ವಭಾವವನ್ನು ಆದರ್ಶಕ್ಕೆ ಅನುಗುಣವಾಗಿ ರೂಪಿಸುವಲ್ಲಿ ಮೂರು ಅಂಶಗಳು ಅಗತ್ಯ ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ: ಮೊದಲನೆಯದಾಗಿ ಸಂಸ್ಕಾರವಾಗಿ ರೂಪುಗೊಳ್ಳಬೇಕಾದ ಆದರ್ಶದ ನಿರಂತರ ಧ್ಯಾನ; ಎರಡನೆಯದಾಗಿ ಅದೇ ಆದರ್ಶದಲ್ಲಿ ನಿಷ್ಠೆಯುಳ್ಳ ಜನರ ನಿರಂತರ ಸಂಗ ಮತ್ತು ಕೊನೆಯದಾಗಿ ಆ ಆದರ್ಶಕ್ಕೆ ಅನುಗುಣವಾದ ದೈಹಿಕ ಚಟುವಟಿಕೆಗಳಲ್ಲಿ ನಿರತರಾಗಿರುವುದು.

ಸ್ಫುರಣ-ಕಿರಣ

ಸಂಗ್ರಹ : ಮಾತಾಜಿ

೧. ಪವರ್ ಟಿಲ್ಲರ್

ಒಂದು ದಿವಸ ಪೂಜ್ಯ ಗುರೂಜಿಯವರು ತಮ್ಮ ಶಿಷ್ಯರೋರ್ವರ ತೋಟವನ್ನು ನೋಡಲು ಹೋದಾಗ ಒಂದು "ಪವರ್ ಟಿಲ್ಲರ್" (power tiller) ತೆಂಗಿನ ಗಿಡಗಳ ಕೆಳಗೆ ಮತ್ತು ಮಧ್ಯದಲ್ಲೆಲ್ಲ ಉಳಿಮೆ ಮಾಡುವುದನ್ನು ನೋಡಿದರು. ಆಗ ಸ್ಫುರಿಸಿದ ಒಂದು ವಿಚಾರ ಹೀಗಿದೆ. 'ಕಮ್ಯುನಿಸಮ್' ಎಂದರೆ ಬುಲ್‌ಡೋಜರ್ ಇದ್ದಂತೆ, ಬಸವಣ್ಣನವರ ಅಧ್ಯಾತ್ಮ ಸಮತಾವಾದ ಎಂದರೆ ಪವರ್ ಟಿಲ್ಲರ್ ಇದ್ದಂತೆ. ಬುಲ್‌ಡೋಜರ್ ಎಲ್ಲವನ್ನು ಒಟ್ಟಾರೆ ಸಮಮಾಡುವುದು. ಪವರ್ ಟಿಲ್ಲರ್ ಯಾವುದು ಅನವಶ್ಯವೋ ಅದನ್ನು ತೆಗೆಯುವುದು ಮತ್ತು ಎಲ್ಲಿ ಅವಶ್ಯವೋ ಅಲ್ಲಿ ಉಳುಮೆ ಮಾಡುವುದು. ಅದೇ ರೀತಿ ಕಮ್ಯುನಿಸಮ್ ಮೂಢನಂಬಿಕೆಯೊಡನೆ ಧರ್ಮವನ್ನು ನಿರ್ಮೂಲ ಮಾಡುವುದು. ಬಸವಣ್ಣನವರ ಸಮತಾವಾದವು ಧರ್ಮವನ್ನು ಉಳಿಸಿಕೊಂಡು ಮೂಢನಂಬಿಕೆ—ಕಂದಾಚಾರಗಳನ್ನು ಮಾತ್ರ ತೆಗೆದುಹಾಕುತ್ತದೆ.

೨. ಟ್ಯಾಂಕಿನಲ್ಲಿ ಇದ್ದುದು ನಲ್ಲಿಯಲ್ಲಿ

ಒಂದು ದಿವಸ ನೀರು ಕೆಂಪಾಗಿ ನಲ್ಲಿಯಲ್ಲಿ ಬರುತ್ತಿತ್ತು. "ಓವರ್‌ಹೆಡ್ ಟ್ಯಾಂಕಿನಲ್ಲಿ ಎಂಥ ನೀರು ಇರುವದೋ ಅಂಥ ನೀರು ನಲ್ಲಿಯಲ್ಲಿ ಬರುತ್ತದೆಯಷ್ಟೆ?" ಎಂದು ಸ್ವಾಮೀಜಿಯವರು ಕೇಳಿದರು; ಆ ನಂತರ ಹೇಳಿದರು: 'ಮೇಲೆ ಪೆಟ್ರೋಲ್ ತುಂಬಿದ್ದರೆ ನಲ್ಲಿಯಲ್ಲಿ ಪೆಟ್ರೋಲ್ ಬರುತ್ತದೆ; ಮೇಲೆ ಹಾಲು ತುಂಬಿದ್ದರೆ ನಲ್ಲಿಯಲ್ಲಿ ಹಾಲು ಬರುತ್ತದೆ.' ಅದೇ ರೀತಿ ಗುರುವಿನಲ್ಲಿ ಜ್ಞಾನಶಕ್ತಿ ಅಧಿಕವಿದ್ದರೆ ಅವನು ಜ್ಞಾನವನ್ನು ನೀಡುವನು, ತಪಸ್‌ಶಕ್ತಿ ಅಧಿಕವಿದ್ದರೆ ಅದನ್ನು ನೀಡುವನು. ಭಕ್ತಿಭಾವ ಅಧಿಕವಿದ್ದರೆ ಅದೇ ಧಾಟಿಯಲ್ಲೇ ಶಿಷ್ಯನನ್ನು ಅನುಗ್ರಹಿಸುವನು. ಗುರುವಿನಲ್ಲಿ ಯಾವ ಶಕ್ತಿ ವರ್ಧಿಸಿರುವದೋ ಅದನ್ನು ಶಿಷ್ಯನಿಗೆ ಧಾರೆ ಎರೆಯುವನು. ಅಂತೆಯೇ ಷಣ್ಮುಖ ಸ್ವಾಮಿಗಳು ಹೇಳುವರು :

ಬೀಜದಿಂದ ಹುಟ್ಟಿದ ವೃಕ್ಷವು ಬೀಜವ ಹೋಲುವಂತೆ
ತಾಯಿಯಿಂದ ಹುಟ್ಟಿದ ಮಕ್ಕಳು ತಾಯಿಯ ಹೋಲುವಂತೆ
ಧಾನ್ಯಂಗಳಿಂದ ಬೆಳೆದ ಬೆಳಸು ಧಾನ್ಯಂಗಳ ಹೋಲುವಂತೆ
ಗುರುವಿನಿಂದ ಹುಟ್ಟಿದ ಶಿಷ್ಯನು ಗುರುರೂಪವು....

೩. ಮೃಗಾಲಯದಲ್ಲಿ ತರಬೇತಿಗೊಂಡ ಹುಲಿ

ಸುಧಾ ವಾರಪತ್ರಿಕೆಯಲ್ಲಿ ಹುಲಿಗಳ ಕ್ಷೀಣಿಸುವ ಸಂತತಿಯ ಬಗ್ಗೆ ಒಂದು ಲೇಖನ ಓದುತ್ತಿದ್ದೆ. ಆಗ ಮೈಸೂರಿನ ಮೃಗಾಲಯದ ಮುಖ್ಯಾಧಿಕಾರಿಗಳ ಹೇಳಿಕೆಯೊಂದು ನನ್ನನ್ನು ತುಂಬಾ ಆಕರ್ಷಿಸಿತು. ಮೃಗಾಲಯದಲ್ಲಿ ಹುಟ್ಟಿ ಅಲ್ಲೇ ಬೆಳೆದಂತಹ ಕ್ರೂರ ಪ್ರಾಣಿಗಳಾದ ಹುಲಿ ಮರಿಗಳಿಗೆ, ನಿಸರ್ಗದಲ್ಲಿ ನೇರವಾಗಿ ಬಿಟ್ಟಾಗ ಪ್ರಾಣಿಗಳನ್ನು ಬೇಟೆಯಾಡಲು ಬರದು. ಮೃಗಾಲಯದಲ್ಲಿ ಮೇಲ್ವಿಚಾರಕರು ತಾವಾಗಿ ಹಾಕಿದ ಮಾಂಸಾಹಾರವನ್ನು ಮಾತ್ರ ಸ್ವೀಕರಿಸಿ ಅಭ್ಯಾಸವಿರುವ ಹುಲಿ ಮರಿಗಳಿಗೆ ನಿಸರ್ಗದ ಪ್ರಾಣಿಗಳನ್ನು ಅವುಗಳ ಪ್ರಾಕೃತಿಕ ಪರಿಸರದಲ್ಲಿ ಬೇಟೆಯಾಡಲು ಬರದು. ಕಾರಣವೆಂದರೆ ಕ್ರೂರ ಪ್ರಾಣಿಗಳೂ ಸಾತ್ವೀಕರಣಗೊಂಡಿರುತ್ತವೆ. ಅದೇ ರೀತಿ ಒಮ್ಮೆ ನೈತಿಕವಾದ ಮತ್ತು ಅಧ್ಯಾತ್ಮಿಕವಾದ ತರಬೇತಿ ಸಿಕ್ಕಿದುದೇ ಆದರೆ ಮಾನವನು ಪ್ರಾಮಾಣಿಕವಾದ ಪಥವನ್ನು ಬಿಟ್ಟು ಸರಿಯನು. ಯಾವ ರೀತಿಯಲ್ಲಿ ತನಗಾಗಿ ಹಾಕಿದ ಆಹಾರವನ್ನೇ ಸ್ವೀಕರಿಸುತ್ತದೆಯೋ ಹಾಗೆ ಪ್ರಾಮಾಣಿಕ ಪ್ರಜ್ಞೆ ಮತ್ತು ರಾಷ್ಟ್ರಪ್ರಜ್ಞೆ ಬೆಳೆಸಿಕೊಂಡವನು ತನ್ನ ದುಡಿತದ ಪ್ರತಿಫಲ, ಸಂಬಳ ಮಾತ್ರ ಸ್ವೀಕರಿಸುವನೇ ವಿನಾ ಲಂಚದ ಬೇಟೆಯಾಡನು. ಹೇಗೆ ಸಾತ್ವಿಕಗೊಂಡ ಹುಲಿಗಳಿಗೆ ಬೇಟೆಯಾಡುವುದನ್ನು ಕಲಿಸಬೇಕಾಗುತ್ತದೋ ಹಾಗೆ ಸಾತ್ವಿಕ, ಪ್ರಾಮಾಣಿಕರಿಗೆ ಲಂಚ, ವಂಚನೆಗಳ ಬೇಟೆಯಾಡುವುದನ್ನು ಪ್ರಯಾಸಪಟ್ಟು ಕಲಿಸಬೇಕಾಗುತ್ತದೆ.

೪. ಕಲ್ಲು, ಮುಳ್ಳು ಅಳಿದ ಹಾದಿ

ಮೈಸೂರಿನಲ್ಲಿದ್ದಾಗ ನಮ್ಮಲ್ಲಿ ಕೆಲವರು ಮುಂಜಾನೆ ವಾಯುಸೇವನೆಗೆ ಹೋಗುತ್ತಿದ್ದೆವು. ನಾವು ತುಳಿದ ದಾರಿಯಲ್ಲಿ ಮೊದಲು ಬೇರಾರು ಓಡಾಡಿರಲಿಲ್ಲವೆಂದು ಕಾಣುತ್ತದೆ. ಆದರಿಂದ ಅಲ್ಲಿ ಹುಲ್ಲು ದಟ್ಟವಾಗಿ ಬೆಳೆದಿತ್ತು. ಪ್ರತಿದಿನ ನಾವು ಆ ದಾರಿಯಲ್ಲಿ ಹೋಗುತ್ತಿದ್ದುದರಿಂದ ಕ್ರಮೇಣ ಆ ದಾರಿಯಲ್ಲಿ ಹುಲ್ಲು ಬೆಳೆದಿತ್ತೇ ಎನ್ನುವಷ್ಟರ ಮಟ್ಟಿಗೆ ಮಣ್ಣು ನಿಚ್ಚಳವಾಗಿ ಕಾಣುತ್ತಿತ್ತು. ಇದೇ ವಿಷಯವನ್ನು ಮೆಲಕು ಹಾಕುತ್ತಿದ್ದಾಗ ಒಂದು ವಿಚಾರ ಸ್ಫುರಣವಾಯಿತು. ಆಧ್ಯಾತ್ಮಜೀವಿಗಳು ಪ್ರತಿನಿತ್ಯ, ಪ್ರತಿಕ್ಷಣವೂ ಮಾಡುವ ಶಿವಚಿಂತನೆ, ಶಿವಧ್ಯಾನ, ಪವಿತ್ರ ಕಾಯಕದಿಂದ ಅವರ ಮನದ ಬಯಲಿನಲ್ಲಿ ಬೆಳೆದಿರುವ ಅರಿಷಡ್ವರ್ಗಗಳ 'ಹುಲ್ಲು' ಕ್ರಮೇಣವಾಗಿ ಕ್ಷೀಣಿಸುತ್ತದೆ. ಸಾಧನೆಯಿಂದ ಮಾತ್ರ ಇದು ಸಾಧ್ಯ. ಮಧ್ಯೆ ತಡೆಯುಂಟಾದರೆ ಪುನಃ ಅರಿಷಡ್ವರ್ಗ, ಅಷ್ಟಮದಗಜಗಳು ತಲೆಯಿಕ್ಕುತ್ತವೆ. ಆದ್ದರಿಂದ ಬಾಳನ್ನೇ ತಪಸ್ಸಾಗಿ ಪರಿವರ್ತಿಸಿಕೊಳ್ಳಲು, ಅನುದಿನ ಅನುಕ್ಷಣಗಳ ಸಾಧನೆ ಅತ್ಯವಶ್ಯ ಮತ್ತು ಇದು ಒಂದೇ ದಿನದಲ್ಲಿ ಅಥವಾ ಕೆಲವೇ ದಿನಗಳಲ್ಲಿ ನಡೆಯುವ ಕ್ರಾಂತಿಯ ಹಾಗಲ್ಲ. ಹುಲ್ಲು

ಹೇಗೆ ಕ್ರಮೇಣವಾಗಿ ಮಾಯವಾಗುವುದೋ ಅದೇ ರೀತಿ ಮನದ ಬಯಲಲ್ಲಿ ಬೆಳೆಯುವ 'ಹುಲ್ಲನ್ನು' ತೊಡೆಯಲು, ಕಾಲವು ಬೇಕಾಗುತ್ತದೆ.

೫. ಗುರುವಾಕ್ಯದಲ್ಲಿ ಶ್ರದ್ಧೆ

ಒಂದು ದಿನ ಸುಪ್ರಭಾತದಲ್ಲಿ ಹೇಮಾವತಿ ಜಲಾಶಯದ ಬಳಿಗೆ ಹವಾಸೇವನೆಗೆ ಹೋಗಿದ್ದೆವು. ಅಂದು ಇಬ್ಬನಿ ಬೀಳುತ್ತಿದ್ದು ಮಂಜಿನ ತೆರೆ ಗಾಢವಾಗಿ ಅಣೆಕಟ್ಟು ಕಾಣುತ್ತಲೇ ಇರಲಿಲ್ಲ. ಆಗ ಉಮಾದೇವಿ ಹೇಳಿದಳು: "ಅಲ್ಲಿ ಅಣೆಕಟ್ಟಿದೆ ಎಂದು ಹೊಸಬರಿಗೆ ಹೇಳಿದರೆ ನಂಬಲೇ ಆರರು. ಏಕೆಂದರೆ ಮಂಜಿನ ಪರದೆ ಕವಿದಿರುತ್ತದೆ. ನೋಡಿಬಂದವರೋರ್ವರು ಕರೆದುಕೊಂಡು ಹೋಗುತ್ತಾರೆ. ಆಗ ನೋಡದವರು, ನಂಬಿಯೇ ಮುಂದೆ ಹೋದಾಗ ಅಣೆಕಟ್ಟು ನೋಡಲು ಸಾಧ್ಯ." ಅದೇ ರೀತಿ 'ದೇವ ನಿದ್ದಾನೆ, ದೈವಾನುಭವ ಪರಮ ಸತ್ಯ' ಎಂಬುದರಲ್ಲಿ ಅನುಭಾವಿಗೆ ಅಚಲ ವಿಶ್ವಾಸ. ಅವನು ಕಂಡು, ಉಂಡು ಹೇಳುತ್ತಿರುತ್ತಾನೆ. ಆಗ ಸಾಮಾನ್ಯ ಮನುಷ್ಯ ತನಗೆ ಕಾಣದೆಂದು ನಿರಾಕರಿಸುತ್ತಾನೆ. ಕಾರಣವೆಂದರೆ ಅಜ್ಞಾನದ ಮಂಜಿನ ಪೊರೆ ಕವಿದಿರುತ್ತದೆ. ಗುರುಮಾತ್ರ ದೃಢವಾಗಿ ಹೇಳುತ್ತಾನೆ: "ಆ ಅಜ್ಞಾನದ ಮಂಜಿನ ಪೊರೆಯಾಚೆ; ಪರಮಾತ್ಮ ತತ್ತ್ವದ ಅಣೆಕಟ್ಟಿದೆ...." ಗುರುವಿನ ಮಾತಿನಲ್ಲಿ ಶ್ರದ್ಧೆ ಇರಿಸಿ, ಸಾಧನಾ ಪಥದಲ್ಲಿ ಹಿಂಬಾಲಿಸಿದಾಗ ಮಾತ್ರ ಪರಮಾತ್ಮಾನುಭೂತಿ ಎಂಬ ಅಣೆಕಟ್ಟು ಕಾಣಲು ಸಾಧ್ಯ.

೬. ಘಟವಿದ್ದಲ್ಲಿ ಮಠವೋ, ಮಠವಿದ್ದಲ್ಲಿ ಘಟವೋ?

ಆಶ್ರಮದ ಓರ್ವ ಸಾಧಕರಾದ ಸ್ವಾಮಿ ಸದಾನಂದರು ಒಂದು ದಿನ ಹಳೇಬೀಡು, ಬೇಲೂರು ನೋಡಲು ಹೋಗಿದ್ದರು. ಅಲ್ಲಿ ಒಂದು ಬೃಹದಾಕಾರದ ಬಸವನ ಮೂರ್ತಿ ಆ ಮೂರ್ತಿಯನ್ನು ಮೊದಲು ಕಟೆದು, ನಂತರ ಅದಕ್ಕೆ ಗುಡಿ ಕಟ್ಟಿದ್ದರು. ಆಗ ಅದನ್ನು ನೋಡಿ ಸದಾನಂದರಿಗೆ ಒಂದು ವಿಚಾರ ಸ್ಫುರಿಸಿತು:

"ಯಾವಾಗಲೂ ಮಠ ಕಟ್ಟಿ ಘಟಕ್ಕಾಗಿ ಹುಡುಕಬಾರದು. ಅಮೂಲ್ಯ ಘಟ ದೊರೆತಾಗ ಮಠ ಕಟ್ಟಬೇಕು." ಮೊದಲು ಗುಡಿಕಟ್ಟಿ ನಂತರ ವಿಗ್ರಹವಿರಿಸಿದಾಗ ಸಣ್ಣ ಮೂರ್ತಿಗಳಷ್ಟೇ ಪೀಠಸ್ಥವಾಗಬಲ್ಲುವು. ದೊಡ್ಡ ವಿಗ್ರಹಗಳಿದ್ದಾಗ ನಂತರವೇ ಗುಡಿ ಕಟ್ಟಬೇಕಾಗುತ್ತದೆ. ಅದೇ ರೀತಿ ಮಠಕ್ಕೋರ್ವ ಅಧಿಕಾರಿ ಎಂದು ಅರಸಿದಾಗ ಸಿಕ್ಕುವ ಮೂರ್ತಿಯೇ ಬೇರೆ; ಸ್ವಯಂಪ್ರೇರಣೆಯಿಂದ ಅಧ್ಯಾತ್ಮ ಸ್ವೀಕರಿಸಿ ತ್ಯಾಗಿಯಾಗಿ ಬಂದಾಗ ಲಭ್ಯವಾಗುವ ಮೂರ್ತಿಯೇ ಬೇರೆ. ಅಂತೆಯೇ ಹೇಳಿಲ್ಲವೆ ಅಕ್ಕಮಹಾದೇವಿ, "ಅಯ್ಯಾ ನಿಮ್ಮ ಶರಣರು ಪಾದವಿಟ್ಟುದು ಅವಿಮುಕ್ತ ಕ್ಷೇತ್ರ" ಎಂದು.

೭. ದೈವಭಕ್ತಿಯ ಷಟರ್

ಡಾ॥ ಭಾರತಿ, ಎಂ.ಬಿ.ಬಿ.ಎಸ್

ಅಂದು ಮೈಸೂರಿನಲ್ಲಿ ಪೂಜ್ಯ ಮಾತಾಜಿಯವರ ಪ್ರವಚನ ಸುಧೆಯನ್ನು ಸವಿದು ಅದೇ ಗುಂಗಿನಲ್ಲಿದ್ದೆ. 'ದೇವರಿದ್ದಾನೆಯೇ ?' ಎಂಬುದು ಅಂದಿನ ಪ್ರವಚನದ ವಿಷಯ. ಸ್ವಭಾವತಃ ದೈವವಿಶ್ವಾಸಿಯಾದ ನನಗೆ ಅಂದಿನ ಪ್ರವಚನದಿಂದ ಮನಸ್ಸು ಹೃದಯ ಗಳೆರಡೂ ತುಂಬಿ ಮೂಕಳಾಗಿದ್ದೆ. ವೃತ್ತಿಯ ಕರೆಗೆ ಓಗೊಟ್ಟು ಬೆಳಗ್ಗೆ ನನ್ನ ಕಾರ್ಯ ದೇಗುಲಕ್ಕೆ ಹೊರಟಿದ್ದೆ.

ಬಸ್ಸಿನಲ್ಲಿ ಕಿಟಕಿಯ ಪಕ್ಕದಲ್ಲಿ ಕುಳಿತಿದ್ದೆ. ಗಾಳಿ ಒಂದೇ ಸಮನೆ ಬಡಿದು ಕಿವಿಗೆ ಅಪ್ಪಳಿಸುತ್ತಿತ್ತು. ತಲೆಗೊಂದು ಸ್ಕಾರ್ಫ್ ಕಟ್ಟಿದ್ದೆ. ಆದರೂ ಗಾಳಿಯ ಬಡಿತ ತಡೆಯಲು ಅಸಾಧ್ಯವಾಗಿತ್ತು. ಕಿಟಕಿಗೆ ಹಾಕಿದ ಶಟರ್ ಮುಚ್ಚಿದಾಗ ಗಾಳಿಯ ಹೊಡೆತ ನಿಂತು ಆರಾಮವಾಗಿ ಕುಳಿತುಕೊಳ್ಳುವಂತಾಯಿತು.

ಆಗೊಂದು ವಿಚಾರ ನನಗೆ ಸ್ಫುರಿಸಿತು. ಜೀವನವೆಂಬ ಬಸ್ಸಿನಲ್ಲಿ ನಾವು ಪಯಣಿಸು ವಾಗ ಕೆಲವೊಮ್ಮೆ ವಿಷಯ ವಾಸನೆಗಳ ಗಾಳಿ ಬೀಸಿ, ಮೋಸ, ಕಪಟ, ಅನ್ಯಾಯ ಗಳೆಂಬ ಧೂಳು ತರಗೆಲೆಗಳು ಬಡಿದು ನಮ್ಮ ಮನಸ್ಸನ್ನು ವಿವಿಧ ದಿಕ್ಕಿನಲ್ಲಿ ಸೆಳೆಯು ತ್ತವೆ. ಸದೃಢದೈವಭಕ್ತಿ, ಅಚಲ ವಿಶ್ವಾಸಗಳ ಸ್ಕಾರ್ಫ್ ಕಟ್ಟಿಕೊಂಡು ಸತ್ಯ, ಪ್ರಾಮಾಣಿ ಕತೆ, ಆತ್ಮವಿಶ್ವಾಸಗಳ ತೆರೆಯನ್ನು ಹಾಕಿದಾಗ ನಮ್ಮ ಪ್ರಯಾಣ ಸುಖಕರವಾದೀತು. ಆರೋಗ್ಯಕರವಾಗಿ ಶಾಂತಿ ನೆಮ್ಮದಿಯ ಗುರಿ ಮುಟ್ಟಬಹುದು.

೮. ಗುರು ಭವರೋಗವೈದ್ಯ

ಡಾ॥ ಭಾರತಿ, ಎಂ.ಬಿ.ಬಿ.ಎಸ್

ವಿಪರೀತ ವಾಂತಿಭೇದಿಗಳ ದೆಸೆಯಿಂದ ಮೈಯಲ್ಲಿ ತ್ರಾಣವಿಲ್ಲದೆ ಸುಸ್ತಾಗಿ ಬಳಲಿದ್ದ ವ್ಯಕ್ತಿ, ಗಾಡಿಯ ಮೇಲೆ ಬಂದು ಮೂರು ಜನರ ಆಸರೆಪಡೆದು ಆಸ್ಪತ್ರೆಯ ಒಳಗೆ ಅಡಿ ಇಟ್ಟನು. ಪರೀಕ್ಷಿಸಿ ೩-೪ ಶೀಸೆ ಗ್ಲುಕೋಸ್ ಸಲೈನಗಳನ್ನೂ ರಕ್ತದ ಮೂಲಕ ಕೊಟ್ಟನಂತರ ವ್ಯಕ್ತಿ ಚೇತರಿಸಿಕೊಂಡನು. ಮಾತನಾಡುವ ಶಕ್ತಿ ಬಂತು. ಜೊತೆಗೆ ಕೊಟ್ಟ ಔಷಧಿಗಳಿಂದ ವಾಂತಿಭೇದಿಗಳೂ ಹತೋಟಿಗೆ ಬಂದು ಮೂರನೆಯ ದಿನ ವ್ಯಕ್ತಿ ಯಾರ ಆಸರೆಯೂ ಇಲ್ಲದೇ ನಗುತ್ತ ವಂದಿಸಿ ಮನೆಗೆ ಹೊರಟಾಗ ನನಗೊಂದು ವಿಚಾರ ಮನದಲ್ಲಿ ಮೂಡಿತು.

ಸಮಾಜದಲ್ಲಿನ ಜನತೆ ಹಲವು ವೇಳೆ ನೀತಿ, ನಿಷ್ಠೆ, ಪ್ರಾಮಾಣಿಕತೆ, ದೈವನಂಬಿಕೆ ಗಳನ್ನು ಸಂಪೂರ್ಣ ಕಳೆದುಕೊಂಡು ನಿರ್ಜೀವರೆನಿಸಿದಾಗ, ನಿಸ್ಸತ್ವರಾದಾಗ ಧರ್ಮ ಗುರು

ಗಳು ಭವರೋಗ ವೈದ್ಯರಾಗಿ ಪ್ರವಚನ ಬೋಧಿಸಿ ಆಧ್ಯಾತ್ಮಿಕ ಸಾಹಿತ್ಯಗಳ ಮೂಲಕ ನಿರ್ಜೀವ ಸಮಾಜವನ್ನು ಸಜೀವ ಸಮಾಜವನ್ನಾಗಿ, ನಿಸ್ಸತ್ವ ಜನತೆಯನ್ನು ಸತ್ವಶಾಲೀ ಜನಾಂಗವನ್ನಾಗಿ, ದಾನವರಾಗ ಬಲ್ಲವರನ್ನು ಮಾನವರನ್ನಾಗಿ ಮಾಡುತ್ತಾರೆ. ಇದಕ್ಕೆ ಧರ್ಮಗುರುಗಳಿಗೆ ಅವರ ಔಷಧಿಯ ಬಿಲ್-ಹಣ ಕಟ್ಟಬೇಕು. ಇದು ಸಾಧ್ಯ ವಾಗದಿದ್ದರೆ ಅವರ ನುಡಿಯನ್ನು ಅನುಸರಿಸಿ ನಡೆಯುವ ಕೃತಜ್ಞತೆಯಾದರೂ ಬೇಕು. ಕೃತಜ್ಞತೆ ಸಲ್ಲಿಸುವ ಸಂಸ್ಕಾರವಿಲ್ಲದಿದ್ದರೆ ಇರಲಿ, ಆದರೆ ಕೃತಘ್ನರಾಗಿಯಂತೂ ವರ್ತಿಸ ಬಾರದು.

* * *

ಜನವರಿ ತಿಂಗಳಲ್ಲಿ ೧೫೧ ರೂ. ಸಲ್ಲಿಸಿ 'ಕಲ್ಯಾಣ ಕಿರಣ' ಆಜೀವ ಸದಸ್ಯರಾಗಿರುವವರು

೧. ಕೆ. ಗುರುಸ್ವಾಮಿ, ಮಹದೇಶ್ವರ ಗಿರಿ.
೨. ಎಸ್. ಜಿ. ರಾಜೇಶ್ವರಿ, ತಿಪಟೂರು.
೩. ಹನುಮನಗೌಡ ಬಸವನಗೌಡ, ಹೊನ್ನಳ್ಳಿ, ಲಿಂಗಸುಗೂರು.
೪. ಶರಣಪ್ಪ ಗುರುಪಾದಪ್ಪ, ಮುಗಲೆ, ಲಿಂಗಸುಗೂರು.
೫. ಬಸಪ್ಪ, ಲಿಂಗಸುಗೂರು.
೬. ಬಸವರಾಜಪ್ಪ, ಮುದಗಲ್.
೭. ವೆಂಕಟಾಚಲಪತಿ ಶೆಟ್ಟಿ, ಮೈಸೂರು.
೮. ಟಿ. ಎಸ್. ಶಾಂತ, ತಿಪಟೂರು.
೯. ಕೆ. ಬಿ. ಚಂದ್ರಮೌಳಿ, ಮೈಸೂರು.
೧೦. ವೈ. ಪಿ. ಬಸವರಾಜಪ್ಪ, ಮೈಸೂರು.
೧೧. ಎನ್. ಬಸಪ್ಪಸ್ವಾಮಿ, ಮೈಸೂರು.
೧೨. ರಾಧಾನಾಥ್, ಮೈಸೂರು.
೧೩. ಎಂ. ಸಿ. ಪಾರ್ವತಮ್ಮ, ಮೈಸೂರು.
೧೪. ಎ. ಎಸ್. ವೆಂಕಟರಮಣಶೆಟ್ಟಿ, ಹೊಳೆನರಸೀಪುರ.
೧೫. ಎ. ಜನಾರ್ದನಶೆಟ್ಟಿ, ಹೊಳೆನರಸೀಪುರ.
೧೬. ಬಿ. ಎಸ್. ಜನಾರ್ದನ್, ಎಸ್.ಈ., ಗೋರೂರು.

ಸಮಸ್ಯೆ! ಸಮಾಧಾನ!

ಸಂಗ್ರಾಮ ಕಾಜಿ, ಹಾರುರಗೇರಿ

★ ಶರಣರಿಗೂ ಮತ್ತು ದೇವರಿಗೂ ಇರುವ ವ್ಯತ್ಯಾಸವೇನು ?

* ದೇವರು ಎಂದರೆ ಪೂಜ್ಯ ವಸ್ತು, ಶರಣನು ಪೂಜಕ. ದೇವರು ಮುಕ್ತಿದಾತ, ಶರಣನು ಮುಕ್ತಾತ್ಮ. ಪರಾತ್ಪರ ಪರಮಾತ್ಮನ ಚರಣಾಂಬುಜಕ್ಕೆ ಶರಣಾದವನೇ ಶರಣ.

ನಾಗಯ್ಯಸ್ವಾಮಿ, ಹಲಬರ್ಗಾ

★ ಕ್ರೈಸ್ತ, ಇಸ್ಲಾಂನಂತಹ ಅನೇಕ ಧರ್ಮಗಳು ಬ್ರಹ್ಮಕುಮಾರಿ ಇತ್ಯಾದಿ ಅನೇಕ ಪಂಥಗಳು ಪ್ರಚಾರವಾಗುತ್ತಿವೆ. ಲಿಂಗಾಯತ ಧರ್ಮ ಏಕೆ ಪ್ರಚಾರವಾಗುತ್ತಿಲ್ಲ ?

* ಬರುವವರನ್ನುಸ್ವಾಗತಿಸುವ, ಬಂದವರನ್ನು ಇಂಬಿಟ್ಟುಕೊಳ್ಳುವ ಸೌಜನ್ಯವಿಲ್ಲದಿದ್ದರೆ, ಆಧ್ಯಾತ್ಮ ಪ್ರವೃತ್ತಿ ಇಲ್ಲದೆ ಕೇವಲ ಜಾತಿಪ್ರವೃತ್ತಿ ಬೆಳೆಸಿಕೊಂಡರೆ ಧರ್ಮಪ್ರಚಾರವಾಗುವುದಿಲ್ಲ. ಧರ್ಮಕ್ಕೆ ಜೀವಂತಿಕೆ ಕೊಡುವುದು ಸೌಹಾರ್ದತೆ ಮತ್ತು ವೈಶಾಲ್ಯ.

ಎಂ. ಎಚ್. ತಿಪ್ಪೇಸ್ವಾಮಿ

★ ಭಾವ ಸಮಾಧಿ ಎಂದರೇನು ? ಅದನ್ನು ಸಾಧಿಸುವ ಬಗೆ ಹೇಗೆ ?

* ಯಾವುದಾದರೊಂದು ವಸ್ತುವಿನಲ್ಲಿ, ವಿಷಯದಲ್ಲಿ ತಾದಾತ್ಮ್ಯವಾಗಿ ಒಂದಾಗುವ ತನ್ಮಯತೆ. ಉದಾಹರಣೆಗೆ ಸಂಗೀತ, ಪ್ರವಚನ, ನಿಸರ್ಗದಲ್ಲಿ ತನ್ಮಯತೆ. ಅಂತರ್ಮುಖತೆ, ಚಿಂತನೆಗಳಿಂದ ಇದನ್ನು ಸಾಧಿಸಲು ಸಾಧ್ಯ.

ಶಾರದಾಸುತ, ನಿಡ್ತಾ

★ 'ವಿಶ್ವಕಲ್ಯಾಣ ಮಿಷನ್' ಎಂದು ಸಂಸ್ಥೆಗೆ ಹೆಸರಿಟ್ಟಿರುವಿರಿ. ಇಂಗ್ಲಿಷ್ ಪದವನ್ನೇಕೆ ಬಳಸಿದ್ದೀರಿ ?

* ಮಿಷನ್ ಎಂದರೆ ಧರ್ಮಪ್ರಸಾರಕ ಸಂಸ್ಥೆ, ವಿಶಿಷ್ಟ ಗುರಿಯನ್ನು ಇರಿಸಿಕೊಂಡಿರುವದು ಎಂದು ಅರ್ಥ. ಮಂದಿರ, ಮಠ, ಆಶ್ರಮ ಇವಾವೂ ಆ ತತ್ತ್ವವನ್ನು ವ್ಯಕ್ತಪಡಿಸಲಾರವು. ಸನ್ಯಾಸಿಗಳು ವಾಸಿಸುವ ಸಂಸ್ಥೆ, ದೇವಾಲಯ ಇತ್ಯಾದಿ ಅರ್ಥಗಳನ್ನು ಉಳಿದ ಶಬ್ದಗಳು ಕೊಡಬಲ್ಲವು. ಭಾರತೀಯರ 'ಯೋಗ' ಎಂಬ ಪದಕ್ಕೆ ತತ್ಸಮಾನ ಪದವು ಸಿಕ್ಕುತ್ತಿಲ್ಲವಾದ ಕಾರಣ ಆಂಗ್ಲ ಶಬ್ದಕೋಶಕಾರರು ಆ ಪದವನ್ನು ಯಥಾ ರೂಪದಲ್ಲಿ ತೆಗೆದುಕೊಂಡಿದ್ದಾರೆಂದ ಮೇಲೆ, ನಾವೇಕೆ ಇಂಗ್ಲೀಷ್‌ಭಾಷೆ ಪದವನ್ನು ಕನ್ನಡೀಕರಿಸಬಾರದು ?

[೫೬ನೇ ಪುಟದಲ್ಲಿ ಮುಂದುವರಿದಿದೆ]

ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸುಜನಾ

ಸಂಸಾರನರವಿಂಧ್ಯದಲ್ಲಿ, ಸಹಸ್ರಾರು ಕ್ರೂರ ಮೃಗಗಳ ನಡುವೆ ಸಿಲುಕಿದ ಮುಗ್ಧ ಶುಕಮನಸ್ಸು ತನ್ನನ್ನು ಅವುಗಳಿಂದ ಪಾರುಮಾಡಿ ಪಂಜರದಲ್ಲಿ—ಭಕ್ತಿಪಂಜರದಲ್ಲಿ ರಕ್ಷಿಸಬೇಕೆಂದು ಭಗವಂತನನ್ನು ಬೇಡುತ್ತದೆ. ಪಂಜರವೆ ಮಂಜರವಾಗಬಹುದಲ್ಲ !* ಅದಕ್ಕೆ ಅದು ಭಕ್ತಿಯ ಪಂಜರವಾಗಬೇಕು. ಮಾಯಾಮಂಜರ—ತನ್ನೊಳಗಿನ ಅವಿದ್ಯಾಮಂಜರ—ಕೊಲ್ಲುವುದಾದರೆ ಪಂಜರವೇನು ಮಾಡೀತು ? ಆದ್ದರಿಂದ ಅದಕ್ಕೆ ಕಲಿಸುವುದು ಶಿವಮಂತ್ರವನ್ನು, ಮಾಯಾಹರ ಮಂತ್ರವನ್ನು ಹೀಗಿರುವಾಗ, ಭಕ್ತಿಯೆ ಪಂಜರವಾಗಿರುವಾಗ ನರವಿಂಧ್ಯದಲ್ಲೂ ಯಾವ ಮರಣಭೀತಿಯೂ ಇಲ್ಲದಿರಬಹುದು. ಹೀಗೆ ಇಲ್ಲಿಯ ರೂಪಕವೇ ಬೇರೆ, ಅನುಭವವೇ ಬೇರೆ, ಹಾಗೆಯೇ ಶಕ್ತಿಯೂ ಬೇರೆ.

ಪಕ್ಷಿಗಳಲ್ಲಿ ಗಿಳಿ ಒಂದು ಬಗೆಯ ರೂಪಕವಾದರೆ ಗುಬ್ಬಚ್ಚಿ, ಆ ಪುಟ್ಟ ಸಂಸಾರಿ, ಒಂದು ಬಗೆಯ ರೂಪಕವಾಗುತ್ತದೆ. ನಾವು ಇಷ್ಟೆಲ್ಲ ಸಂಸಾರ ಮೋಹವನ್ನು ಬೆಳಸಿಕೊಂಡಿರುವೆನಲ್ಲ ಏನು ಕಾರಣವಾಗಿ ? ಅವರು ನನ್ನವರು ಇವರು ನನ್ನವರು, ಅದು ನನ್ನದು ಎಂದೆಲ್ಲ ಭಾವಗಳನ್ನು ಬೆಳೆಸಿಕೊಂಡು ಬಂದಿರುವೆವಲ್ಲ ಯಾವ ಸುರಕ್ಷಿತ ಭಾವದಿಂದ ? ಯಾರುಯಾರಲ್ಲೊ ನಮ್ಮ ಭಾವಗಳ ಮನೆ ಕಟ್ಟಿಕೊಳ್ಳುವ ನಾವು ಎಂಥವರು ? ಬೇರೆಯವರಾದರೂ ಸಂಪೂರ್ಣ ಸ್ವತಂತ್ರರೆ ? ಅವರಿರುವುದೂ ಬಾಡಿಗೆಯ ಮನೆ: ಅಲ್ಲಿ ನಮ್ಮ ಮನೆಯನ್ನು ಮಾಡಿಕೊಳ್ಳುತ್ತೇವಲ್ಲ ! "ಯಾರಿಗೆ ಯಾರೂ ಇಲ್ಲ, ಕೆಟ್ಟ ಮಂಗೆ ಕೆಳೆಯಿಲ್ಲ. ಜಗದ ನಂಟ ನೀನೆ" ಎಂಬ ಭಾವ ಮತ್ತೆ ಮತ್ತೆ ಬರುತ್ತಿದ್ದೂ ಬುದ್ಧಿ ಬಂದಿಲ್ಲ ?

* ಪಂಜರವೆ ಮೃತ್ಯುಬಂಧನವಾದೀತೆಂಬ ದಿವ್ಯಾನುಭವ ಅನುಭವ ಮಾತ್ರ ವೇದ್ಯ. ನಾವು ನಮ್ಮ ಚೇತನದ ರಕ್ಷೆಗಾಗಿ ಕಟ್ಟಿಕೊಳ್ಳುವ ರಕ್ಷಾಮಂತ್ರಗಳಾದ ಪ್ರಾರ್ಥನೆ, ಧ್ಯಾನ, ಸತ್ಕೃತಿ ಪಠಣ ಎಲ್ಲವೂ ಎಚ್ಚರ ತಪ್ಪಿದರೆ ಬರಿಯ ತೋರಿಕೆಯ ತಾಯಿತಗಳಾಗಿ ದುಷ್ಟಶಕ್ತಿಗಳ ಪ್ರವೇಶಕ್ಕೆ ಹಾಗೂ ಪೋಷಣೆಗೆ ಸಾಧನಗಳಾದಾವು. ಕಳ್ಳರ ಭೀತಿಯಿಂದ ರಾತ್ರಿಯ ಕಾವಲಿನವರನ್ನು ನೇಮಿಸಿ ನಿರ್ಭೀತನಾಗಿ ನಿದ್ರೆ ಹೋಗುವ ಶ್ರೀಮಂತ ತನ್ನನ್ನು ಹೆಚ್ಚು ಅಸ್ವತಂತ್ರನನ್ನಾಗಿ ಅರಕ್ಷಿತನನ್ನಾಗಿ ಮಾಡಿಕೊಂಡಿರುತ್ತಾನೆ. ಕಾವಲುಗಾರರ ವೇಷದಲ್ಲೆ ಕಳ್ಳರು ಬರಬಹುದು, ಕಾವಲುಭಟರೆ ಕಳ್ಳರಾದರೂ ಆಗಬಹುದು. ಆತ್ಮವಲಯದಲ್ಲಿ ಎಂತಹ ಪ್ರಮಾದವೂ ಮಾರಕವಾದೀತು. ಅದಕ್ಕೋಸ್ಕರವೆ ಬುದ್ಧ ಭಗವಾನ್ ಹೇಳಿದುದು, ಅಪ್ರಮಾದವಶಿಯಾಗಿರು ಎಂದು. ಈ ಸಾಧನೆ ಜ್ಞಾನ-ಯೋಗಿಗೇನೊ ಸರಿ. ಆದರೆ ಭಕ್ತನಿಗೆ ಮಾತ್ರ ಕರಕಷ್ಟವಾಗುತ್ತದೆ. ವಿಧಿಯಿಲ್ಲ. ಬಿಡುವಂತಿಲ್ಲ. ಭಗವಂತನನ್ನೇ ಬೇಡಿಕೊಳ್ಳುವುದು, ನೀನೆ ರಕ್ಷಾಮಂತ್ರವನ್ನು ನೀಡು, ನಿನ್ನ ಕಾರುಣ್ಯ ಭಿಕ್ಷೆಯನ್ನು ನೀಡು ಎಂದು. ಆಗ ಭಕ್ತಿಪಂಜರ ರಕ್ಷಾಬಂಧನದೊಳಗಿರುವ ಶುಕಾತ್ಮನಿಗೆ ಶಿವಮಂತ್ರ ರಕ್ಷೆ ಬರುತ್ತದೆ.

"ಗುಬ್ಬಿ ಹೆಜಿವರ ಮನೆಯ ತನ್ನ ಮನೆಯೆಂಬಂತೆ
ಧರೆ ಧನ ವನಿತೆ ಎನ್ನುವರು ತನ್ನವರೆಂದು
ಹೋರಿ ಹೋರಿ ಸಾವುತ್ತಿದೆ ಈ ಜೀವ
ಸರ್ವಕರ್ತ ಕೂಡಲ ಸಂಗಯ್ಯನೊಬ್ಬನೆ ಎಂದಱಿಯದೆ ಕೆಟ್ಟರು."

ಎಲ್ಲ ಹಕ್ಕಿಗಳೂ ಗಿಡಮರಗಳಲ್ಲಿ ತಮ್ಮ ಗೂಡು ಕಟ್ಟಿದರೆ ಈ ಗುಬ್ಬಚ್ಚಿಗಳು ಯಾರದೊ ಮನೆಯಲ್ಲಿ—ಅದು ಬಾಡಿಗೆಯಾಗಲಿ ಸ್ವಂತದ್ದಾಗಲಿ, ತಾನು ಮಾತ್ರ ಯಾವ ಬಾಡಿಗೆಯೂ ಕೊಡದೆ. ತನ್ನದೆಂಬ ದಿಮಾಕಿನಿಂದಲೆ, ಅಷ್ಟೆ ಏಕೆ ಮನೆಯವ ನನ್ನೂ ಗಮನಕ್ಕೆ ತೆಗೆದುಕೊಳ್ಳದೆಯೆ ಸಂಸಾರ ಮಾಡುತ್ತದೆಯಲ್ಲ. ಮನೆಯೊಳಗೆ ಚಿಲಿಪಿಲಿಗುಡುತ್ತಾ ಅದು ಹಾರಾಡುವ ಗತ್ತು ನೋಡಬೇಕು ; ಅದರ ನಿರಾತಂಕ ಭಾವ ವನ್ನು ಗಮನಿಸಬೇಕು. ಆದರೆ ಯಾರಿಗೆ ಗೊತ್ತು ಯಾವಾಗ ಮನೆಯಾತ ಬೇಸರ ಗೊಂಡು ಅವುಗಳ ಗೂಡನ್ನೆಲ್ಲ, ಅವುಗಳ ಅರೆಕಾವುಗೊಂಡ ಮೊಟ್ಟೆಗಳನ್ನು, ಹೊಸ ಮರಿಗಳನ್ನು, ಹಸಿ ಮರಿಗಳನ್ನು—ಎಲ್ಲವನ್ನೂ ಕಿತ್ತು ಕೆಡವಿ ಅವುಗಳಿಗೆ ಅಪೂರ್ವ ಪ್ರಲಯಾನುಭವವನ್ನುಂಟುಮಾಡುತ್ತಾನೊ ? ಗುಬ್ಬಿಗಳಿಗೇನಾದರೂ ಅದು ಗೊತ್ತೆ ? ಹಾಗಾಗುವುದನ್ನು ನೋಡಿಲ್ಲವೆ ? ತನ್ನ ಬಂಧುಗಳಿಗೆ ಬೇರೆಡೆಯಲ್ಲಿ ಹಿಂದೆ ಆದುದಾದರೂ ನೆನಪಿಲ್ಲವೆ? ಅದೆಲ್ಲ ಗೊತ್ತಿದ್ದೂ ಧೈರ್ಯವೇ ? ಸಾಹಸವೆ? ಮರವೆಯೇ ? ಅನಿವಾರ್ಯ ತೆಯೆ ? ಏನೊ, ಯಾರು ಬಲ್ಲರು! ಈ ಗುಬ್ಬಿ ನಮ್ಮ ಕರುಣೆಗೆ ಪಾತ್ರವಾದಂತೆ ತೋರಿದರೆ ಮುಕ್ತಾತ್ಮರ ಕರುಣವೃಷ್ಟಿಗೆ ಸಂಸಾರಿಮಾನವ ಹಾಗೆ ತೋರಿಯಾನು.

ಕುರಿಯು ಎರಡು ಕಡೆ ಎರಡು ಭಾವಕ್ಕೆ ಪ್ರತೀಕವಾಗಿ ಬಂದಿದೆ.

"ಕುಱುವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕು
ತೆಱನನಱಿಯದೆ ತನಿರಸದ ಹೊಱಗಣೆಲೆಯನೆ ಮೇದುವು !
ನಿಮ್ಮನಱಿವ ಮದಕರಿಯಲ್ಲದೆ ಕುಱಿ ಬಲ್ಲುದೆ !"

..ಮೇಲಾಗಿ, ಶಿವಭಕ್ತಿಯ ಸುಖ ಕುರಿಯ ಚೇತನಕ್ಕೆ ಎಲ್ಲಿ? ಖಾದ್ಯವಾಗಬೇಕು ? ಅದಕ್ಕೆ ಹೊಟ್ಟೆಯ ಗುರಿಯೆ ಸಾಕು. ಮದಕರಿಚೇತನಕ್ಕೆ ಆ ಗುರಿ ಸಾಕೆ? ಹಾಗೆಯೆ ಆನೆಯ ದಾರಿಯೆ ಬೇರೆ, ಆಡಿನ ದಾರಿಯ ಬೇರೆ. ಆನೆ ಹೋದೆಡೆ ದಾರಿಯಾಗುತ್ತದೆ. ಇದು ಹೋದೆಡೆ !....

"ಆನೆಯು ಆ ದಾರಿಯಲ್ಲಿ ಹೋಯಿತ್ತೆಂದಡೆ,
ಆಡೂ ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ ?
ಸಂಗನ ಶರಣರಿಗೆ ಆನು ಸರಿಯೆಂದು ಗಳಹಲುಬಹುದೆ ?"

ಕುರಿಯ ಸ್ವಭಾವ ಬೇರೆ, ಕರಿಯ ಸ್ವಭಾವ ಬೇರೆ. ಹಾಗೆ ಕರಿಯಂತೆ ಬೆಳೆದು ನಿಂತ 'ಸೂಕರಿ' ಕರಿಯಾಗುವುದಿಲ್ಲ. ಅದಕ್ಕೂ ದಂತವಿದೆ. ಆದರೂ ಅದು ಸೂಕರಿಯೆ!

"ಆ ಕರಿಯಾಕೃತಿಯ ಸೂಕರನ ಹೋಲಿಸಿದರೆ
ಆ ಕರಿಯಾಗಲಱಿವುದೆ?

ಭೂನಾಗನಾಕೃತಿಯನು ವ್ಯಾಳೇಶನ ಹೋಲಿಸಿದರೆ
ವ್ಯಾಳೇಶನಾಗಲಱಿವುದೆ ?
ನಾನು ಭಕ್ತನಾದರೇನಯ್ಯ ? ನಮ್ಮ ಕೂಡಲಸಂಗಮದೇವನ
ಸದ್‌ಭಕ್ತರ ಹೋಲಲಱಿವನೆ ?"*

ನೆಲದ ಹಾವನ್ನೂ ಅನಂತನನ್ನೂ ಹೋಲಿಸಿದ ಮಾತ್ರದಿಂದಲೆ ಇದು ಅನಂತನಾದೀತೆ ? ತಾವು ಸಾದೃಶ್ಯಮಾತ್ರದಿಂದಲೆ ಹಿರಿಯ ಭಕ್ತರಂತಾಗಲು ಹೇಗೆ ಸಾಧ್ಯ? ಮೇಲಿನ ಎರಡೂ ವಚನ ಚಿತ್ರಗಳಲ್ಲಿ ಬಸವಣ್ಣನವರು ತಮ್ಮ ಭಕ್ತಿಯನ್ನು ಕಟುವಾಗಿ ಹಳಿದುಕೊಂಡಿದ್ದಾರೆ. ತಮ್ಮನ್ನು ಮೆಚ್ಚಿ ಹೊಗಳಿದ ಭಕ್ತರಿಗೆ ಹೇಳುತ್ತಾರೆ: "ಹೊಗಳಿ ಹೊಗಳಿ ನನ್ನನ್ನು ಹೊನ್ನ ಶೂಲದಲ್ಲಿಡಬೇಡಿ. ನಾನು ಯಾವ ಮಹಾಭಕ್ತ ಎಂದು ಮೆಚ್ಚಿಹಾಡುತ್ತೀರಿ ? ಆ ಮಹಾತ್ಮರ ಕೂಡೆಲ್ಲ ನನ್ನನ್ನೇಕೆ ಹೋಲಿಸುತ್ತೀರಿ? ಶಾಂತಂ ಪಾಪಂ ! ಅವರೆಲ್ಲಿ ನಾನೆಲ್ಲಿ? ನಾನು ಬರಿಯ ನಾಮಧಾರಿಮಾತ್ರ! ಭಕ್ತ ಎಂಬ ಹೆಸರಿದೆ ; ಅಷ್ಟೆ ಹೋಲಿಕೆ. ಸೂಕರಿ ಕರಿಯನ್ನ, ಕುರಿ ಕರಿಯನ್ನ ಹೋಲಿತು ಎಂದ ಹಾಗೆ, ಅಷ್ಟೆ! ಅವರು ನಡೆದರು, ನಡೆದೆಡೆ ದಾರಿಯಾಯಿತು. ಅವರು ನುಡಿದರು, ನುಡಿದದ್ದೆ ಅಮೃತವಾಯಿತು. ನಾನೂ ನಡೆದೆ, ನಾನೂ ನುಡಿದೆ ಎಂದೆಲ್ಲ ಏಕೆ ಅನ್ನುತ್ತೀರಿ? ಅವರು ನಡೆದು ಬಿಟ್ಟುಹೋದ ಹಜ್ಜೆ ಗುರುತೆ ನನಗೆ ಹೆದ್ದಾರಿ. ಅಲ್ಲಿ ನನ್ನ ಗುರುತಾವುದೂ ನಿಲ್ಲದು. ಮರದಡಿಯ ನೆರಳಲ್ಲಿ ನಿಂತು ತನ್ನ ನೆರಳನ್ನು ಅರಸುವುದೇಕೆ? ನಾನೂ ಕೂಡ ತಪ್ಪಿದ್ದೇನೆ. ಹಾಲ ತೊರೆಯಂತೆ ಅವರ ಮಾತು ಹರಿದಿರಬೇಕಾದರೆ ನಾನು ನನ್ನ ವಚನದ ಬಾವಿ ತೋಡಿ ಉಪ್ಪು ನೀರುಂಡೆ. ಇನ್ನು ಸಾಕು, ನನ್ನನ್ನು ಹೊಗಳಿ ಹೊಗಳಿ ಕೊಲ್ಲಬೇಡಿ" ಎಂದು ಬಸವಣ್ಣನವರು ತಮ್ಮ ಭಕ್ತಿಯನ್ನು ಇಷ್ಟು ಕಠೋರವಾಗಿ ಇಲ್ಲಿ ಚಿತ್ರಿಸಿಕೊಂಡಿದ್ದಾರೆ. ಎಲ್ಲಿ ಸಿಗಬೇಕು ಈ ಆತ್ಮನೈಷ್ಠುರ್ಯ!

ತಮ್ಮ ಮನಸ್ಸಿನ ಕಲ್ಮಷವನ್ನು ಎಷ್ಟು ರೂಪಕಗಳಿಂದ ಕಂಡರಿಸಿ ಖಂಡಿಸಿಕೊಂಡಿದ್ದರೂ ಅಣ್ಣನವರಿಗೆ ತೃಪ್ತಿಯೆ ಇಲ್ಲ. ನಾನಾ ಪ್ರಾಣಿ ಭಾವಗಳನ್ನು ಆಯಾ ಪ್ರಾಣಿ ರೂಪಕಗಳಲ್ಲಿ ಚಿತ್ರಿಸಿಕೊಂಡಿದ್ದಾರೆ. ಕೆಲವೊಮ್ಮೆ ಒಂದೊಂದೆ ತನಿಯಾದ ಚಿತ್ರದಿಂದ, ಮಗುದೊಮ್ಮೆ ಅಖಂಡ ರೂಪಕದಿಂದ, ಹಲವೊಮ್ಮೆ ಸಂಕೀರ್ಣ ರೂಪಕಗಳಿಂದ ಹಾಗೆ ಪ್ರತಿಮಿಸುತ್ತಾರೆ. ಅಷ್ಟಾದರೂ ಅವರ ಹೃದಯ ಹಗುರಾಗದು. ಮುಂದಿನ ವಚನಗಳಲ್ಲಿ ರೂಪಕದ ಹಿಂಡನ್ನೆ ಕಾಣಬಹುದು :

"ಓತಿ ಬೇಲಿವರಿದಂತೆ ಎನ್ನ ಮನವಯ್ಯ
ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು !

---

* ಈ ಎರಡು ಚಿತ್ರಗಳನ್ನೂ ಪಂಪಕವಿ ಎರಡು ಕಡೆ ಹಿಂದೆಯೆ ಬಳಸಿದ್ದ. ಅವನ್ನು ನೋಡಬಹುದು : "ಈ ಕರಿ ಸೂಕರಿಯತ್ತೆ?" (ಭಗದತ್ತ ಪ್ರಸಂಗ xi 73) "ವಿಷಮೊಳ್ಳೆಗುಳ್ಳೊಡಮುದೊಳ್ಳೆಯ ಕಾಳಿಯು ನಾಗನಾಗದು." ಈ ರೂಪಕಗಳು ವಿಡಂಬನಕ್ಕೆ (ಮೇಲೆ ಬಂದಿರುವುದು ಆತ್ಮವಿಡಂಬನಕ್ಕೆ ಇಲ್ಲಿ ಅನ್ಯವಿಡಂಬನಕ್ಕೆ) ದ್ಯೋತಕವಾಗಿ ಬಂದಿದ್ದರೂ ಎರಡರ ಪರಿಣಾಮ, ತೀವ್ರತೆ, ಸನ್ನಿವೇಶಗಳು ತೀರಾ ಬೇರೆ.

ಬಾವುಲ ಬಾಳುವೆಯಂತೆನ್ನ ಮನವು !
ನಡುವಿರುಳೊಳೆದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ,
ನಾವಿಲ್ಲದ ಭಕ್ತಿಯ ಬಯಸಿದರುಂಟೆ,
ಕೂಡಲಸಂಗಮದೇವಾ !"
"ಉಡುವಿನ ಭಾವದಲ್ಲಿ ಹಡದರೆಮ್ಮವರು ;
ಊಸರವಳ್ಳಿಯಂತೆನ್ನಿರವು
ಬಾವುಲ ಬಾಳುವೆಯ ತೆಱನಂತೆ
ಹೊತ್ತಾಱಿ ಎದ್ದ ಕುರುಡಂಗೆ
ಅಗಸೆಯಲ್ಲಿ ಅಸ್ತಮಾನವಾದಂತೆ :
ಆನು ಭಕ್ತಿಯ ಬಯಸಿದರಹುದೆ ?
ಕೂಡಲ ಸಂಗಮದೇವಾ !"
"ಗೀಜಗನ ಗೂಡು ! ಕೋಡಗದಣಲ ಸಂಚ !
ಬಾದುಮೆಯ ಮದುವೆ, ಬಾವುಲ ಬಿದ್ದಿನಂತೆ !
ಜೂಜುಗಾಱನ ಮಾತು ! ಬೀದಿಯ ಗಂಡನ ಸೊಬಗು!
ಓಡಿನೊಳಗಗೆಯ ಹೊಯ್ದಂತೆ, ಕಾಣಿರೋ ! ।
ಶಿವನಾದಿಯಂತವನಱಿಯದವನ ಭಕ್ತಿ
ಮುಖಶೋಧನೆಗೆ ಮದ್ದ ಕೊಂಡಂತೆ
ಕೂಡಲ ಸಂಗಮದೇವಾ !"

ಈ ವಚನಗಳಲ್ಲಿ ಬಂದಿರುವ ಅನೇಕ ಅಜ್ಞಾತ ಪ್ರಾಣಿ ರೂಪಕಗಳೂ, ಅವುಗಳೊಡನೆ ಸಂವಾದಿಯಾಗಿ ಬಂದಿರುವ ಇತರ ಸಾಮಾನ್ಯ ಲೌಕಿಕ ರೂಪಕಗಳೂ ಅತ್ಯಂತ ಜಟಿಲವಾದೊಂದು ಮನೋ ವ್ಯಾಪಾರವನ್ನೆ ಚಿತ್ರಿಸ ಹೊರಟಿವೆ. ಅವುಗಳಲ್ಲಿ ವೈಪರೀತ್ಯವಿರುವಂತೆ ಭಾಸವಾದರೂ, ನಿಜಕ್ಕೂ ಅವೆಲ್ಲ ಒಂದೇ ಸಂಕೀರ್ಣ ಮನಸ್ಸಿನ ಪರಸ್ಪರ ಸಂಬಂಧವುಳ್ಳ ಮನೋಭಾವದ ಚಿತ್ರಣಕ್ಕೆ ಬಂದಿರುವುದು ಕಾಣುತ್ತದೆ; ಊಸರವಳ್ಳಿ–ಗೋಸುಂಬೆ ತನ್ನ ಸುತ್ತಣ ಪ್ರದೇಶದ ಗಿಡಮರಗಳ ಬಣ್ಣಕ್ಕೆ ತಕ್ಕನಾದ ಬಣ್ಣ ಬದಲಿಸುತ್ತಾ ತನ್ನ ಮಿಗಗಳಿಗಾಗಿ ಕಾದಿರುವ ಜಂತು. ಅಂದಂದಿನ ಸ್ಥಿತಿಗತಿಗಳಿಗೆ ಹೊಂದಿಕೊಂಡು ಹೋಗುವ ಅನಾಸಕ್ತ ಚೇತನನಿಗೂ ಈ ಗೋಸುಂಬೆಯ 'ರಾಜಯೋಗ'ಕ್ಕೂ ಸಂಬಂಧವೇ ಇಲ್ಲ. ಗೋಸುಂಬೆಗೆ ಹಾಗೆ ಬಣ್ಣ ಬದಲಿಸುತ್ತಾ ಹೋಗುವುದು ಸಹಜವಿರಬಹುದು, ಅದಕ್ಕೆ ಹೊರ ಆವರಣವೂ ಕಾರಣವಿರಬಹುದು. ಆದರೆ, ಅದೆಲ್ಲ ಅದು ತನ್ನ ಆಹಾರ ಜಂತುಗಳನ್ನು ವಂಚಿಸಿ ಎಗರಿಸಿಕೊಳ್ಳಲು ಅದಕ್ಕೆ ಪ್ರಕೃತಿ ನೀಡಿರುವ ಸೌಲಭ್ಯವಷ್ಟೆ. ಬಸವಣ್ಣನವರಿಗೆ ತಮ್ಮ ಸ್ಥಿತಿ ಹಾಗೆ ತೋರುತ್ತದೆ. ತನ್ನ ಭಕ್ತಿ ಜೀವನ ಹಾಗೆ ವಂಚನೆಯಾಗಿ ತೋರಿ ಯಾತನೆಯಾಗುತ್ತದೆ.

"ಲೋಕಾಚಾರದವರೊಡನೆಯೂ ಬೆರೆತಿರುವೆ, ಶಿವಾಚಾರದವರೊಡನೆಯೂ ಕೂಡಿರುವೆ ; ಕಾಯಕವನ್ನೂ ಹೇಳುವೆ, ಕೈಲಾಸವನ್ನೂ ಬೋಧಿಸುವೆ ; ಭವ ಸಂಸಾರವನ್ನೂ ಅಪ್ಪುವೆ, ಅಭವ ಸಂಸಾರವನ್ನೂ ಒಪ್ಪುತ್ತಿರುವೆ—ಇದೆಲ್ಲ ಸಮನ್ವಯವೊ ಅಥವಾ

ಬರಿ ಗೋಸುಂಬೆಯಾಟವೊ. ಜನ ಏನೆಂದಾರು? ಶಿವ ಏನೆಂದಾರು?" ಹೀಗೆ ಚಿಂತೆಯಾಗುತ್ತದೆ ಅಣ್ಣನವರಿಗೆ. ಭವದಲ್ಲಿ ಶಿವನನ್ನು ಬೆರೆಸುವ ಪ್ರಯತ್ನದಲ್ಲಿರುವಾಗ ಬಸವಣ್ಣನವರಿಗೆ ಈ ತಾಕಲಾಟವೆಲ್ಲ ಬರುತ್ತದೆ. ಆಗ ಈ ಸ್ವವಿಮರ್ಶೆಯ ವಚನ ಬರುವುದು.

ಮುಂದೆ ಬರುವ ಉಡುವಿನ ಚಿತ್ರದ ವೈಶಿಷ್ಟ್ಯ ಮತ್ತೊಂದು. ಅದಕ್ಕೆ ಎರಡು ನಾಲಗೆಯಿದೆಯಂತೆ. ಬಸವಣ್ಣನವರಿಗೂ ಆ ಭಾವನೆಯಿತ್ತು ; 'ಉಡುವಿನ ನಾಲಗೆಯಂತೆ ಎರಡಾದರೆ ಕೂಡಲಸಂಗಯ್ಯ ಮೆಚ್ಚುವನೆ?' ಎರಡು ನಾಲಗೆಯ ಸ್ವಭಾವ ತಮ್ಮಲ್ಲಿದೆಯೆಂದು ತಲ್ಲಣಿಸುತ್ತಾರೆ. ಯಾವುದೊ ಇಬ್ಬಂದಿತನದ ಯಾತನೆ ಅವರಿಗಾಗುತ್ತದೆ. ಹೇಗದನ್ನು ನಿವಾರಿಸಿಕೊಳ್ಳುವುದು? ಆ ಗುಣ ಈಗ ಇತ್ತೀಚಿಗೆ ಬಂದದ್ದೂ ಅಲ್ಲ; ಹುಟ್ಟಿದಾಗಲೆ ಬಂತು. ಅಷ್ಟೆ ಅಲ್ಲ, ಉಡುವಿನ ಭಾವದಿಂದಲೆ ಹಡೆದಿದ್ದಾರೆ ನಮ್ಮವರು! ಮಾಡುವುದೇನು? ಇದಿಷ್ಟೆ ಆಗಿದ್ದರೆ ಸಾಕಾಗಿತ್ತು. ಆದರೆ ಬಾವುಲ ಭಾವ ಬೇರೆ ಇದೆ. ಇದಕ್ಕೆ ಕಣ್ಣು ಕಾಣುವುದು ಕತ್ತಲಲ್ಲೆ. ಇದರ ತಲೆ ಯಾವಾಗಲೂ ಕೆಳಕ್ಕೆ, ಕಾಲು ಮೇಲಕ್ಕೆ. ಊರ್ಧ್ವಮೂಲರು ಇವರು ಎಂಬ ಭ್ರಾಂತಿ ಉಂಟುಮಾಡುವ ಎಷ್ಟೋ ಜನರು ಇಂಥವರು. ಈ ಬಾವುಲಹಕ್ಕಿ ವಿಷಯವಾಗಿ ಒಂದು ಭಾವನೆಯಿದೆ—ಅದು ತನ್ನ ಮಲವನ್ನು ಬಾಯಿ ಮೂಲಕವಾಗಿಯೆ ಹೊರಹಾಕುತ್ತದೆಂದು. ಅಂದರೆ ಅದಕ್ಕೆ ಆಹಾರ ಮಲ ಎಲ್ಲ ಒಂದೆ ಆಗಿದೆ. ಆಹಾರವಿಲ್ಲದಾಗ ಅದಕ್ಕೆ ಅದರ ಮಲವೆ ಬಿದ್ದಿನವಾಗುತ್ತದೆ. (ಇದಂತೂ ಅವೈಜ್ಞಾನಿಕವಾಗಿದ್ದರೂ ಜನತೆಯಲ್ಲಿ ಆ ಭಾವನೆ, ಅದು ತಲೆಕೆಳಗಾಗಿ ಮರಕ್ಕೆ ಜೋತು ಬಿದ್ದಿರುವುದರಿಂದಲೊ ಏನೊ, ಮೂಡಿಕೊಂಡಿದೆ. ಬಸವಣ್ಣನವರೂ ಆ ಕಾಲದ ಜನನಂಬಿಕೆಯನ್ನೆ ಅನುಸರಿಸಿ ಅದನ್ನು ರೂಪಕವಾಗಿ ಬಳಸಿಕೊಂಡಿದ್ದಾರೆ.) ಬಸವಣ್ಣನವರಿಗೆ ತಮ್ಮ ಭಕ್ತಿಯ ಸಾಧನೆಯೆಲ್ಲ ಹಾಗೆ ತೋರುತ್ತಿದೆ: ತಾವು ತಲೆಕೆಳಗಾದ ಜೀವ; ಆದರೆ ಊರ್ಧ್ವಮೂಲವಲ್ಲ. ಭಕ್ತನಾಗಿಯೂ ಇರುವೆ, ಲೋಕದ ಅಧಿಕಾರದಲ್ಲೂ ಇರುವೆ, ಇದರಿಂದ ಆಹಾರ ಮಲ ಮಿಶ್ರಣವಾದಂತೆಯೆ ಅಸಹ್ಯವಾಗಿದೆ....ಈ ರೂಪಕವಂತೂ ಬಹು ಶಕ್ತಿವತ್ತಾಗಿದೆ.

ಗೀಜಗಗೂಡು ಎಂತಹದೆಂದು ತಿಳಿದೆ ಇದೆ. ಕೋಡಗದಣಲ ಸಂಚ, ಎಂಬುದಕ್ಕೂ ಒಂದು ಭಾವನೆ ಕಾರಣವಾಗಿದೆ. ಕಪಿಗಳು ತಮ್ಮ ಆಹಾರವನ್ನು ಒಳಬಾಯೊಳಗೆ ಇಟ್ಟುಕೊಂಡಿರುತ್ತವಂತೆ, ಮಕ್ಕಳು ಎಂಜಲು ಪೆಪ್ಪರಮೆಂಟನ್ನು ಒರಸಿ ಜೇಬೊಳಗಿಟ್ಟು ಮತ್ತೆ ಮತ್ತೆ ಬಾಯಿಗಿಟ್ಟುಕೊಳ್ಳುವಂತೆ! ಈ ಎಲ್ಲ ಚಿತ್ರಗಳ ಸಂಕೀರ್ಣ ಪರಿಣಾಮದ ಒಂದು ಅಂಶವನ್ನು ವಾಚ್ಯವಾಗಿ ಹೇಳುತ್ತದೆ: "ಶಿವನಾದಿ ಅಂತವನಱಿಯದವನ ಭಕ್ತಿ" ಎಂಬ ಮಾತು. ಮುಪ್ಪಿನಲ್ಲಿ ಮದ್ದು ತೆಗೆದುಕೊಂಡು ಯೌವನ ಪಡೆದುಕೊಳಲೆಳಸುವಂತೆ ಅದು ವ್ಯರ್ಥ ಎಂದು ಅವರೆ ಹೇಳುತ್ತಾರೆ. ಆದರೆ ಈ ರೂಪಕಮಾಲೆಯ ಧ್ವನಿಯಷ್ಟೆ ಅಲ್ಲ. ಅದು, ಮೊದಲೆ ತಿಳಿಸಿದಂತೆ ಸಂಕೀರ್ಣ. ಬಸವಣ್ಣನವರ ನವ್ಯಕಾವ್ಯವನ್ನು ಇಂತಹ ವಚನಗಳಲ್ಲಿ ಕಾಣಬಹುದು.

ಆತ್ಮವಂತನಾದ ಈ ವ್ಯಕ್ತಿ ತನ್ನ ವಿಚಾರದಲ್ಲಿ ಇಷ್ಟು ಉಗ್ರ ಜಾಗ್ರತರಾಗಿದ್ದಾರೆ. ಅಧಿಕಾರ ಅಧ್ಯಾತ್ಮ ಎಲ್ಲ ವಲಯದಲ್ಲೂ ವರಿಷ್ಠ ಸ್ಥಾನದಲ್ಲೂ ಇದ್ದರೂ ಹೀಗೆ ದೈನ್ಯ ತೋರುತ್ತಾರೆ. ಆದರೆ ಲೋಕಜೀವಿ ಏನಾದರೂ ಒಂದಿಷ್ಟು ಅಧಿಕಾರ ಸಿಕ್ಕರೆ ಸಾಕು; ತನ್ನನ್ನು ಮೆರೆಯುವ ರಭಸದಲ್ಲಿ ಉಳಿದೆಲ್ಲವನ್ನೂ ಮರೆಯುತ್ತಾನೆ. ಅಷ್ಟೆ ಅಲ್ಲ, ಉಳಿದೆಲ್ಲವನ್ನೂ ಗೆಲ್ಲುವ ಬಯಕೆಯಿಂದಲೂ ಹೊರಡುತ್ತಾನೆ. ತನಗೆ ತಾನೆ ಅಲ್ಪನಾದರೂ ತಾನು ಏರಿರುವ ಅಹಂ ಮದಗಜ ಅಧಿಕಾರಾಶ್ವಗಳಿಂದಾಗಿ ಎತ್ತರವಾಗಿರುತ್ತಾನೆ. ಕೆಳಗಿಳಿದು ಬಂದರೆ ತಿಳಿಯುತ್ತದೆ.

"ಆನೆಯನೇಱಿಕೊಂಡು ಹೋದಿರೆ ನೀವು
ಕುದುರೆಯನೇಱಿಕೊಂಡು ಹೋದಿರೆ ನೀವು,
....
ಕುಂಕುಮ ಕಸ್ತೂರಿ ಪೂಸಿಕೊಂಡು ಹೋದಿರೆ, ಅಣ್ಣಾ!
ಸತ್ಯದ ನಿಲವನಱಿಯದೆ ಹೋದಿರಲ್ಲಾ!
ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ
ಅಹಂಕಾರವೆಂಬ ಮದಗಜವೇಱಿ
ವಿಧಿಗೆ ಗುಱಿಯಾಗಿ ನೀವು ಹೋದಿರಲ್ಲಾ"

ಮೇಲಿನ ವಚನದಲ್ಲಿ ಆನೆ ಕುದುರೆಗಳು ಅಧಿಕಾರ ಅಹಂಕಾರ ಮದಗಳಿಗೆ ಸಂಕೇತವಾದರೆ ಮುಂದಿನ ವಚನದಲ್ಲಿ ಅದೇ ಆನೆ ಭವ್ಯಭಾವಕ್ಕೆ ಪ್ರತೀಕವಾಗಿ ಬರುತ್ತದೆ.

"ಆರು ಮುನಿದು ನಮ್ಮನೇನು ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವರು ?"
ನಮ್ಮ ಕುನ್ನಿಗೆ ಕೂಸಕೊಡಬೇಡ!
ನಮ್ಮ ಸೊಣಗಂಗೆ ತಳಿಗೆಯನಿಕ್ಕಬೇಡ!
ಆನೆಯಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ?
ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ!"

ಶಿವದ ನೆಲೆಯಲ್ಲಿ ಬಾಳುತ್ತಿರುವವನಿಗೆ ಭವದ ಕೋಟಲೆ ಕಿರುಕುಳವಾಗಬಹುದೇ ವಿನಾ ಮಾರಕವಾಗಲಾರದು. ಆನೆಯಮೇಲೆ ಹೋಗುವವನರನ್ನು ನಾಯಿ ಬೊಗಳೀತಷ್ಟೆ; ಬೊಗಳದಿದ್ದರೆ ಅದಕ್ಕೂ ತೃಪ್ತಿಯಿಲ್ಲ; ಅದು ಅದರ ಸ್ವಭಾವ. ಆನೆಯಾದರೂ ಅದನ್ನು ಗಮನಿಸದು. ಒಂದುವೇಳೆ ಗಮನಿಸಿದರೆ ಆ ನಾಯಿಯ ಗತಿ ಏನಾಗುವುದೊ! ಹೇಗಾದರೂ, ಆನೆಯ ಮೇಲೆ ಕುಳಿತವನಿಗೇನೂ ಆಗದು; ವಿನೋದ ದೊರೆಯಬಹುದಷ್ಟೆ. ಆದರೆ ಆನೆಯೆತ್ತರದಿಂದ ಕೆಳಕ್ಕಿಳಿದು ಬಂದರೆ ಹಿಂದೆ ಬೊಗಳಿದ ನಾಯಿ ಕಚ್ಚುತ್ತದೊ ಏನೊ, ಅಥವಾ ಅದು ಸುಮ್ಮನಾದರೂ ಆಗಬಹುದು. ಶಿವದ ನೆಲೆಯಲ್ಲೆ ಇದ್ದರೆ ಬಹಳ ಒಳ್ಳೆಯದೆ, ಒಮ್ಮೆ ಏನಾದರೂ ಆ ನೆಲೆಗಟ್ಟನಿಂದ ಭವಕ್ಕೆ ಇಳಿದು ಬಂದರೆ ಮೊದಲೆ ಕಹಿಗೊಂಡಿದ್ದ ಈ ಭವ ಅಂಥವನ ಮೇಲೆ ಸೇಡು ತೀರಿಸಿಕೊಳ್ಳಲೂಬಹುದು. ಅಲೌಕಿಕವಾಗಿದ್ದಾಗ: 'ಯಾರು ಮುನಿದು ನಮ್ಮನೇನ ಮಾಡುವರು? ಊರು ಮುನಿದು ನಮ್ಮ

ನೆಂತು ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ! ನಮ್ಮ ಸೊಣಗಂಗೆ ತಳಿಗೆಯ ನಿಕ್ಕಬೇಡ!' ಎಂಬ ಕೆಚ್ಚೆ ಇರುತ್ತದೆ. ಕುನ್ನಿಗೆ ಯಾರೂ ಕೂಸುಕೊಡದಿದ್ದರೂ ಅದು ತಾನೆ ತನ್ನ ಕೂಸನ್ನು ಕಂಡುಕೊಳ್ಳಬಲ್ಲದು! ಕೂಸೆ ಅದನ್ನರಸಿಕೊಂಡೂ ಬರುತ್ತದೆ. ಬಸವಣ್ಣನವರಿಗೆ ನಾಯಿಗಳ ಬೆದೆಯ ಚಿತ್ರ ಚೆನ್ನಾಗಿ ಗೊತ್ತಿರುವುದು ಇಲ್ಲಿ ತೋರೀತು. ಆ ಬೆದೆಗಾಲದಲ್ಲಿ ಅರಸರ ಮನೆನಾಯಿ ಬೀದಿಯ ನಾಯಿಗಳೆಲ್ಲ ಸಮಾನರೆ. ಆದರೆ ಕಾಮಾನಂತರ ಘಳಿಗೆಗಳಲ್ಲಿ ಅವು ಬೇರೆಬೇರೆ ವರ್ಗಪ್ರಜ್ಞೆಗೆ ಬಲಿ. ಅವುಗಳನ್ನು ಕಾಯುವ ಒಡೆಯರ ಘನತೆಗೆ ಅನುಗುಣವಾಗಿ ಅವಕ್ಕೂ ಘನತೆ ಬರುತ್ತೆ. ಹಾಗೆಯೆ ನಮ್ಮ ವರ್ಗ ಜಾತಿ ಭಾವನೆ ಕಚ್ಚಾಟ ಭಕ್ತ ಲೌಕಿಕನಾದಾಗ, ತನ್ನ ಸೊಣಗನಿಗೇಕೆ ತನಗೇ ತಳಿಗೆಯ ನಿಕ್ಕೆಂದು ಲೋಕವನ್ನು ಕೇಳಬೇಕಾಗುವುದೊ ಏನೊ; ತನ್ನ ಕುನ್ನಿಗೇಕೆ ತನಗೇ ಕೂಸು ಕೊಡಿರೆಂದು ಕೇಳಿಕೊಳ್ಳಬೇಕಾಗುವುದೊ ಏನೊ. ಒಟ್ಟನಲ್ಲಿ ಈ ವಚನ ಧ್ವನಿವತ್ತಾಗಿದೆ. ಕುನ್ನಿ-ಸೊಣಗ-ಶ್ವಾನ ಎಲ್ಲ ಒಂದೇ ಆದರೂ ಬೇರೆ ಬೇರೆ ಪ್ರತೀಕವಾಗಿ ಬಂದಿವೆ.

ಮೃಗಶ್ರೇಷ್ಠವಾದ ಸಿಂಹದ ಚಿತ್ರವು ಒಂದೆರಡು ಬಾರಿ ಬರುತ್ತದೆ. ಸಿಂಹಕ್ಕೆ ನಡು ಬಹಳ ಮುಖ್ಯ. ಆದರಿಂದಲೆ ಅದರ ನಡಿಗೆಗೆ ಗಾಂಭೀರ್ಯ ಶಕ್ತಿ ಲಭಿಸಿದೆ. ಅದೇ ಮುರಿದುಹೋದರೆ? ಆನೆಗೆ ಸೊಂಡಿಲೆ ಮುಖ್ಯ. ಅದೇ ಅದರ ಕೈ, ಆಯುಧ. ಅದೇ ಮುರಿದರೆ? ಮೂಗಿಲ್ಲದೆ ಯಾವ ಶೃಂಗಾರ ತಾನೆ ಇದ್ದೀತು? ಇವುಗಳನ್ನು ಕಲ್ಪಿಸಿಕೊಳ್ಳಲಾಗುತ್ತದೆಯೆ? ಹಾಗೆಯೆ ಭಕ್ತಿ ತುಂಬಿ ತುಳುಕಾಡದವನರ ಸಂಗ. ಅದೆಂತಹ ಬಾಳು?

"ಸಿಂಗದ ನಡು ಮುಱಿಯಲಾ ಸಿಂಗವೇನು ಬಾತೆ?
ಸುಂಡಿಲು ಮುಱಿದರೆ ಗಜವೇನು ಬಾತೆ?
....
ನಿಜತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ?
ಕೂಡಲಸಂಗಮದೇವಾ?"

ಸಿಂಹ ತನ್ನ ಗಾಂಭೀರ್ಯಕ್ಕೆ, ಅಲಘು ಸ್ವಭಾವಕ್ಕೆ ಹೆಸರಾದದ್ದು. ಕೆಲವು ಜನರು ಮೇಲು ನೋಟಕ್ಕೆ ಹಾಗೆ ಸಿಂಹದಂತೆ ಇರುತ್ತಾರೆ. ಆದರೆ ಅದರಂತೆ ಅವರ ಒಳಗು ಗಂಭೀರವಾಗಿರದು. ಅವರ ಆ ಮೃಗರಾಜಗಾತ್ರ ಗಾಂಭೀರ್ಯದ ಒಳಗೆ ಏನೆಲ್ಲ ಮೃಗಾಲಯ ವಿಹಾರ ನಡೆದಿರುವುದಿಲ್ಲ. ಲೋಕದ ಎಷ್ಟೊ ಜನ ಸಿಂಹಪುರುಷರ ಒಳಮನಸ್ಸಿನಲ್ಲಿ ಯಾವ ಮೃಗಪ್ರಭುತ್ವ ನಡೆದಿರುತ್ತದೆಯೊ. ಅದನ್ನು ಬಹು ಚೆನ್ನಾಗಿ ಈ ವಚನ ಚಿತ್ರಿಸುತ್ತದೆ:

"ಅಂಗದ ನೋಟವು ಸಿಂಗದ ಗಾತ್ರವು
ಹಿಂಗದು ಮನದಲ್ಲಿ ನಾನಾ ವಿಕಾರ!"

ಸಾಂಪ್ರದಾಯಿಕವಾಗಿ ಬರುವ ಆನೆ ಸಿಂಹಗಳ ಸಂಬಂಧಚಿತ್ರ ಒಂದೆರಡೆಡೆ ಬಂದಿದೆ. ಸಿಂಹವು ಒಂದೆಡೆಯಾದರೆ ಇಲಿಯ ಚಿತ್ರ ಮತ್ತೊಂದು ಕಡೆ ಬಂದಿದೆ. ಸ್ವಭಾವತಃ

ಇಲಿ ಬಿಲಗನುನ ಪ್ರವೃತ್ತಿಯುಳ್ಳದ್ದು, ಕತ್ತರಿಸುವ ವೃತ್ತಿಯುಳ್ಳದ್ದು. ಅದನ್ನು ಸಾಯುವ ತನಕವೂ ಬಿಡದು ಅದು.

"ಇಲಿ ಗಡುಹನೊಡ್ಡಿದಲ್ಲಿರ್ಪಂತೆ ಎನ್ನ ಸಂಸಾರ—
ತನು ಕೆಡುವನ್ನಕ್ಕ ಮಾಣದು;
ಹೆಱರ ಬಾಧಿಸುವುದು, ತನು-ಕೆಡುವನ್ನಕ್ಕ ಮಾಣದು;
ಹೆಱರ ಛಿದ್ರಿಸುವುದು ತನುಕೆಡುವನ್ನಕ್ಕ ಮಾಣದು.
ಅಕಟಕಟಾ! ಸಂಸಾರಕ್ಕಾಸತ್ತೆ"

ಗುಡಾಣವನ್ನು ಒಡ್ಡಿದಲ್ಲಿ ಇಲಿ ಇರುವಂತೆ ಅನಿಸುತ್ತದೆ ಬಸವಣ್ಣನವರಿಗೆ ಸಂಸಾರ. ಇಲಿ ಯಾವುದನ್ನಾದರೂ ಸರಿ ತೋಡುತ್ತದೆ ಕೊರೆಯುತ್ತದೆ; ಎಂತಹ ಒಳ್ಳೆಯದನ್ನಾದರೂ ಛಿದ್ರಗೊಳಿಸುತ್ತದೆ. ಮಾನವರಲ್ಲಿರುವ ಈ ಮೂಷಕ ಅತ್ಯಂತ ಭಯಂಕರವಾದುದು. ಸಿಂಹ, ವ್ಯಾಘ್ರ, ಗಜ ಇವುಗಳು ಶಕ್ತ ಪ್ರಾಣಿಗಳು; ಆದರೆ ಹಾವು ಇಲಿಗಳು? ಯಾರಿಂದ ಅಪಾಯ ಹೆಚ್ಚು? ದುಷ್ಟರಾದ ಹುಲಿ ಆನೆಗಳು ಶಕ್ತರಾದ್ದರಿಂದ ಅವನ್ನು ಗುರುತಿಸಿ ಓಡಬಹುದು, ಇಲ್ಲವೆ ಎದುರಿಸಿ ಗೆಲ್ಲಬಹುದು. ಸೋತರೂ ಅದು ಗೆಲುವೆ. ಆದರೀ ಕಿರುಕುಳರನ್ನು? ಕೊಲ್ಲಬಾರದವರೇನಲ್ಲ. ನಾವು ಅತ್ತ ಗಮನವೆ ಹರಿಸಿರುವುದಿಲ್ಲ. ಆದರೂ ಈ ಕ್ಷುದ್ರರು ಕಿರುಕುಳ ಕೊಡುತ್ತಾರೆ. ಮೆಲ್ಲ ಮೆಲ್ಲನೇ ಬಂದು, ಕೊಲ್ಲುವುದಿಲ್ಲ, ಕಚ್ಚುತ್ತಾರೆ, ಕತ್ತರಿಸುತ್ತಾರೆ. ಇಲಿ ಕತ್ತರಿಸುವುದಾದರೂ ಏನನ್ನು—ಬೆಲೆಯುಳ್ಳ ರೇಸಿಮೆಯ ಕಲಾಪತ್ತಿನ ಬಟ್ಟೆಗಳನ್ನೆ; ಪ್ರಿಯವಾದ ಪುಸ್ತಕಗಳನ್ನೆ. ಹೋಗಲಿ ಗುಡಾಣದಲ್ಲಿ ಬಿದ್ದಮೇಲಾದರೂ ತಾನು ಸಾಯುವುದು ಖಂಡಿತ ಎಂಬುದು ಗೊತ್ತಾದಾಗಲೂ ಸುಮ್ಮನಿರುತ್ತದೆಯೆ? ಪಾಪ ತನ್ನ ಸ್ವಭಾವವನ್ನೆಲ್ಲಿ ಬಿಟ್ಟೀತು, ಹಲ್ಲು ಉಗುರೆಲ್ಲ ಮುರಿದರೂ ಛಿದ್ರಿಸುತ್ತಲೆ ಇರುತ್ತದೆ. ಸಂಸಾರಿ ಮಾನವನಲ್ಲಿರುವ ಮೂಷಕ ಪ್ರವೃತ್ತಿ ಹೀಗೆ! ಇದು ಕಾಮುಕ್ಕೆ ಮಾತ್ರವೆ ಅಲ್ಲ, ನಮ್ಮಲ್ಲಿರುವ ಶಕುನಿ, ಐಯಾಗೊ ಮಹಾಶಯರಿಗೂ ಪ್ರತೀಕವಾಗಿದೆ.

ಈ ಮುಂದಿನ ವಚನದಲ್ಲಿ ಕುರಿಯ ಅತಿ ದಾರುಣವಾದ ಚಿತ್ರವನ್ನು ಬಸವಣ್ಣನವರು ಕೊಡುತ್ತಾರೆ.

"ಹಬ್ಬಕ್ಕೆ ತಂದ ಹರಕೆಯ ಕುಱಿ
ತೋರಣಕ್ಕೆ ತಂದ ತಳಿರ ಮೇಯಿತ್ತು;
ಕೊಂದಹರೆಂಬುದನಱಿಯದೆ ಬೆಂದವೊಡಲ ಹೊರೆಯ ಹೋಯಿತ್ತಲ್ಲದೆ
ಅಂದಂದೇ ಹುಟ್ಟಿತ್ತು, ಅಂದಂದೇ ಹೊಂದಿತ್ತು: ಕೊಂದವರುಳಿದರೇ,
ಕೂಡಲಸಂಗಮದೇವಾ?"

ಈ ಚಿತ್ರ ಮಾನವ ದುರಂತತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ತನ್ನನ್ನು ಕೊಲ್ಲುತ್ತಾರೆ ಎಂಬ ಅರಿವಿಲ್ಲದ ಕುರಿ, ತನ್ನನ್ನು ಬಲಿಗೊಳ್ಳುವ ಮಾರಿಯ ಗುಡಿಯ ತೋರಣಕ್ಕೆಂದು ತಂದಿರುವ ತಳಿರನ್ನೇ ಮೇಯುತ್ತದೆ—ಬೆಂದವೊಡಲನ್ನು

ಸಂತೈಸಿಕೊಳ್ಳಲೆಂದು. ನಮ್ಮ ಬದುಕೆಲ್ಲ ಬಹುಮಟ್ಟಿಗೆ ಹೀಗೆಯೇ ಆಗಿದೆ ಏನು? ಎಷ್ಟು ಮಾರ್ಮಿಕವಾಗಿದೆ! ಎಷ್ಟು ಕರುಣರಸಪೂರ್ಣವಾಗಿದೆ ಇದು!

ನೂರು ಬಯಕೆಗಳ, ನೂರು ವಿಷಯಗಳ ಮಧ್ಯೆಯಿರುವ ಮಾನವನಿಗೆ ಏನು ಮಾಡಲೂ ತಿಳಿಯುವುದಿಲ್ಲ, ಅವುಗಳು ತನ್ನ ದುರಂತಕ್ಕೆ ಕಾರಣವೆಂದೂ ತಿಳಿಯದು. ಇದೆ ಅವನ ದುರಂತ. ಮತ್ತೊಂದು ವಚನ ಇದೇ ಭಾವವನ್ನು ಬೇರೆಯ ವಿಧಾನದಿಂದ ಚಿತ್ರಿಸಿದೆ.

"ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯ
ಹಸುವೇನಬಲ್ಲುದು? ಹಸುರೆಂದೆಳಸುವುದು."

ಹಸಿರನ್ನು ತಿನ್ನಬಾರದು ಎನ್ನುವ ವೈರಾಗ್ಯವನ್ನೇನೂ ಹಸುವಿಗೆ ಯಾರೂ ಹೇಳಿಕೊಟ್ಟವರಿಲ್ಲ. ಎಳೆಯ ಜೋಳವಾದರೂ ಸರಿಯೆ—ಅದು ಸೊಕ್ಕು ತರಿಸಿಕೊಂದರೂ ಸರಿಯೆ—ಅದನ್ನು ಅದರ ಬಣ್ಣಕ್ಕಾಗಿ ಮೋಸಹೋದ. ನಂಬಿಕೆಗೊಂಡ ಹಸು ಮೇಯುತ್ತದೆ. ಮೇದು ಸಾಯುತ್ತದೆ. ಯಾವುದನ್ನು ಮೇಯಬೇಕು, ಯಾವುದು ಬಾರದು ಎಂಬುದನ್ನು ತಿಳಿದ ಪಶುಪತಿಯೆ ತಿಳುಹಬೇಕು; ಸದಾಹಾರವಿತ್ತು ಕಾಯಬೇಕು. ಆದರೆ ಅವನೆ ವಿಷಯದ ಹಸುರನ್ನು ಮುಂದೆ ಹರಡಿದರೆ? ತರಗನ್ನೆ ತಿನ್ನುವ ಹಸು ಬಿಡಬೇಕೆ?

ಇದೇ ಪಶುವಿನ ಚಿತ್ರ ಮತ್ತೆ ಬೇರೆಡೆ ಬರುತ್ತದೆ. ಭವಕರ್ದಮ ನಿಮಗ್ನವಾಗಿ ಸತ್ತೂ ಸಾಯದೆ ಬಡಿದಾಡುತ್ತ ತೊಳಲುವ ಚೇತನವನ್ನು ಈ ಚಿತ್ರ ಬಹು ಶಕ್ತಿಯುತವಾಗಿಯೆ ಚಿತ್ರಿಸಿದೆ:

"ಕೆಸರಲ್ಲಿ ಬಿದ್ದ ಪಶುವಿನಂತಾನು
ದೆಸೆ ದೆಸೆಗೆ ಬಾಯಿಬಿಡುತ್ತಿದ್ದೇನಯ್ಯಾ,
ಅಯ್ಯಾ! ಆರಯ್ವರಿಲ್ಲ-ಅಕಟಕಟಾ!-
ಪಶುವೆಂದೆನ್ನ ಕೂಡಲಸಂಗಮದೇವ
ಕೊಂಬು ಹಿಡಿದೆತ್ತುವನ್ನಕ್ಕ!"

ಹಸಿರು ಮೇಯಲೆಂದೊ, ನೀರು ಕುಡಿಯಲೆಂದೊ ಹೋದ ಹಸು ಕೆಸರೊಳಗೆ ಸಿಲುಕಿಕೊಂಡು ಕಾಲುಬಡಿಯುತ್ತಿದೆ. ಒಮ್ಮೆ ಮುಂಗಾಲನ್ನು ಎತ್ತಿದರೆ ಹಿಂಗಾಲು ಮತ್ತೂ ಆಳಕ್ಕೆ ಹೋಗಿರುತ್ತದೆ. ಮೇಲೆತ್ತಲೆಂದು ಕಾಲನ್ನು ಬಡಿದಂತೆಲ್ಲ ಶರೀರವೆ ಒಳಗೊಳಗೆ ಹೋಗುತ್ತಿದೆ. ಕ್ಷಣಕ್ಷಣವಾಗಿ ಪ್ರಾಣ ಹೋಗುತ್ತಿರುವಾಗ ಭೀತಿಹತಪ್ರಾಣಿ ದೆಸೆದೆಸೆಗೂ ಬಾಯಿಬಿಡುತ್ತಿದೆ. ಅದಕ್ಕೆ ತಾನು ಸಾಯುತ್ತಿರುವ ಭಯಂಕರವಾದ ಅನುಭವವಾಗುತ್ತಿದೆ. ಆದರೆ ಮೇಲೆತ್ತುವವರಾರು? ನೀರಿನಲ್ಲಿ ಮುಳುಗುವವರನ್ನು ಮೇಲೆತ್ತುವುದೆ ಎಲ್ಲರಿಗೂ ಸಾಧ್ಯವಿಲ್ಲದಿರುವಾಗ ಈಜಲೂಬಾರದ ನಡೆಯಲೂಬಾರದ ಕೆಸರು ನೆಲದಲ್ಲೆಂತು ನಡೆದು ಹೋಗಿ ಅಲ್ಲಿ ಮುಳುಗುತ್ತಿರುವ ಮತ್ತೊಂದು ಪ್ರಾಣವನ್ನು ಬದುಕಿಸುವುದು? ಮುಳುಗುವ ಪ್ರಾಣಿಯನ್ನು ನೋಡಿ 'ಅಯ್ಯೊ ಪಾಪ!' ಎಂದು ಮರುಗಿ ಸುಮ್ಮನಾಗುವುದೆ ವಿವೇಕವಾಗುತ್ತದೆ ಸಾಧಾರಣನಿಗೆ. ಹಾಗಾದರೆ ಮೇಲೆತ್ತುವರಾರು? ಪಶುಪತಿ

ಮಾತ್ರವೆ. ಮೇಲೆತ್ತುವ ರಭಸದಲ್ಲಿ ಪ್ರಾಣಹೋದೀತು. ರಕ್ಷಿಸಲೆಂದು ಮೇಲಿಂದ ಬಿಡುವ ಹಗ್ಗವೆ ಕೊರಳ ಉರುಳಾಗಬಹುದು. ಆದ್ದರಿಂದ ಯಾರನ್ನು ಹೇಗೆ ಎತ್ತಬೇಕೆಂಬುದನ್ನು ಉದ್ಧಾರಕ ಅವಶ್ಯವಾಗಿ ತಿಳಿದಿರಬೇಕು. ಅವನು ಕೊಂಬು ಹಿಡಿದು–ಕರವಿಡಿದಲ್ಲ!—ಮೇಲೆತ್ತಬೇಕು. ಈ ರೂಪಕದ ಸಿದ್ಧಿ ಈ ಮಾತಿನಲ್ಲಿ ವ್ಯಕ್ತವಾಗಿದೆ. ಕವಿಗೆ ತನ್ನ ರೂಪಕಾನುಭವದಲ್ಲಿ ತಾದಾತ್ಮ್ಯವಿಲ್ಲದಿದ್ದರೆ ಅಪಸ್ವರವಾಗುವಂತೆ 'ಕೈಹಿಡಿದೆತ್ತು' ಎಂಬ ಮಾತು ಬರುತ್ತಿತ್ತು. ಇಲ್ಲಿ ಬಸವಣ್ಣನವರಿಗೆ ಆ ಭಾವತಾದಾತ್ಮ್ಯವಿರುವುದರಿಂದಲೆ, ಆ ಭಾವಜೀವಂತತೆ ಇರುವುದರಿಂದಲೆ ಅವರು 'ಕೊಂಬು ಹಿಡಿದೆತ್ತು' ಎಂದಿದ್ದಾರೆ.

"ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
ಒಡೆಯ! ನಿಮ್ಮ ಬಯ್ಯದಂತೆ, ಮಾಡು."

ಕಂಡ ಕಂಡ ಹೊಲದ ಹಸಿರನ್ನು ಮೇಯುತ್ತ ಹೋಗುವ ಪಶುವನ್ನು ಅನ್ಯರು ತುಡುಗುಣಿಯೆಂದು ಹಿಡಿದು ಹೊಡೆದರೆ ಅದಕ್ಕೆ ಪ್ರಾಣಾಪಾಯ; ಒಡೆಯನಿಗೆ ಅವಮಾನ. ಪಶುಗಳ ಆಗುಹೋಗೆಲ್ಲ ತನ್ನದಾಗಿರುವಾಗ ಬೇಗನೇಕೆ ಪಶುಪತಿ ಬರಬಾರದು? ಕೊಂಬು ಹಿಡಿದೇಕೆ ಎತ್ತಬಾರದು?

"ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
'ಅಂಬೇ' 'ಅಂಬೇ' ಎಂದು ಕರೆಯುತ್ತಲಿದ್ದೇನೆ
'ಅಂಬೇ' 'ಅಂಬೇ' ಎಂದು ಒಱಲುತ್ತಲಿದ್ದೇನೆ
ಕೂಡಲಸಂಗಮದೇವ 'ಬಾಳು' 'ಬಾಳೆಂ'ಬನ್ನಕ್ಕ!"
"ಆನೊಬ್ಬನು: ಸುಡುವರೈವರು!
ಮೇಲೆ ಕಿಚ್ಚು ಘನ: ನಿಲಲುಬಾರದು!
ಕಾಡಬಸವನ ಹುಲಿ ಕೊಂಡೊಯ್ದರೆ
ಆರಯ್ಯಲಾಗದೆ, ಕೂಡಲಸಂಗಮದೇವ!"

ಈ ಪಶುವಿನ ಮೊರೆಯನ್ನು ಕೇಳಿ ಬಾರನೇನು ಪಶುಪತಿ? ಹಸುವಿನ ಮೊರೆಯಾದರೆ ಸುಮ್ಮನಿರಬಹುದು. ಆದರದು ಕರುವಿನ ಕರೆತ. ಬಾವಿಯಲ್ಲಿ ಬಿದ್ದ ಕರುವಿನ ಕರುಳಿರಿಯುವ ಮೊರೆತ. ಗುಳಿಯಲ್ಲಿ ಬಿದ್ದವನ ಮೇಲೆ ಒರಳನ್ನು ಹಾಕಿದರು ಎಂಬಂತೆ ಮಾಡದೆ ಆ ಕರುವನ್ನು ಮೇಲೆ ಎತ್ತಿ ಅದಕ್ಕೆ ತಾಯಮೊಗ ತೋರಿಸುತ್ತಾನೆ, ಆ ಪಶುಪತಿ, ಉಳುಹುತ್ತಾನೆ.

"ಹಾಳು ಕುಳಿಯಲ್ಲಿ ಬಿದ್ದ ಪಶುವಿನ ಕಱುವ ತೆಗೆದು
ತಾಯ ಮುಖವ ತೋಱುವಂತೆ
ಪಾಪಕೂಪದಲ್ಲಿ ಬಿದ್ದವನನೆಬ್ಬಿಸಿ
ಕೂಡಲಸಂಗನ ಶರಣರ ಶರಣವ ತೋಱಿ ಎನ್ನನುಳುಹಿದನು."

ಪಾಪಕೂಪಪತಿತನಾದವನನ್ನು ಹಾಗೆ ಮೇಲೆತ್ತಿ ಆ ತಂದೆ ಕಾಯುತ್ತಾನೆ. ಶರಣರ ಪಾದದರ್ಶನ ಮಾಡಿಸಿ ಆ ಘಾಸಿಯನ್ನೆಲ್ಲ ಮರೆಯುವಂತೆ ಮಾಡುತ್ತಾನೆ. ಕೊನೆಗಾದರೂ, ಇನ್ನೇನು ಬೇಕು?

ಸಂಸಾರದ ವಿಷಮ ವಿಷಯಸುಖಗಳ ಬಾಹ್ಯರೂಪಿಗೆ ಮೋಹಗೊಂಡು ಮೆಲಹೋಗಿ ಅಡವಿಯಲ್ಲಿ ದಾರಿತಪ್ಪಿ ದುಃಖಕರ್ದಮದಲ್ಲಿ ಮುಳುಗಿ ಬಡಿದಾಡುವ ಪಶುಚೇತನದ ಚಿತ್ರ; ಪಂಚ ವಿಷಯೇಂದ್ರಿಯಾಗ್ನಿ ಹತ, ವ್ಯಾಘ್ರಹೃತ ಪಶುವಿನ ಚಿತ್ರ ಮೇಲೆ ಸೊಗಸಾಗಿ ಚಿತ್ರಿತವಾಗಿದೆ.

ವ್ಯರ್ಥ ಭಕ್ತಿಯ ಚಿತ್ರವನ್ನು ಮುಂದಿನ ರೂಪಕದಲ್ಲಿ ಕೊಟ್ಟಿದ್ದಾರೆ

"ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತೆನ್ನ ಭಕ್ತಿ"

ಗಾಣದ ಎತ್ತು ತಾನು ನಡೆದ ಹಾದಿಯಲ್ಲೆ ನಡೆದು, ಸುತ್ತಿದ ಗಾಣವನ್ನೆ ಸುತ್ತುತ್ತಿದೆ, ಗಾಣದಲ್ಲಿ ಎಳ್ಳೆ ಇಲ್ಲ. ಕಿಂಯ್ಯೊ ಶಬ್ದಮಾತ್ರ ಅಧಿಕವಾಗಿ ಆಗುತ್ತಲೆ ಇದೆ. ಅರಿವಿಲ್ಲದೆ ಮಾಡಿದ, ನಾನು ಮಾಡುವೆನೆಂಬ ಅಹಂಕಾರದಿಂದ ಮಾಡಿದ ಭಕ್ತಿ ಇಂತಹುದು.

ನಿಷ್ಠೆಯಿಲ್ಲದ ಭಕ್ತಿ, ಪ್ರೀತಿಯಿಲ್ಲದ ಸತಿಯ ಒಲುಮೆಯಂತೆ, ಅದಕ್ಕಿಂತ ಮಿಗಿಲಾಗಿ "ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ." ಆ ಭಕ್ತಿ ಭಗವಂತನಿಗೂ ಬೇಕಿಲ್ಲ; ಭಕ್ತನಿಗೂ ಬೇಕಿಲ್ಲ. ಈ ಅಭಾವಸ್ಥಿತಿಯನ್ನು ಈ ರೂಪಕ ಬಹು ಮನೋಹರವಾಗಿ ಸಜೀವವಾಗಿ ಚಿತ್ರಿಸಿದೆ. ಭಗವಂತನಿಗೆ ಕರುಣೆಯುಂಟಾದರೂ ಸರಿಯೆ, ಭಕ್ತನ ಪ್ರಾರ್ಥನೆಯೆ ಉತ್ಕಟವಾದರೂ ಸರಿಯೆ, ಸಿದ್ಧಿ ದೊರೆತೆ ದೊರೆಯುವುದು. ತನ್ನ ಕರುವಿಗೆ ಹಾಲೂಡಬೇಕೆಂಬ ತುಡಿತ ಹಸುವಿಗೆ ಬಂದರೆ ಆಗ ತಾಯಿಯೆ ಕರುವಿನೆಡೆಯನ್ನರಸಿಕೊಂಡು ಬರುತ್ತದೆ. ಹುಲಿರಾಯನ ಅಡ್ಡಿಯನ್ನೂ ದಾಟಿಕೊಂಡು, ಗಿರಿದರಿಗಳನ್ನೂ ಹಾರಿಬಂದು, ಕರುವಿಗೆ ಹಾಲು ಬೇಡದಿದ್ದರೂ ಅದೇ ಆ ಮಗುವಿನ ಮೈಯನ್ನು ನಾಲಗೆಯಿಂದ ನೆಕ್ಕುತ್ತ ನೆಕ್ಕುತ್ತ ಅದಕ್ಕೆ ಹಾಲಿನಾಸೆಯನ್ನುಂಟುಮಾಡುತ್ತದೆ. ಹಾಗೆ ಮಾಡಿ ತನ್ನ ತೊರೆದ ಕೆಚ್ಚಲನ್ನು, ಅದರ ಚಾಯಿಗೆ ಊಡುತ್ತದೆ. ಹೀಗಿರದೆ ಕರುವಿಗಾದರೂ ಹಸಿವೆ ಇದ್ದರೆ, ತನ್ನ ಅಂಬೆಯ ಹಂಬಲವಿದ್ದರೆ 'ಅಂಬಾ, ಅಂಬಾ, ಎಂದು ಕರುಳಿರಿಯುವಂತೆ ಅರಚಿ ಅರಚಿ ಎಷ್ಟೆ ದೂರದಲ್ಲಿ ತನ್ನ ತಾಯಿದ್ದರೂ ಎಡೆತಡೆಯನ್ನೆಲ್ಲ ದಾಟಿ ಹೋಗಿ, ಇಲ್ಲವೆ ತನ್ನೆಡೆಗೇ ಆಕೆಯನ್ನು ಸೆಳೆದುಕೊಂಡು, ಗೌಳಿಗನ ಕೃಪಣತೆಯನ್ನೂ ಹಿಳಿದು ಹಾಲನ್ನು ಸವಿಯಬಲ್ಲದು; ಹಸು ತನ್ನನ್ನು ಒದೆ ಒದೆದರೂ ಅದನ್ನು ಜಡದೆ ಕಾಡಿ ಬೇಡಿ ಹಾಲನ್ನು ಹೀರಬಲ್ಲದು. ಆದರೆ, ಆದರೆ....ಹಸುವೂ ಅಲ್ಲೆ ಇದ್ದು, ಕರುವೂ ಆ ಬಳಿಯೇ ಇದ್ದು ಅದಕ್ಕೂ ಬೇಡ ಇದಕ್ಕೂ ಬೇಡ ಎಂಬಂತಾದರೆ? ಗೌಳಿಗನ ಪಾಡೇನಾಗಬೇಕು. ಹಾಲು ಕರೆದುಕೊಳ್ಳಲೆಂದು ತಂಬಿಗೆ ಹಿಡಿದು ನಿಂತ ಮುಗ್ಧ ಗೃಹಿಣಿಯ ಪಾಡೇನಾಗಬೇಕು? ಹಾಲಿಗಾಗಿ ಕಾದು ಕುಳಿತ ಮಕ್ಕಳ ಪಾಡೇನಾಗಬೇಕು? ಆ ದೃಶ್ಯವಾದರೂ ಹೇಗಿರುತ್ತೆ!....ಮರ್ಕಟ ಶಾಬಕ ನ್ಯಾಯವಾದರೂ

ಸರಿಯೆ, ಮಾರ್ಜಾಲ ಶಾಬಕ ನ್ಯಾಯವಾದರೂ ಸರಿಯೆ—ಭಕ್ತ ಭಗವಂತ ಸಮಾಗಮವಾಗುತ್ತದೆ ಎನ್ನುತ್ತಾರೆ. ಆದರೆ ಈ 'ಊಡದ ಆವು ಉಣ್ಣದ ಕರು' ನ್ಯಾಯವಾದರೆ? ಎಷ್ಟು ಚೇತನಗಳ ಗತಿ ಇದೆ ಆಗಿಲ್ಲ? ಭಕ್ತ ಭಗವಂತರ ಮಾತೇಕೆ? ಸಂಸಾರದಲ್ಲಿ ಗಂಡಹೆಂಡಿರಾಗಿರುವರ ಮಾತೇನು? ಎಷ್ಟು ನಿರ್ಭಾಗ್ಯರ ಬದುಕು ಹೀಗಿಲ್ಲ!

ಭಗವತ್ ಕೃಪಾಸಾನ್ನತರಾಗಿದ್ದ ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿದ್ದ ಮಾತ್ರದಿಂದಲೇ ಅವನ ಹಂಗಿಗೇಕೆ ಪಕ್ಕಾಗುತ್ತಾರೆ? ಹಣಕ್ಕಾಗಿ ಅವನನ್ನು ಏಕೆತಾನೆ ಗೋಗರೆದಾರು? ಯಾರೊ ಹಾಗೆ ಹಂಗಿಸಿರಬೇಕು. ಅದಕ್ಕೆ ಅವರ ನಿಶಿತವಾದ ಉತ್ತರ ವಿದು!

"ಊರಮುಂದೆ ಹಾಲಹಳ್ಳ ಹರಿಯುತ್ತಿರಲು
ಓಜೆಯಾವಿನ ಬೆನ್ನಲ್ಲಿ ಹರಿಯಲೇಕೆ!"

ಊರಮುಂದೆ ಹಾಲುಹೊಳೆಯೆ—ಕೆರೆಯಲ್ಲ, ಬಾವಿಯಲ್ಲ—ಹರಿಯುತ್ತಿರುವಾಗ ಹಾಲಿಗಾಗಿ ಓಡೆ ಆವಿನ ಬೆನ್ನಲ್ಲಿ ಹರಿಯುವುದಾದರೂ ಏಕೆ? ಭಗವಂತನ ಕಾರುಣ್ಯಸಾಗರದ ವೀಚೀಮಾಲೆಗಳು ಅನಂತವಾಗಿ ಅಪಾರವಾಗಿ ಸೇವಿಸುತ್ತಿರುವಾಗ ರಾಜ ಬಿಜ್ಜಳನ ದರಿದ್ರ ಕೃಪೆಯ ಗುಡ್ಡ ಹಸುವಿನ ಹಿಂದೆ ಆದರ ಹಾಲಿಗಾಗಿ ಪಾತ್ರೆ ಹಿಡಿದು ಅದರ ಕೆಚ್ಚಲಿಂ ಸೊರವು ಬಿಡುವುದನ್ನೆ ಕಾಯುತ್ತ, ಅದರ ಒತ್ತಗಳನ್ನೂ ಹಾಲಿಗಾಗಿ ತಾಳಿಕೊಳ್ಳುತ್ತ ಹೋಗಬೇಕಾದುದೇಕೆ? ಒತ್ತವನ್ನೆ ಹಾಲೆಂದು ಭಾವಿಸಿಕೊಳ್ಳಬೇಕಾದ ದುರಂತವೇಕೆ?

ಭಕ್ತ ಮೇಲಾಗಲು ಬಯಸದೆ "ಕೀಳಾಗಲು" ಪ್ರಯತ್ನಿಸುತ್ತಾನೆ. ಕೀಳಾಗದಿದ್ದರೆ ಶಿವಕೃಪಾಧೇನು ಹಾಲುಕೊಡದು:

"ಮೇಲಾಗಲೊಲ್ಲೆನು, ಕೀಳಾಗಲಲ್ಲದೆ;
ಕೀಳಿಂಗಲ್ಲದೆ ಹಯನ ಕರೆವುದೆ!"

ನಿಂತುಕೊಂಡವರಿಗೆ ಹಾಲೆಲ್ಲಿ ಬಂದೀತು. ಬಾಗಿಕುಳಿತು ಕರೆದರೆ ಮಾತ್ರ ದೊರೆಯುತ್ತದೆ. ಕೀಳಾಗಬೇಕು, ಆದರೆ ಎಂತಹ ಕೀಳು? ಹಾಲೂಡುವ ಹಸುವಿನ ಬಳಿ ಬಾಗುವ ಕರುವಿನ 'ಬಾಗು', ಹಾಲು ಕರೆದುಕೊಳ್ಳುವ ಗೌಳಿಗನ 'ಕೀಳು', ನೀರು ತುಂಬಿಕೊಳ್ಳಲು ತನ್ನ ಬಾಯನ್ನು ಅಡಿಮಾಡಿಕೊಳ್ಳುವ ಬಿಂದಿಗೆಯ 'ಕೀಳು' ಶಿವ ಕಾಮಧೇನುವಿನ ಮುಂದೆ 'ಕೀಳಾದರೂ' ಮೇಲಾಗುತ್ತಾರೆ; 'ಕೀಳಾದರೇ' ಮೇಲಾಗುವುದಾದರೂ ಕೂಡ. ಆದರೆ ಬಾಗುವುದು ಯಾರ ಮುಂದೆ ಎಂಬುದರ ಬಗ್ಗೆ ತಪ್ಪು ತಿಳಿವಳಿಕೆ ಇರುವ ನಾವು ಎಲ್ಲೆಲ್ಲೊ ಮಂಡಿಗಾಲಿಟ್ಟು ಬೆನ್ನು ಬಾಗುತ್ತಿದ್ದೇವೆ. ಶಿವದ ಬಳಿ ಬಾಗದೆ ನಾವು ಉಳಿದೆಲ್ಲೆಡೆಯೂ ಬಾಗುತ್ತಿದ್ದೇವೆ. ಅಲ್ಲಿ ಬಾಗಿಡ ತಲೆ ಮತ್ತೆಲ್ಲೂ ಬಾಗಬೇಕಿಲ್ಲ. "ಇಲ್ಲಿ ಬಾಗಿದ ಮುಡಿಯು ಮತ್ತೆಲ್ಲು ಬಾಗದು" ಎಂಬ ಶ್ರೀ ಪುತಿನ ಮಾತನ್ನು ಇಲ್ಲಿ ನೆನೆಯಬಹುದು.

ಪಶುರೂಪಕದಲ್ಲಿ ಕೊನೆಯದಾಗಿ ಬಸವಣ್ಣನವರು ತಮ್ಮನ್ನು ಶಿವನ 'ಧರ್ಮದ ಕವಿಲೆ' 'ಉಂಡಿಗೆಯ ಪಶು' ಎಂದುಕೊಂಡಿರುವುದನ್ನು ಕಾಣುತ್ತೇವೆ. ಪ್ರಾರಂಭದಲ್ಲಿ ಕೇವಲ ಪಶುವಾಗಿದ್ದ ಈ ಭಕ್ತ ಪಶುಪತಿಯ ಕೃಪೆಯಿಂದ ಕಡೆ ಕಡೆಗೆ ಅವನ 'ಧರ್ಮದ ಕವಿಲೆ'ಯಾಗುತ್ತಾನೆ, ಅವನ 'ಉಂಡಿಗೆಯ ಪಶು'ವಾಗುತ್ತಾನೆ. ಇವನೆ ಅವನ ಗುರುತು; ಅವನಿರುವೆಡೆಯಲ್ಲಿ ಇವನಿರಬೇಕು; ಇವನ ಗುರುತಿನಿಂದಲೆ ಅವನನ್ನು ಕಾಣುತ್ತೇವೆ. ಹೀಗೆ ಪಶು ಚಿತ್ರ ಎಂತಹ ಉನ್ನತೋನ್ನತ ಶಿಖರವನ್ನು ಏರಿದೆ ಇಲ್ಲಿ!

ಸೃಷ್ಟಿಕರ್ತನಾದ ಕೂಡಲಸಂಗನನ್ನು ಪೂಜಿಸಿಯೂ ಅನ್ಯ ದೈವಕ್ಕೆ ಎರಗುವವರನ್ನು ಬಸವಣ್ಣನವರು ಹತ್ತಾರು ರೂಪಕಗಳಲ್ಲಿ ತೀವ್ರವಾಗಿ ಟೀಕಿಸಿದ್ದಾರೆ. ಇಲ್ಲಿ ಅದಕ್ಕೆ ಮತ್ತೊಂದು ನಿದರ್ಶನವನ್ನು ತೋರಿಸಬಹುದು.

"ಕರ್ತಾರನ ಪೂಜಿಸಿ ಕು[ಚ್ಛಿ]ತ ದೈವಕ್ಕೆಱಗುವರು:
ಕತ್ತೆ ಕುದುರೆಗೆ ಹುಟ್ಟಿದ ವೇಸರನಂತೆ!
ಭಕ್ತರೆಂತೆಂಬೆ, ಭೃತ್ಯರೆಂತೆಂಬೆ, ಶರಣರೆಂತೆಂಬೆನವರ?
ಎರಡುಳ್ಳ ಪ್ರಪಂಚಿಗಳ ಮೆಚ್ಚ ಕೂಡಲಸಂಗಮದೇವ!"

ಈ ರೂಪಕಕ್ಸಾರಕ್ಕೆ ಯಾವ ವ್ಯಾಖ್ಯಾನವೂ ಸಪ್ಪೆ! ನವ್ಯಕಾವ್ಯದ ಪ್ರತಿಮೆಗಳೂ ಸಪ್ಪೆ!

ಲಿಂಗಧಾರಿಗಳಾದ ಮಾತ್ರದಿಂದಲೆ ಜಂಗಮರಾದಂತಾಗುವುದಿಲ್ಲ ಎಂಬ ಭಾವವನ್ನು ಹೇಗೆ ಶಕ್ತಿವತ್ತಾಗಿ ಹೇಳಿದ್ದಾರೆಂದು ಹಿಂದಿನ ಕೆಲವು ರೂಪಕಗಳಲ್ಲಿ ಕಂಡಿದ್ದೇವೆ. ಇಲ್ಲಿ ಮತ್ತೊಂದು ಪ್ರಾಣಿಯ ಹೆಸರನ್ನು ನೋಡುವ ಸಲುವಾಗಿ ಅಷ್ಟೇನೂ ಪರಿಣಾಮಕಾರಿಯಲ್ಲದ ರೂಪಕವನ್ನು ನೋಡಬಹುದು.

"ಕೊಳನ ತಡಿಯಲ್ಲೊಂದು ಹೊಱಸು ಕುಳ್ಳಿರ್ದರೇನು
ಗಳಹಂಸೆಯಾಗಬಲ್ಲುದೆ?"

ಈ ಚಿತ್ರವೆ ಸಜೀವವಾಗಿ ಮತ್ತೊಂದೆಡೆ ಬರುತ್ತದೆ:

"ಮಿಂಬುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು
ಮೂಗುಹಿಡಿದು ಧ್ಯಾನವ ಮಾಡುವರಯ್ಯಾ.
ಬಿಟ್ಟಮಂಡೆವೆರಸಿ ಬಾಯಿಮಿಡುಕಿಸುತ
ಕಣ್ಣುಮುಚ್ಚಿ ಬೆರಳನೆಣಿಸುವರಯ್ಯಾ—
ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯಹುಲ್ಲು
ಕೂಡಲಸಂಗನನಱಿಯದೆ ಮೊಱೆಯಿಡುವಂತೆ!"

ನೀರತಡಿಯಲ್ಲಿ ಮೆಲ್ಲಮೆಲ್ಲಗೆ ಒಂದು ಕಾಲನ್ನು ಮೇಲೆತ್ತುತ್ತ ಮುಂದಿಡುತ್ತಾ ಮತ್ತೊಂದರ ಮೇಲೆ ನಿಂತು 'ಧ್ಯಾನ' ಮಾಡುತ್ತ, ಜುಳಕ್ಕೆಂದೊಡನೆಯೆ ಕಂಡ ಮೀನನ್ನು 'ಗೊಳಕ್ಕ'ನೆ ನುಂಗಿಕೊಳ್ಳುತ್ತಾ ಹೋಗುವ ಬಕಪಕ್ಷಿಯ ಚಿತ್ರ ಬಹು ಸುಂದರವಾಗಿದೆ. ನೀರತಡಿಯಲ್ಲಿ ಕುಳಿತು ಒಳಗೇನನ್ನೊ ಧ್ಯಾನಿಸುತ್ತ ಕಾಣುತ್ತ, ಹೊರಗೇನೊ ಜಪಿಸುತ್ತ ಗೊಣಗುತ್ತ

ಕಣ್ಣುಮುಚ್ಚಿ ಬೆರಳೆಣಿಸಿ 'ಬಕಧ್ಯಾನ' ಮಾಡುವ ಜನರನ್ನು ಮೇಲಿನ ಚಿತ್ರಕ್ಕಿಂತ ಸುಂದರವಾಗಿ ಬೇರೊಂದು ಬಗೆಯಿಂದ ಮನದಟ್ಟು ಮಾಡಿಕೊಡಬಹುದೆ?

ಹಂದಿಯ ಚಿತ್ರ ಹಿಂದೆ ಸ್ವಲ್ಪ ಪರಿಚಯವಾಗಿದೆ. ಇಲ್ಲಿ ಇನ್ನೊಂದು ವಚನದಲ್ಲಿ ಅದರ ಪ್ರಸಿದ್ಧ ಗುಣವನ್ನು ರೂಪಕವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು:

"ಆವುಂಡುದನುಣಬಂದ ಹಂದಿಯ ಬಾಳುವೆಯವರ ಕಂಡು
ಅಸು ಮಱುಗುವೆನಯ್ಯಾ, ಕೂಡಲಸಂಗಮದೇವಾ."

ಉಂಡುದು ತನ್ನೊಡನೆ ಬರುತ್ತದೆ ಎಂದು ಸಂದೇಹಪಡುವ ಮಾನವರನ್ನು ಮೇಲಿನ ಮಾತಿನಿಂದ ಚುಚ್ಚುತ್ತಾರೆ. ಉಂಡುದು "ಅಸ್ಯಯ"ವಾಗಿ ಹೋಗುತ್ತದೆ. ಅದನ್ನೇ ಚಿಂತಿಸುವ ಚೇತನರು ಉಂಡುದನ್ನು ಉಣಬಂದ ಹಂದಿಯಂತೆ. ಹಾಗೂ ಭವಿ ಮಾಡಿದ ಪಾಕವನ್ನು ಲಿಂಗಕ್ಕೆ ಅರ್ಪಿಸುವುದಾಗಲಿ, ಸಂಗನ ಶರಣರು ಒಕ್ಕುದನುಂಡು ಅನ್ಯವ ನ್ನಾಚರಿಸಿದರಾಗಲಿ ಬಸವಣ್ಣನವರಿಗೆ ಸಹಿಸಲಾಗುವುದಿಲ್ಲ. ಹಾಗೆ ಮಾಡುವುದು 'ಸೂಕರ ಶುಚಿರ್ಭೂತತೆ'ಯಂತಾಗುತ್ತದೆ ಎನ್ನುತ್ತಾರೆ. ಮೈಯೆಲ್ಲ ಮಿಂದರೂ ಹೇಸಿಗೆ ತಿನ್ನುವುದು ತಪ್ಪುವುದಿಲ್ಲವಲ್ಲ!

ಭಗವಂತನ ಕರುಣೆ ತಪ್ಪಿದ ಭಕ್ತನ ಸ್ಥಿತಿಯನ್ನು "ಜಲವ ತಪ್ಪಿದ ಮತ್ಸ್ಯನಂತೆ" ಎಂಬ ಸಾಂಪ್ರದಾಯಿಕವಾದ, ಆದರೂ ಸೊಗಸಾದ ರೂಪಕದಿಂದ ಚಿತ್ರಿಸುತ್ತಾರೆ. ಮೀನಿನ ರೂಪಕ ಬಂದಿರುವುದು ಇವರಲ್ಲಿ, ನನಗೆ ತಿಳಿದಂತೆ, ಇಲ್ಲೊಂದೆ ಕಡೆ. ಭಕ್ತಿಯನ್ನು ಮಾಡುವ ಭಕ್ತನ ಮನಸ್ಸು ಒಂದಿನಿತು ಊನವಾದರೂ ಹಾಳಾಗುತ್ತದೆ. ಅದು ಹೇಗೆಂದರೆ:

"ಚೀಱಿಂಗೆ ಬಸಿರಾಯಿತ್ತೆ ಕಡೆ;
ಬಾಳೆಗೆ ಫಲವಾಯಿತ್ತೆ ಕಡೆ, ನೋಡಾ!
....
ಮಾಡುವ ಭಕ್ತಂಗೆ ಮನಹೀನವಾದರೆ ಆದೆ ಕಡೆ..."

ಎಂದು ಹೇಳುತ್ತಾರೆ. ಅಷ್ಟಾಗಿ ಸಾದೃಶ್ಯಶ್ರೀ ಇಲ್ಲವೆಂದು ಕಂಡರೂ ಆಗಬೇಕಾದ ಪರಿಣಾಮವಂತು ಈ ರೂಪಕದಿಂದ ಬಹು ಸುಂದರವಾಗಿಯೇ ಆಗುತ್ತದೆ. ಪ್ರಾಯಶಃ ಭಕ್ತರಲ್ಲದವರಿಗೆ ಮನಹೀನತೆ ಶೋಭಾಯಮಾನವೇ ಆಗಬಹುದು, ಉಳಿದ ಗಿಡಮರಕ್ಕೆ ಹಣ್ಣು ಬಂದಂತೆ; ಉಳಿದ ಪಶುಪ್ರಾಣಿಗಳಿಗೆ ಬಸಿರೊದಗಿದಂತೆ. ಆದರೆ ಭಕ್ತರಿಗೆ ಅದು ಸಾವು; ಸುಖದ ರೂಪದ ಮರಣ.

ಭಕ್ತಿಯ ಪ್ರಪಂಚದಲ್ಲಿ ಎಲ್ಲಕ್ಕಿಂತಲೂ ಮುಖ್ಯವಾಗಿ ಶ್ರದ್ಧೆ ಅತ್ಯವಶ್ಯ. ಅದೊಂದಿದ್ದರೆ ಏನಾದರೂ ಆಗುತ್ತದೆ. ಕುಂಡಲಿಗ ಕೀಟವನ್ನು ತಂದು ಅದನ್ನು ತನ್ನಂತೆ 'ಮಾಡು'ತ್ತದೆ. ಆದರೆ, ಮನುಷ್ಯ ಯಾವುದರಲ್ಲೂ ನಂಬದೆ ಯಾವ ದಿವ್ಯ ಸ್ಪರ್ಶದಿಂದಲೂ ತನ್ನ 'ಮುನ್ನಿನ ರೂಪವನ್ನು' ಬಿಡದೆಯೆ ಇದ್ದಾನೆ.

"ಕುಂಡಲಿಗನೊಂದು ಕೀಡೆಯ ತಂದು ತನ್ನಂತೆ ಮಾಡಿತಲ್ಲ!
ಎಲೆ ಮಾನವ, ಕೇಳಿ ನಂಬಯ್ಯ, ನೋಡಿ ನಂಬಯ್ಯ, ಎಲೆ ಮಾನವ!"

ಈ ಕೀಟಕುಂಡಲಿಗಳಾದರೂ ಆದರ್ಶವಾಗಬಾರದೆ ಈ ಮರಿಷ್ಮಪ್ರಾಣಿಗೆ? ನಂಬದಿದ್ದರೂ ಬೇಡ, ಅಪನಂಬಿಗೆಯಾದರೂ ಇರಲಿ. ಅಂದರೆ, 'ನೇತಿ' 'ನೇತಿ' ಎನ್ನುವ ಅನ್ವೇಷಣ ಮಾರ್ಗ, ಯಾವುದ್ದರಿಂದ ದೂರ ಹೋಗಬೇಕೆಂದು ಪ್ರಯತ್ನಿಸುವುದರಲ್ಲೆ ಅದರ ಹತ್ತಿರವೆ ಹೋಗುತ್ತೇವೆಯೋ ಅಂತಹ ಮಾರ್ಗ—ಅದಾದರೂ ಇದ್ದರೆ ಉತ್ತಮ. ಭಗವಂತನಿಂದ ದೂರ ಹೋಗಬೇಕು, ಅವನಿಂದ ತಪ್ಪಿಸಿಕೊಳ್ಳಬೇಕು ಎನ್ನುವ ನಿರಂತರ ಧ್ಯಾನದಿಂದ ಅವನ ಹತ್ತಿರವೆ ಹೋಗಿರುತ್ತೇವೆ, ಇಲ್ಲವೆ ಅವನೆ ನಮ್ಮ ಹತ್ತಿರ ಬಂದು ಬಿಟ್ಟಿರುತ್ತಾನೆ, ಭ್ರಮರವನ್ನು ನಿವಾರಿಸಲು ಮಾಡುವ ಸತತ ಪ್ರಯತ್ನದಿಂದಲೆ ಅಥವಾ ಅದು ಪಡುವ ಭೀತಿಯಿಂದಲೆ ಕೀಟವು ಭ್ರಮರನಾಗುನಂತೆ. ಸಿದ್ಧಿಯು ಬಂದೆ ಬರುವುದಾದರೆ ಹೇಗೆ ಬಂದರೇನಂತೆ? ಭಗವನ್ನಿವಾರಣಯತ್ತವೆ ಅನ್ವೇಷಣವಾಗುತ್ತದೆ.

"ಎನ್ನಯ್ಯಾ, ನಿಮ್ಮನರಸುತಲಿದ್ದೇನೆ;
ಎನ್ನಯ್ಯಾ, ಕೀಟಧ್ಯಾನದಲ್ಲಿ ನಿಮ್ಮನರಸುತಲಿದ್ದೇನೆ!
ಎನ್ನಯ್ಯಾ, ಕೂಡಲಸಂಗಮದೇವಾ,
ಭ್ರಮರನ ಲೇಸಿನಂತೆ ಕಾರುಣ್ಯವ ಮಾಡು;
ತಪ್ಪೆನ್ನದು ಶಿವಧೋ, ಶಿವಧೋ!"

'ನಾನೇನೊ ಕೀಟದಂತೆ ಭೀತನಾಗಿ ಓಡುತ್ತಿರುವೆ; ಅದೂ ಧ್ಯಾನವೆ, ಪ್ರೀತಿಯೆ, ಅರಸಾಟವೆ. ಆದರೆ ನೀನು ಮಾತ್ರ ಭ್ರಮರದ ಲೇಸನ್ನು ಕರುಣಿಸಬಾರದೆ? ತಪ್ಪು ನನ್ನದು; ತಪ್ಪನ್ನೆ ಅಪ್ಪಿಕೊಳ್ಳುವ ಒಪ್ಪಿಕೊಳ್ಳುವ "ಭ್ರಮರನ ಲೇಸ ಕಾರುಣ್ಯ" ಎಲ್ಲಿ ಹೋಯಿತು? ಶಿವಧೋ, ಶಿವಧೋ!!' ಎಂದು ಅಣ್ಣನವರು ಮೊರೆಯಿಡುತ್ತಾರೆ.

ಬಸವಣ್ಣನವರ ಆರ್ದ್ರಹೃದಯ—ಭೂತದಯೆಯನ್ನು ಚಿತ್ರಿಸುವ ಹಸು ಕರು ಕಳ್ಳರ ಪ್ರಸಂಗ ನಮಗೆಲ್ಲ ತಿಳಿದೆ ಇದೆ (—'ಬಸವರಾಜದೇವ ರಗಳೆ'ಯಲ್ಲಿ ಹರಿಹರ ಚಿತ್ರಿಸಿರುವುದು). ಅದಕ್ಕೆ ಪೂರಕವಾಗುವ ಒಂದು ಚಿತ್ರ ಇದೆ ಇಲ್ಲಿ:

"ಕಱುವನಗಲಿಸಿ ತಾಯ ಮಱುಗಿಸಿ
ಮೊಲೆಹಾಲ ಕಱದುಣಬೇಡವೊ."

ಕೊನೆಯದಾಗಿ, ಬಸವಣ್ಣನವರ ವಚನಗಳಲ್ಲಿ ಹಾವಿನ ರೂಪಕ ಬಂದಿರುವ ಹಲವು ಬಗೆಗಳನ್ನು ಕಾಣಬಹುದು. ಆದಿಶೇಷನಿಂದ ಹಿಡಿದು ನೀರುಹಾವಿನ ತನಕ ನೂರಾರು ಬಗೆಯಿರುವಂತೆ ರೂಪಕಸೃಷ್ಟಿಯಲ್ಲೂ ಸರ್ಪವು ಹಲವಾರು ಬಗೆಯ ವಸ್ತುವಾಗಬಲ್ಲುದು. ಅವರ ವಚನಗಳಲ್ಲಿ ಹಾವಿನ ಹತ್ತಾರು ಬೇರೆ ಬೇರೆಯ ರೂಪಕಗಳನ್ನು ಕಾಣುತ್ತೇವೆ. ಆದರೂ ಒಂದೊಂದೂ ಸುಂದರವಾಗಿದೆ.

ತಿಳಿಯದವರನ್ನು ಮೋಸಗೊಳಿಸುವುದು ಬಹು ಸುಲಭ. ಅಂತಹವರು ಡಾಂಬಿಕ

ಭಕ್ತರನ್ನು ಕಂಡರೆ ಮೋಸಗೊಳ್ಳದೆ ಇರುತ್ತಾರೆಯೇ ? ಅವರು ಆ ಭಕ್ತರ ವೇಷಘೋಷ ಗಳನ್ನು ಕಂಡು ಬೆಬ್ಬಳಿಸಿ ಹೋದಾರು. ಆದರೆ ಚೆನ್ನಾಗಿ ಅರಿತವರು ಬಲ್ಲರು ಅವರನ್ನು. ಅದನ್ನು ವ್ಯಕ್ತಗೊಳಿಸಲು ಬಸವಣ್ಣನವರು ಈ ರೂಪಕವನ್ನು ಕೊಡುತ್ತಾರೆ :

"ಅಱಿಯದವರಿಗೆ ಒಳ್ಳೆ ಹೆಡೆಯೆತ್ತಿ ಆಡುವಂತೆ ಬೊಳ್ಳೆಗನ ಭಕ್ತಿ."

ನೀರುಹಾವು ಮಾರಕವೇನೂ ಅಲ್ಲ. ಆದರೂ ಹೆದರಿಸಬಲ್ಲದು ; ಅಲ್ಲ, ಅದನ್ನೂ ಕಂಡು ಹೆದರಬಲ್ಲರು—ಹುಲುಸರವಿಯಲ್ಲಿ ಹಾವನ್ನು ಕಾಣುವ ಜನ ! ಒಳ್ಳೆ—ಬೊಳ್ಳೆಗನ ಭಕ್ತಿ ಲೋಗರನ್ನು ಹೆದರಿಸಬಲ್ಲದು ; ಗಾರುಡಿ ಜಂಗಮನನ್ನಲ್ಲ ! ಆದರೆ ಯಾರು ಹಾವು ಯಾರು ಒಳ್ಳೆ-ಯಾರಿಗೆ ಗೊತ್ತು? ಒಬ್ಬೊಬ್ಬರು ಒಂದೊಂದು ಒಳ್ಳೆಗೆ ಹೆದರುತ್ತಿದ್ದಾರೆ!

ಆದರೂ ಹಾವಿನೊಡನೆ ಸರಸವುಂಟೆ? ಯಾವ ಹಾವಾದರೇನು ; ವಿಷ ಮಾತ್ರ ಬೇರೆಯಲ್ಲ; ಅಷ್ಟೇ ಅಲ್ಲ ವಿಷವಿಲ್ಲದಿಲ್ಲ.

"ಸಾರ : ಸಜ್ಜನರ ಸಂಗವ ಮಾಡುವುದು ;
ದೂರ : ದುರ್ಜನರ ಸಂಗ ಬೇಡವಯ್ಯ
ಆವ ಹಾವಾದರೇನು ? ವಿಷವೊಂದೆ :
ಅಂತವರ ಸಂಗ ಬೇಡವಯ್ಯ!"

ಎಲ್ಲಾ ದುಷ್ಟರೂ ಒಂದೆ, ಸ್ವಲ್ಪ ಹೆಚ್ಚು, ಸ್ವಲ್ಪ ಕಡಿಮೆ, ಅಷ್ಟೆ—ಹೀಗೆ ಅನಿಸುತ್ತದೆ. ಇದ್ದಕ್ಕಿದ್ದಂತೆ ಹಾವು ದುಷ್ಟತನದ ಸಂಕೇತವಾಗುತ್ತದೆ.

ಈ ವಚನದ ಮಾತಿನ ಧೋರಣೆಯಲ್ಲಿ ವ್ಯಕ್ತವಾಗಿರುವ ಅತಿಶಯತೆಯನ್ನು ಗಮನಿಸ ಬಹುದು. ಸಜ್ಜನರ ಸಂಗ ಸಾರ, ದುರ್ಜನರ ಸಂಗ ದೂರ ಎಂದಷ್ಟೆ ಹೇಳಿದ್ದರೆ ಸೂಕ್ತಿ ಯಾಗಬಹುದಿತ್ತು. ಕಾವ್ಯತ್ವ ಒದಗುತ್ತಿರಲಿಲ್ಲ. ಇಲ್ಲಿಯ ಮಾತಿನ ಧಾಟಿಯಲ್ಲೆ ಒಂದು ವಿಶೇಷ ಶಕ್ತಿಯಿದೆ. 'ಸಾರ!' 'ದೂರ!' ಎಂದು ತಮ್ಮ ಹೇಳಿಕೆಯನ್ನು ಮೊದಲು ಮಾಡಿ ಅವಕ್ಕೆ ಶಕ್ತಿ ತಂದಿದ್ದಾರೆ. ಮಾತಿಗೆ ಮೊನಚು ಬಂದಿದೆ.

ಭಗವಂತನ ಭಕ್ತರು ಎಲ್ಲರೂ ಒಂದೇ ಬಗೆಯಾಗಿರುವುದಿಲ್ಲ. ಒಬ್ಬೊಬ್ಬರ ಸ್ವಭಾವ ಬೇರೆಬೇರಿರುವಂತೆಯೆ ಭಕ್ತ ಭಕ್ತರಲ್ಲೂ ಅಂತರವಿದೆ. ಕೆಲವರು ಮೌನಿಗಳು, ಮತ್ತೆ ಕೆಲವರು ಕೋಡಂಗಿಯಾಟವಾಡುವಂತೆ ತೋರುವವರು ; ಒಬ್ಬರು ಅನಾಸಕ್ತರು, ಮತ್ತೊಬ್ಬರು ಆರ್ತರು. ಆದರೆ ಭಗವಂತ ಯಾವಾಗಲೂ ನಿಷ್ಕಪಟವಾಗಿರುವ ಭಕ್ತನಿಗೆ ಒಲಿಯುತ್ತಾನೆ. ಅಂತವರು ಕೋಡಂಗಿಯಾಟವಾಡುತ್ತಾರೆ; ಅದೆ ಮೆಚ್ಚು ಅವನಿಗೆ. ಕಾರಣ ಅವರು ತಮ್ಮ ವಿಕಾರವನ್ನು, ಬಾಲವನ್ನು ಯಾವ ಪಿತಾಂಬರದಿಂದಲೂ ಮುಚ್ಚಿಕೊಳ್ಳುವುದಿಲ್ಲ.

"ಶಿವಶರಣರ ಮುಂದೆ ಅ(ಡಿ)ರಯ್ಯಾ ಪಾ(ಡಿ)ರಯ್ಯಾ!
ಕೋಡಂಗಿಯಾಟವನಾಡಿದ ಭಕ್ತಂಗೆ
ಬೇಡಿತ್ತನೀವ ನಮ್ಮ ಕೂಡಲಸಂಗಮದೇವ !"

ಆದರೆ ಈ ಮುಗ್ಧ ಕೋಡಂಗಿಯಾಟವನ್ನು ಮರ್ಕಟಬುದ್ಧಿಯಾಗಿ ಲೋಕ ತಪ್ಪು ತಿಳಿಯುವುದು ಸಾಧ್ಯ. ನಿಜಕ್ಕೂ ಅವೆರಡೂ ಒಂದಲ್ಲ. ಈ ಕೋಡಂಗಿಯಾಟ ಕೊಂಕಲ್ಲ, ಡೊಂಕು ; 'ವಕ್ರತೆ' (ಕಾವ್ಯ ಮೀಮಾಂಸೆಯಲ್ಲಿ ಬಳಸುವ ಅರ್ಥದಲ್ಲಿ). ಆ ಡೊಂಕಿನ ಮೂಲಕವೆ ಲಿಂಗಯ್ಯನಲ್ಲಿಗೆ ದಾರಿ.

"ಹಾವಿನ ಡೊಂಕು ಹುತ್ತಕ್ಕೆ ಸಸಿನ,
ನದಿಯ ಡೊಂಕು ಸಮುದ್ರಕ್ಕೆ ಸಸಿನ :
ನಮ್ಮ ಕೂಡಲ ಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ !"

ಮೇಲಿನ ವಚನದಲ್ಲಿ ಎರಡು ಚಿತ್ರಗಳೂ ಹೇಗೆ ಒಂದು ಘನ ಭಾವನೆಯನ್ನು ಸರಳವಾಗಿ ಧ್ವನಿಸುತ್ತವೆ ನೋಡಬಹುದು. ಈ ವಚನಕ್ಕೆ ಪ್ರಾಯಶಃ ಕಾರಣ ಇದಿರಬಹುದು : ಶರಣರಲ್ಲಿ ನಾನಾ ಜಾತಿಯ ನೀತಿಯವರಿದ್ದರು. ನಂಬಿಯಂತಹ ಭೋಗಿ, ಕಣ್ಣಪ್ಪ ನಂತಹ ಶೂದ್ರ ಮುಗ್ಧಭಕ್ತ ಎಲ್ಲ ಇದ್ದರು. ನಿಯಮಬದ್ಧರಿಗೆ ಅವರೆಲ್ಲ ವಕ್ರ. ಆದರೆ ಆ ವಕ್ರತೆಯೆ ಅವರ ಅನಿವಾರ್ಯ ಸಾಧನ ಮಾರ್ಗವಾಗಿರುತ್ತದೆ. ಡೊಂಕು ಡೊಂಕಾದ ಹಾವು ಹುತ್ತ ಹೊಗದು ; ಸರಳ ರೇಖೆಯಂತೆ ಹರಿದರೆ ನದಿ ಸಾಗರ ಸೇರದು. ಹೀಗೆ ಆ ಎಲ್ಲ ಭಕ್ತವರ್ಗವನ್ನು ಬಸವಣ್ಣನವರು ಸಮರ್ಥಿಸುತ್ತಾರೆ. ತುಂಬಾ ಶಕ್ತನಾಗಿ ಅರ್ಥೈಸುತ್ತಾರೆ.

ಆದ್ದರಿಂದ ಭಗವಂತನ ಶರಣರೊಡನೆ—ಅವರು ಹೇಗೆಹೇಗೊ ಕಾಣುತ್ತಾರೆ ಎಂಬ ಭಾವನೆಯಿಂದ—ಮರೆತಾದರೂ ಸರಸವಾಡಲು ಬರುತ್ತದೆಯೆ? ಹಾಗೆ ಮಾಡುವುದು :

"ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುಱಿಸಿದಂತೆ
ಉರಿವ ಕೊಳ್ಳಿಯ ಕೊಂಡು ಮಂಡೆಯ ಸಿಕ್ಕ ಬಿಡಿಸಿದಂತೆ
ಹುಲಿಯ ಮೀಸೆಯ ಹಿಡಿದುಕೊಂಡು ಒಲಿದುಯ್ಯಾಲೆಯಾಡುವಂತೆ
ಕೂಡಲಸಂಗನ ಶರಣರೆಂದು ಮಱೆದು ಸರಸವಾಡಿದರೆ
ಸುಣ್ಣಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ !"

ಮೇಲಿನ ಬೆಂಕಿ ರೂಪಕ ಮಾಲೆಯಲ್ಲಿ ಒಂದು ಮೃತ್ಯುಭಯಂಕರತೆಯನ್ನೆ ಸೃಷ್ಟಿಸಿ ದ್ದಾರೆ. ಹಾವಿನ ಹೆಡೆಗಳಕೊಂಡು ಕೆನ್ನೆಯ ತುರಿಸಿಕೊಳ್ಳುವುದು ! ಅಬ್ಬ! ಮುಂದಿನೆರಡು ರೂಪಕಚಿತ್ರಗಳಿಗಿಂತಲೂ ಇದು ಒಂದು ರೀತಿಯಿಂದ ಭಯಾನಕವಾಗಿದೆ. ಹಾಗೆಯೆ ಸುಣ್ಣದ ಕಲ್ಲನ್ನು ಮಡಿಲೊಳಗೆ ಕಟ್ಟಿಕೊಂಡು ಮಡುವಿಗೆ ಬೀಳುವುದೂ ಅಷ್ಟೆ, ಮೈಯೆಲ್ಲ ಕುದಿನೀರಿನಲ್ಲದ್ದಿದಂತಾಗುತ್ತದೆ. ಈ ರೂಪಕಗಳನ್ನು ಪರಿಭಾವಿಸುವಾಗ, ಕುಮಾರವ್ಯಾಸ, ದ್ರೌಪದೀ ಮಾನಭಂಗಕ್ಕೆ ಕೌರವ ಚಿಂತಿಸುತ್ತಿದ್ದಾಗ ವಿದುರನ ಬಾಯಿಂದ ಹರಿಸಿರುವ ರೂಪಕಾಗ್ನಿಧಾರೆಯನ್ನು ನೆನೆದುಕೊಳ್ಳುವುದು ಸೂಕ್ತ:

"ಸಿಡಿಲ ಪೊಟ್ಟಣ ಕಟ್ಟಿ ಸೇಕವ
ಕೊಡುವರೇ ?! ಹರನೇತ್ರ ವಹ್ನಿಯೊ
ಳಡಬಳವ ಸುಡಬಗೆದಲಾ ! ಮರುಳೆ ! ಮಹೀಪತಿಯೆ !!

ಹೆಡತಲೆಯ ತುಱುಸುವರೆ ಹಾವಿನ
ಹೆಡೆಯೊಳಕಟಾ! ಪಾಂಡುಪುತ್ರರ
ಮಡದ್ದಿ ತೊತ್ತಹಳೇ! ಶಿವಾ!" ಎಂದಳಲಿದನು ವಿದುರ.
"ಕಾಲಕೂಟದ ತೊಱೆಗಳಲಿ ಜಲ
ಕೇಳಿಯೇ! ಕಾಲಾಂತಕನ ದಂ
ಷ್ಟ್ರಾಳಿಯಲಿ ನವಿಲುಯ್ಯಲೆಯ ನೀವಾಡಲಾಪಿರೆ?
ಕಾಲರುದ್ರನ ಲಳಿಯ ನಾಟ್ಯದ
ಕೇಳಿಕೆಗೆ ನೀವರ್ತಿಕಾಱರೆ?
ಹೋಲದೋ ಶಿವ!" ಎನುತ ಕಂಬನಿದುಂಬಿದನು ವಿದುರ

ಕುಮಾರವ್ಯಾಸನ ಈ ರೂಪಕಮಾಲೆಯಲ್ಲಿನ ಒಂದೆರಡು ಶ್ರೇಷ್ಠ ಚಿತ್ರ ಬಸವಣ್ಣನವರ ವಚನಗಳಲ್ಲಿ ಬಂದಿರುವ ರೂಪಕಗಳನ್ನು ಹೋಲುತ್ತವೆ. ಅವರಿಬ್ಬರ ಭಾವತೀವ್ರತೆ ಉಕ್ತಿಶಕ್ತಿ ಪರಸ್ಪರ ಸಮಾನವಾದದ್ದು, ಭಾವಸಾಹೋದರ್ಯದಿಂದ ಬಂದದ್ದು.*

ಹಾವನ್ನೂ ಹಿಡಿದು ಹಲ್ಲು ಕಳೆದು ಪಳಗಿಸಿ ಹಾವಾಡಿಗರಾಡಿಸುತ್ತಾರೆ. ಅವರು ಅದನ್ನು ಬೀದಿಬೀದಿಯಲ್ಲಿ ಆಡಿಸಿ, 'ನಾಗಪ್ಪನಿಗೆ ಏನಾದರೂ ಹಾಲು ಮೊಟ್ಟೆ ಕೊಡಿ' ಎಂದುಕೊಂಡು ಹೋಗುತ್ತಾರೆ. ಇವರು 'ಹಾವತೋಱಿ ಹವಿಯಬೇಡ' ತಕ್ಕ ಜನ ಎಂದು ತಿಳಿದಿದ್ದೇವೆ. ಸಾಮಾನ್ಯರೂ ಹಾವು ಕಂಡೊಡನೆಯೆ ಭಯಭಕ್ತಿಯಿಂದ ಹಾವಾಡಿಗರಿಗೆ ಕಾಣಿಕೆ ಸಲ್ಲಿಸಿ ಅದಕ್ಕೆ ತನಿಯೆರೆದಂತೆ ಭಾವಿಸುತ್ತಾರೆ. ಅದರಿಂದ ಹಾವಾಡಿಗನ ಹೊಟ್ಟೆ ತುಂಬುತ್ತದೆ. ಪಾಪ ಅವರೆಂಥ ಹವಿಸ್ಸನ್ನು ತಾನೆ ಬೇಡುತ್ತಾರೆ. ಆದರೆ ಭಾಷೆಯನ್ನು ರಾಷ್ಟ್ರೀಯತೆಯನ್ನು, ಧರ್ಮವನ್ನು, ದೇವರನ್ನು, ಅಧ್ಯಾತ್ಮವನ್ನು ಹಿಡಿದಾಡಿಸಿ ಜನದ ಮುಂದೆ ತೋರಿಸಿ ಸ್ವಲಾಭ ಪಡೆಯುವ ಹೀನ ಭಯಂಕರ ಜನ ಯಾವಾಗಲೂ ಉಂಟು. ಬಸವಣ್ಣನವರು ತಮ್ಮನ್ನೆ ಅಂಥ ಜನರ ಗುಂಪಿಗೆ ಸೇರಿಸಿಕೊಂಡು ಕಟುವಾದ ಔಷಧ ತೆಗೆದುಕೊಂಡಿದ್ದಾರೆ.

"ಮಜ್ಜನಕ್ಕೆಱೆವನಲ್ಲದಾನು ಸಜ್ಜನವೆನ್ನಲ್ಲಿಲ್ಲವಯ್ಯ!
ಎನ್ನಲ್ಲೇನನಱಸುವೆ? ನಂಬಿಯೂ ನಂಬದ ಡಂಭಕ ನಾನಯ್ಯ!
ಹಾವ ತೋಱಿ ಹವಿಯ ಬೇಡುವಂತೆ,
ಕೂಡಲ ಸಂಗಮದೇವಾ!"
"ಮೂಗಿಲ್ಲದ ವೇಷಕ್ಕೆ ಶೃಂಗಾರವೆ? ವಿಕೃತವೇಷಧಾರಿಯಾನು!
ಭಂಡನು ಲಜ್ಜೆ ಭಂಡನು!
ಕೂಡಲಸಂಗನ ಶರಣರಲ್ಲಿ ಹಾವತೋಱಿ ಹವಿಯ ಬೇಡುವಂತೆ!
ನೋಡುವರುಳ್ಳರೆ ಮಾಡುವೆ ದೇಹಾರವ!
ಎನಗೊಂದು ನಿಜವಿಲ್ಲ, ಎನಗೊಂದು ನಿಷ್ಪತ್ತಿಯಿಲ್ಲ!

* "ಬಸವಣ್ಣನವರ ಭಾವಸಹೋದರ ನಾರಣಪ್ಪ" ಎಂಬ ಲೇಖನದಲ್ಲಿ ಈ ಅಂಶವನ್ನು ವಿವರವಾಗಿ ನಿರೂಪಿಸುವೆ.

ಲಿಂಗವ ತೋಱಿ ಉದರವ ಹೊರೆವ
ಭಂಗಗಾಱ ನಾನು! ಕೂಡಲಸಂಗಮದೇವ!"

ಬಸವಣ್ಣನವರ ಮಹಾಜಾಗ್ರತ ಪ್ರಾಮಾಣಿಕತೆಗೆ ತಮ್ಮ ಭಗವದ್ ರತಿಯೂ ಆಧ್ಯಾತ್ಮಿಕತೆಯೂ ಜನವಂಚನೆಯೆಂಬಂತೆ ಕಂಡುಬರುತ್ತದೆ. ಅವರಿಗೇ ಹಾಗಾದಲ್ಲಿ ಉಳಿದವರ ಪಾಡೇನು? ಯಾರೆ ಆಗಲಿ ಅತಿಶಯ ಶಕ್ತಿಗಳನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ನಾಚದಿದ್ದಲ್ಲಿ ಅವರಿಗೆ ಆ ಮಹಾಸತ್ತ್ವವೇ ತಕ್ಕ ಶಾಸ್ತಿಯನ್ನು ಮಾಡುತ್ತದೆ; ಬಸವಣ್ಣನವರೇ ಹೇಳುತ್ತಾರೆ: ಕರಸ್ಥಲದ ಲಿಂಗವೆ ಘಟಸರ್ಪವಾಗುವುದೆಂದು.

ಈ ಲಿಂಗ, ಈ ದಿವ್ಯಸತ್ತ್ವ ದಿಟಕ್ಕೂ ದಿಬ್ಯವೆ—ಪಡೆದವನಿಗೂ, ನೋಡುವವನಿಗೂ. ಆದ್ದರಿಂದ ಮೋಸಗಾರನಾದಾಗ ಭಕ್ತನಿಗೂ ಅದು ಯಮ ಭಯಂಕರ; ತುಚ್ಛವಾಗಿ ಕಂಡಾಗ ಅನ್ಯನಿಗೂ ಮಾರಕ. ಆದ್ದರಿಂದಲೆ:

"ಸಂಗಸಹಿತ ಶರಣರು ಬಂದರೆ ನಂಬುವುದೆನ್ನ ಮನವು,
ನಚ್ಚುವುದೆನ್ನ ಮನವು!
ಹಾವು ನೇಣೆಂಬ ಭ್ರಾಂತುಳ್ಳನಕ್ಕ ನಾನು ಭಕ್ತನೆಂತೆಪ್ಪೆನಯ್ಯಾ"

ಎಂದು ಹೇಳುತ್ತಾರೆ.

ಹಾವು ಎಲ್ಲೂ ಇಲ್ಲ, ನಮ್ಮಲ್ಲಿಯೆ ಇದೆ; ವಿಷ ಎಲ್ಲೂ ಇಲ್ಲ ನಮ್ಮೊಳಗೆ ಇದೆ. ಅದರಿಂದ ಪಾರಾಗುವ ದಾರಿಯೆಂದರೆ ಆ ಹಾವು ವಿಷವಮನ ಮಾಡುವಂತೆ ಸಾಧಿಸಬೇಕಷ್ಟೆ. ಆದರೆ ನೆನಪಿರಬೇಕು, ಮೊದಲು ಶಿವನಾಮದ ಗಾರುಡಮಂತ್ರವನ್ನು ಕೈಯಲ್ಲಿ ಹಿಡಿದೆ ಇರಬೇಕು; ಆಮೇಲೆ ಹಲ್ಲು ಕೀಳುವುದು; ಅದೂ ಆಗಿ ಶಕ್ತಿ ಇದ್ದರೆ ಅದರ ವಿಷ ಕಾರಿಸುವುದು. ಆದರೆ ಶಿವಕೃಪೆಯಿಲ್ಲದೆ ಅಂತರಂಗ ಆತ್ಮಶುದ್ಧಿಗಳಿಲ್ಲದೆ ಬರಿಯ ಕಾಯಕ್ಲೇಶ ಮಾತ್ರವಾದ ತಪಸ್ಸಿನಿಂದ ಆಗಬಹುದಾದ ಸಿದ್ಧಿ ಹೆಚ್ಚೇನೂ ಇಲ್ಲ.

"ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ?"
ಅಘೋರತಪವ ಮಾಡಿದೊಡೇನು?
ಅಂತರಂಗ–ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯ ಕೂಡಲಸಂಗಮದೇವ

ಬಡಿಗೆ ಮುರಿಯುತ್ತದೆ; ಕೈ ಬೊಬ್ಬೆಯೇಳುತ್ತದೆ; ಹೆಚ್ಚೆಂದರೆ ಹುತ್ತಕ್ಕೆ ಬಾಸುಂಡೆ ಬಂದೀತು! ಅಷ್ಟೆ! ಹಾವು ಸಾಯದು. ಈ ಹಾವು ಒಬ್ಬೊಬ್ಬರ ಸ್ವಭಾವದ ಒಂದೊಂದು ಹುತ್ತದಲ್ಲಿ ಒಂದೊಂದು ರೂಪದಿಂದ ಇರುತ್ತದೆ. ಸಿರಿಗರ ಹೊಡೆದವನಲ್ಲಿ ಅದು ಸಾಧಾರಣ ಹಾವಾಗಿರುವುದಿಲ್ಲ. ತಕ್ಕ ಮಂತ್ರವಾದಿ—ಬಡತನ ಎಂಬ ಮಂತ್ರವಾದಿ–ಹೋದರೆ ಪಕ್ಕನೆ ಅವನು ನುಡಿಯುತ್ತಾನೆ.

"ಹಾವು ತಿಂದವರ ನುಡಿಸಬಹುದು:
ಗರಹೊಡೆದವರ ನುಡಿಸಬಹುದು:
ಸಿರಿಗರ ಹೊಡೆದವರ ನುಡಿಸಲುಬಾರದು ನೋಡಯ್ಯಾ!
ಬಡತನವೆಂಬ ಮಂತ್ರವಾದಿ ಹೋಗಲು ಒಡನೆ ನುಡಿವರಯ್ಯ."

ಹೀಗೆ ಒಬ್ಬೊಬ್ಬರು ಒಂದೊಂದು ರೀತಿ ಸರ್ಪದಷ್ಟರಾಗಿರುತ್ತಾರೆ. ಸಂಸಾರ ಯಾರನ್ನೂ ಬಿಡದೆ ಮುಟ್ಟುವ ಸರ್ಪ. ಒಮ್ಮೆ ಬಸವಣ್ಣನವರೂ ಹೊರತಾಗಿರಲಿಲ್ಲ? ಆದರೆ ಅವರು ಶಿವಗಾರುಡ ಮಂತ್ರ ಜಪಿಸಿ ಬದುಕುತ್ತಾರೆ.

*"ಸಂಸಾರವೆಂಬ ಸರ್ಪ ಮುಟ್ಟಲು
ಪಂಚೇಂದ್ರಿಯ ವಿಷಯವೆಂಬ ವಿಷದಿಂದೆ
ಆನು ಮುಂದುಗೆಟ್ಟೆನಯ್ಯಾ ; ಆನು ಹೊರಳಿ ಬೀಳುತಿರ್ದೆನಯ್ಯ
'ಓಂ ನಮಃ ಶಿವಾಯ' ಎಂಬ ಮಂತ್ರವ ಜಪಿಸುತ್ತಿರ್ದೆನಯ್ಯಾ !"

ಈ ಹಾವು ಎಷ್ಟು ಜನರನ್ನು ನುಂಗಿದೆಯೊ ತಿಳಿಯದು. ನುಂಗಿ ನುಂಗಿ ಅದರ ತಲೆಬಾಲವೆಲ್ಲ ಕಳಚಿಹೋಗಿರಬೇಕು, ಇಲ್ಲವೆ ಅದಕ್ಕೆ ಆ ಯಾವುದೂ ಇಲ್ಲದಿರಬೇಕು. ಆದ್ದರಿಂದಲೆ ಇದು ಅತಿ ಭಯಂಕರವಾಗಿದೆ. ಇದನ್ನು ಗೆಲ್ಲಲು ಬರಿಯ ಗಾರುಡಿಗತನವೂ ಸಲ್ಲದು. ಗಾರುಡಿಗ ಅಹಂಕಾರಿ ಆದರಂತೂ ಕೇಳುವಂತೆಯೆ ಇಲ್ಲ.

"ಹಲುಬರ ನುಂಗಿದ ಹಾವಿಂಗೆ ತಲೆಬಾಲವಿಲ್ಲ ನೋಡಾ :
ಕೊಲುವುದು ತ್ರೈಜಗವೆಲ್ಲವ : ತನಗೆ ಬೇಱೆ ಪ್ರಳಯವಿಲ್ಲ ;
ನಾಕಡಿಯನೈದುವುದು : ಲೋಕದ ಕಡೆಯನೆ ಕಾಣ್ಬುದು ;
ಸೂಕ್ಷ್ಮಪಥದಲ್ಲಿ ನಡೆವುದು ; ತನಗೆ ಬೇಱೆ ಒಡಲಿಲ್ಲ ;
ಅಹಂ ಎಂಬ ಗಾರುಡಿಗನ ನುಂಗಿತ್ತು,
ಕೂಡಲಸಂಗನ ಶರಣರಲ್ಲದುಳಿದವರ !

ಈ ಸೂಕ್ಷ್ಮಪಥಗಾಮಿಯಾದ ತಲೆ ಬಾಲಗಳಿರದ ಸರ್ಪದಿಂದ ತಪ್ಪಿಸಿಕೊಳ್ಳುವುದಾದರೂ ಹೇಗೆ? ಇದು ಪ್ರಾಯಶಃ ಕಾಮಕ್ಕೆ ಸಂಕೇತವಾಗಿರಬಹುದು. ಇದಕ್ಕೆದುರು ಯಾವ ಗಾರುಡಿಗತನವೂ ರಕ್ಷೆಗೆ ಬಾರದು. ಏಕೆಂದರೆ ಇದು ಅಹಂ ಗಾರುಡಿಗನನ್ನೂ ನುಂಗಿದೆ. ಆದ್ದರಿಂದಲೆ ಇದನ್ನು ಬರಿಯ ಬುದ್ಧಿ ಅಹಂಗಳಿಂದಲೂ ನಿಯಂತ್ರಿಸ ಬರುವುದಿಲ್ಲ. ಶಿವಮಂತ್ರ ಬೇಕು, ನಿರಹಂಕಾರ ಬುದ್ಧಿ ಬೇಕು. ಇದು ದೊರೆಯುವುದು ಹೇಗೆ? ಶಿವ ಕರುಣೆ, ಭಕ್ತಿ, ಶ್ರದ್ಧೆ, ಶರಣಸೇವೆಗಳೆ ಬೇಕು. ಶ್ರದ್ಧಾಭಕ್ತಿ ಇದ್ದವರು ಈ ಸರ್ಪದಿಂದ ದಷ್ಟರಾದರೂ ಬದುಕುತ್ತಾರೆ, ಶಂಕಿತರು ಅದು ಕಚ್ಚುವುದಿರಲಿ, ಬರಿಯ ಹುತ್ತದ ಮೇಲಣ ಹಗ್ಗವನ್ನು ಕಂಡೆ ಹೆದರಿ ಸಾಯುತ್ತಾರೆ :

"ಹುತ್ತದ ಮೇಲಣ ರಜ್ಜು ಮುಟ್ಟಿದರೆಯೂ
ಸಾವರು : ಶಂಕಿತರಾದವರು.
ಸರ್ಪದಷ್ಟವಾದರೆಯೂ
ಸಾಯರು : ನಿಶ್ಶಂಕಿತರಾದವರು.

* "ಸಂಸಾರವೆಂಬ ಶ್ವಾನನಟ್ಟಿ ಮಿಾಸಲ ಬೀಸರ ಮಾಡದಿರಯ್ಯ" ಎಂಬ ರೂಪಕವನ್ನು ಇದರೊಡನೆ ಹೋಲಿಸಬಹುದು. ಒಂದು ವಸ್ತು ಎಷ್ಟು ಭಾವಗಳಾಗಿ ಎಷ್ಟು ರೂಪಕಗಳಾಗಿ ಅನುಭವವಾಗಿದೆ ಎಂಬುದನ್ನೂ ನೋಡಬಹುದು.

ಕೂಡಲ ಸಂಗಮದೇವಯ್ಯಾ,
ಶಂಕಿತಂಗೆ ಪ್ರಸಾದ ಸಿಂಗಿ ಕಾಳಕೂಟವಿಷವು."

ಶ್ರದ್ಧಾಭಕ್ತರು, ಶಿವಕರುಣೆಯ ಕಂದರು ಸಂಸಾರದಲ್ಲಿದ್ದೂ ಬದುಕುತ್ತಾರೆ. ಶಂಕಿತರು ಪ್ರಸಾದ ಸೇವಿಸಿಯೂ ಸಾಯುತ್ತಾರೆ.

ಹುಟ್ಟಿದ ಮನುಷ್ಯ ಸಾಯಲೇಬೇಕು. ಸಾಯುವುದು ಸಿದ್ಧವಾಗಿದ್ದೂ ಏಕಿನ್ನೂ ಅವನು ಇಹಮೋಹವನ್ನು ಒಂದಿನಿತೂ ಕುಗ್ಗಿಸಿಕೊಂಡಿಲ್ಲ? ಬಯಕೆಯನ್ನೇ ನೂತು, ನೇದು, ಹಾಸಿ ಹೊದೆದುಕೊಳ್ಳುತ್ತಿದ್ದಾನಲ್ಲ? ಹೀಗೆಂದು ಭವಮುಕ್ತರೆಲ್ಲ ಚಿಂತಿಸುತ್ತಲೆ ಇದ್ದಾರೆ. ಈ ಮಾನವನ ದುರಂತತೆಯನ್ನು ಕೊನೆಗಾಣಿಸಲೆಂದು ಸಂಸಾರದ ಅಸಾರತೆಯನ್ನು ಅನಿತ್ಯತೆಯನ್ನು ಸುಖಘೋರ ಭಯಂಕರತೆಯನ್ನು ಜೈನರೆ ಮೊದಲಾದವರೆಲ್ಲ ಸಾರಿದ್ದಾರೆ; ನೂರಾರು ವೈರಾಗ್ಯಶತಕಗಳನ್ನು ಹಾಡಿದ್ದಾರೆ. ಹತ್ತಾರು ರೂಪಕಗಳನ್ನು ಕಡೆದಿದ್ದಾರೆ. ಬಸವಣ್ಣನವರು ಮುಂದಿನ ಎರಡು ರೂಪಕಗಳಲ್ಲಿ ಹತ್ತಾರು ವೈರಾಗ್ಯ ಶತಕಗಳೂ ಉಂಟುಮಾಡಲಾರದ ಪರಿಣಾಮವನ್ನು ತಂದಿದ್ದಾರೆ.

"ಕಪ್ಪೆ ಸರ್ಪನ ನೆಳಲಿನಲ್ಲಿಪ್ಪಂತೆನಗಾಯಿತ್ತಯ್ಯ"
"ಹಾವಿನ ಬಾಯ ಕಪ್ಪೆ ಹಸಿದು
ಹಾರುವ ನೊಣಕ್ಕೆ ಆಸೆ ಮಾಡುವಂತೆ—"

ಹಾವಿನ ಹೆಡೆಯ ಕೊಡೆಯಡಿಯ ನೆಳಲಲ್ಲಿ ಮಲಗಿರುವ ಕಪ್ಪೆಯ ಚಿತ್ರವೊಂದು ಕಡೆ. ಅದರ ಬಾಯೊಳಗೆ ಸಿಲುಕಿದ್ದರೂ ಹಸಿವಾದ ಕಾರಣ ತನ್ನ ಮುಂದೆ ಹಾರುವ ನೊಣಕ್ಕೆ ಆಸೆಪಡುವ ಕಪ್ಪೆಯ ಚಿತ್ರ ಮತ್ತೊಂದು ಕಡೆ—ಒಂದಕ್ಕಿಂತ ಮತ್ತೊಂದು ಭಯಂಕರವಾಗಿದೆ. ಎರಡನ್ನೂ ಸಮಾಕರಿಸಿದ್ದಿದ್ದರೆ ಮತ್ತೂ ಸುಂದರವಾಗಿರುತ್ತಿತ್ತು, ಈ ರೂಪಕ. ಅದರಲ್ಲಿ ಎರಡು ಪ್ರತ್ಯೇಕ ಚಿತ್ರಗಳು ದೊರೆತಿವೆ; ಕಣ್ಣಿಗೆ ಕಟ್ಟಿದಂತೆ, ಚಿತ್ರಕಲಾವಿದನ ಕುಂಚಕ್ಕೆ ರಸವಸ್ತುವಾಗಿ ಸಿದ್ಧವಾಗಿರುವಂತೆ ನಿಂತಿವೆ. ಆ ನೆಳಲು, ಆ ಶೀತ ಶರೀರಿಯು ನೀಡಿದ ಹರಕೆಯ ಅಂಗೈ ಅಡಿಯ ನೆಳಲು ಎಷ್ಟು ತಂಪು! *ಅಲ್ಲಿ ಮಲಗಿದೆ ಕಪ್ಪೆ. ಇಲ್ಲ, ಅದರ ಬಾಯೊಳಗಿದೆ. ಅಲ್ಲಿ ಅದಕ್ಕೆ ಹಸಿವಾಗಿದೆ! ತನ್ನ ಮುಂದೆ ಹಾರುವ ತನ್ನ ಉಣಿಸಿನ ಕಡೆ ಹಾರಲೆಳಸಿದೆ! ಹಾರಲೆಳಸುವುದೆ ಅದನ್ನು ಹಾವಿನ ಮೊನಚಾದ ಬಾಗುಹಲ್ಲಿಗೆ ಬಲಿಯಾಗಿಸುತ್ತದೆ. ಆದರೂ ಮೃತ್ಯು ಛತ್ರದಡಿ ತಂಪುರ್ಕೋಂಪು. ಮೃತ್ಯುದಂಷ್ಟ್ರದಲ್ಲಿ ಹಸಿವಿನ ಅನುಭವ, ಆಹಾರದ ಬೇಟೆ! ದುರಂತವಾದರೂ ದುರಂತದಂತೆ ಕಾಣದೆ ರಮಣೀಯವಾಗಿ ತೋರುವುದೆ ಈ ದುರಂತತೆಯ ತಿರುಳು. ಮಾನವನ

* ಕಪ್ಪೆಗೆ ಸೆಕೆಯನ್ನು ತಾಳುವುದಕ್ಕಾಗುವುದಿಲ್ಲ. ಬೇಸಿಗೆಯ ಕಾಲದಲ್ಲಿ ನೋಡಬೇಕು ಅವುಗಳ ಕಷ್ಟವನ್ನು. ನಲ್ಲಿ ನೀರು ಬೀಳುವೆಡೆಯಲ್ಲೇ ಮಲಗಿರುತ್ತವೆ. ಮೊದಲ ಮಳೆ ಬಂತೆಂದರೆ ಸಾಕು, ರೈತರಿಗಿಂತ ಹೆಚ್ಚು ಹಿಗ್ಗು ಅವಕ್ಕೆ. ಅಂಥ ಕಪ್ಪೆ ಶೀತಲವಾದ ನಾಗರಹಾವಿನ ಹೆಡೆಯ ತಂಪು ನೆರಳಿನಲ್ಲಿ ಹೊಂಪೇರಿ ಮಲಗಿದರೇನು ಆಶ್ಚರ್ಯ !

ದುರಂತತೆಯನ್ನು ಇದಕ್ಕಿಂತಲೂ ಪರಿಣಾಮಕಾರಿಯಾಗಿ ಚಿತ್ರಿಸಬಹುದೆ? ಮುಂದಿನ ವಚನ ಬೇರೊಂದು ಬಗೆಯಾಗಿ ಸಾಹಸಮಾಡಿದೆ.

"ನಾನಾ ವರ್ಣದ ಸಂಸಾರ ಹಾವು ಹಾವಾಡಿಗನ ಸ್ನೇಹದಂತೆ."

ಸಂಸಾರ ನಾನಾರಾಗಗಳ ಸಂಗಮಸ್ಥಾನ. ಎಲ್ಲ ರಾಗಗಳೂ ಸರಾಗವಾದಾಗ ಸಂಸಾರ ಸಸಾರವಾಗುತ್ತದೆ; ಅವು ಕೆರಳಿದಾಗ ವಿಷಾದವಾಗುತ್ತದೆ; ವಿಷಸಾರವಾಗುತ್ತದೆ. ಮಾನವ ಹೃದಯದ ಒಂದೊಂದು ರಾಗವೂ ಒಂದೊಂದು ಬಣ್ಣದ ಹಾವು. ಈ ಸಹಸ್ರ ವರ್ಣದ ಹಾವಿನೊಡನೆ ಹಾಡುವುದೆ ಆಡುವುದೆ ಸಂಸಾರ. ನಾವೇನೊ ಆಡುತ್ತೇವೆ. ಕೈಯಲ್ಲಿ ಪುಂಗಿಯಿದೆಯೆಂಬ, ನಮ್ಮ ಹಾಡಿಗೆ ಹಾವುಗಳು ತಲೆದೂಗುತ್ತಿವೆ ಎಂಬ ಭ್ರಮೆಯಿಂದ. ಎಷ್ಟು ಹೊತ್ತು ತಾನೆ ಅದೇ ರಾಗ ಅದೇ ತಾನ ಅವುಗಳನ್ನು ಸೆರೆ ಹಿಡಿದಿಟ್ಟುಕೊಂಡಿದ್ದಾವು? ಎಷ್ಟು ಗಳಿಗೆ ತಾನೆ ಅಪರಾಗವಲ್ಲದಂತೆ ನಾವೂ ನುಡಿಸಿಯೇವು? ಯಾವಾಗಲೊ ಯಾರಿಗೆ ಗೊತ್ತು, ಬುಸ್ಸೆಂದು ಹೆಡೆಯೆತ್ತಿ ಅಪ್ಪಳಿಸ ಬರುತ್ತವೆ. ಗರುಡ ಮಣಿಯಿದ್ದವರು ಮಾತ್ರ, ಗರುಡಮಂತ್ರ ಬಲ್ಲವರು ಮಾತ್ರ, ಅಮೃತರಾಗುತ್ತಾರೆ. ಉಳಿದವರು ಬೇಯುತ್ತಾರೆ.

ಆದರೆ ಈ ವರ್ಣನಾಗರಗಳೊಡನಾಟ ಎಷ್ಟು ರಮ್ಯ! ಬರಿಯ ನಾಗರನಲ್ಲ. ಬಣ್ಣ ಬಣ್ಣದ ನಾಗರಗಳು! ನಾಗರಹಾವು ತನಗೆ ತಾನೆ ಬಹು ಸುಂದರ. ನಮ್ಮ ಕಣ್ಣಿಗೆ ಈಗ ಅವು ಹಾಗೆ ಕಾಣದಿರಬಹುದು. ಅವುಗಳ ವಿಷಯವಾಗಿ ಏನೂ ತಿಳಿದಿಲ್ಲದ ಅವುಗಳನ್ನು ಕಂಡಿಲ್ಲದ ಜನರಿಗೆ ಅವು ಹೊಸದಾಗಿ ಕಂಡಾಗ ಕಾಣುವ ಬಗೆಯು ಬೇರೆ. ಇಂತಹ ಸುಂದರ ಸಹಸ್ರವರ್ಣದ ನಾಗರಗಳು ಸುತ್ತಲೂ ಪುಂಗಿಯ ನಾದಕ್ಕೆ ನರ್ತಿಸುತ್ತಿರುವಾಗ, ನೆರೆದ ಜನ ಮುಗ್ಧರಾಗಿರುವಾಗ ಯಾವ ಹಾವಾಡಿಗನಿಗೆ ತಾನೆ ತನ್ನ ಪುಂಗಿಯನಾದ ತನಗೇ 'ಮತ್ತು' ಬರಿಸದು; ಆ ನರ್ತನ ಸೊಕ್ಕು ತರಿಸದು? ಹಾಗೆ ಸಾಗಿದೆ ಈ ಆಟ.

ಇಲ್ಲಿ ಒಂದೊಂದು ವರ್ಣದ ನಾಗರವೂ ಒಂದೊಂದು ರಾಗಕ್ಕೆ ಸಂಕೇತವಾಗಿರುವುದು ವೇದ್ಯವಾಗದಿರದು. ಪ್ರೀತಿ ಎಂಬುದು ನೀಲ; ಕೋಪ ಕೆಂಪು; ತ್ಯಾಗ ವೈರಾಗ್ಯಗಳು ಕಾವಿ; ಸಮೃದ್ಧಿ ಹಸಿರು; ಶುಭ್ರತೆ ಧವಳ, ಇತ್ಯಾದಿ ಭಾವನೆಗಳು—ಅಷ್ಟೇ ಏಕೆ ಮನೋವಿಜ್ಞಾನದ ಪ್ರಕಾರವಾಗಿಯೂ ಸತ್ಯವಾದ ಭಾವನೆಗಳು—ನಮ್ಮಲ್ಲಿವೆ. ಈ ವರ್ಣನಾಗರಗಳೆ ಸಂಸಾರಿ ಹಾವಾಡಿಗನ ಬುಟ್ಟಿಯಲ್ಲಿರುವ ಆಟದ ವಸ್ತು; ಒಬ್ಬೊಬ್ಬನ ಬುಟ್ಟಿಯಲ್ಲಿ ಒಂದೊಂದು ವರ್ಣದ ನಾಗರ ಪ್ರಧಾನ; ಹೇರಳ. ಅವರ ಬುಟ್ಟಿಯ ವಸ್ತು ಇವರಿಗೆ, ಇವರ ಬುಟ್ಟಿಯ ನಾಗರ ಅವರಿಗೆ ಚೋದ್ಯವಾಗಿ ತೋರುವುದರಿಂದ ಎಲ್ಲರೂ ಪರಸ್ಪರ ನಾಗರ ಕ್ರೀಡೆಗೆ ಮುನ್ನುಗ್ಗುತ್ತಿದ್ದಾರೆ; ಪುಂಗಿಯೊಂದನ್ನೆ ಹಿಡಿದು (ಅದನ್ನು ಹಿಡಿಯದವರೂ ಇದ್ದಾರು!) ಶಿವ ಗರುಡ ಮಂತ್ರವನ್ನು ಮರೆತವರೆ ಎಲ್ಲ!

ಈ ಹಾವುಗಳು ಎಲ್ಲೋ ಹೊರಗಿದ್ದಿದ್ದರೆ ಅವುಗಳಿಂದ ದೂರವೇ ಇರಬಹುದಾಗಿತ್ತು. ಆದರೆ ಹೊರಗಿರಲು ಅವು ತಾನೆ ಯಾವು, ನಮ್ಮ ರಾಗಭಾವಗಳೆ ಆ ವರ್ಣ ನಾಗರ ಸಮೂಹವಾಗಿರುವಾಗ. ಅಷ್ಟೆ ಏಕೆ, ಸಮಸ್ತ ಭಾವರಾಗಗಳಿಗೂ ಕಾರಣವಾದ ಮನಸ್ಸೆ ಹಾವಾಗಿದೆ; ಸಾವಿರ ಹೆಡೆಯ ಆದಿಶೇಷನಾಗಿದೆ. ಅದನ್ನು ಈ ದೇಹದ ಹೇಳಿಗೆ ಮುಚ್ಚಿದೆ. ಆಗಾಗ ಅದು ಮುಚ್ಚಳ ತಳ್ಳಿ ಹೊರಕ್ಕೆ ಚಾಚಿಕೊಂಡು ಹೆಡೆಯಾಡಿಸುತ್ತದೆ. ತತ್‌ಕ್ಷಣವೆ ಒಂದಷ್ಟು ಪುಂಗಿಯನಾದ, ಒಂದಷ್ಟು ಅದಕ್ಕೆ ಬೇಕಾದ ಆಹಾರ ಕೊಟ್ಟರೆ ಸಾಕು. ಹೀಗೆ ನಡೆದಿದೆ ಈ ವ್ಯಾಪಾರ, ಹಾವನ್ನು ಸಾಂತ್ವನಗೊಳಿಸಿಟ್ಟುಕೊಳ್ಳುವ ವ್ಯಾಪಾರ. ಆದರೆ ಇದರಲ್ಲಿ ಯಾವ ಸುರಕ್ಷಣಭಾವ ತಾನೆ ಇದೆ. ಹಾಗೆಂದು ಬಿಡುವಂತಿದೆಯೆ? ಇಲ್ಲವೆ ಇಲ್ಲ. ಬಾಳಲೇಬೇಕು, ಹುದುವಾಳಲೇಬೇಕು ಆ ನಾಗರನೊಡನೆ. ಯಾವಾಗ ಕಚ್ಚುವುದೊ?

ಮನವೇ ಸರ್ಪ, ತನುವೇ ಹೇಳಿಗೆ :
ಹಾವಿನೊಡತಣ ಹುದುವಾಳಿಗೆ !
ಇನ್ನಾವಾಗ ಕೊಂದಹುದೆಂದಱಿಯೆ !
ಇನ್ನಾವಾಗ ತಿಂದಹುದೆಂದಱಿಯೆ !
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ
ಅದೇ ಗಾರುಡ, ಕೂಡಲಸಂಗಮದೇವ !

ಆ ಶಿವಮಂತ್ರದ ಗಾರುಡ ಕೈಲಿದ್ದರೆ ಹಾವಿನೊಡಬಾಳುವ ಕಷ್ಟವೇಕೆ. ಅಕ್ಕಮಹಾದೇವಿ ಹೇಳುತ್ತಾರೆ 'ಹಲ್ಲ ಕಳೆದು ಹಾವ ಆಡಿಸಬಲ್ಲರೆ ಹಾವಿನ ಸಂಗವೇ ಲೇಸುಕಂಡಯ್ಯ' ಎಂದು. ಸಂಸಾರದಲ್ಲೆ ಕಾಮಾದಿ ರಾಗಗಳ ಮಧ್ಯೆ ಇರಬಹುದು. ಇರಬೇಕು ಹೇಗಿರಬೇಕೆಂದರೆ ಆ ಹಾವಿನ ಹಲ್ಲ ಕಳೆದು ಅದರೊಡನಿರಬೇಕು. ಅದು ಬುಸ್ಸೆಂದರೂ ಆಗ ಅದಕ್ಕೆ ನೋವೆ ಹೊರತು ನಮಗಾವ ಸಾವೂ ಇಲ್ಲ. ತಿಳಿಯದ ಇತರರಿಗೆ ನಾವು ಸತ್ತೆವೆಂದೆ ಭ್ರಮೆ!....ಆದರೆಚ್ಚರ! ಹಲ್ಲಷ್ಟೆ ಕಳೆಯಬಹುದು; ಹಾವಿನ ವಿಷಕೋಶವನ್ನಲ್ಲ! ಹಾಗೂ ಆ ಹಲ್ಲು ಮತ್ತೆ ಬೆಳೆಯದೆಂಬ ಅಭಯವಿಲ್ಲ, ಅಥವಾ ಕಿತ್ತವರಾದರೂ ಬುಡ ಮುಟ್ಟ ಕಿತ್ತಿರುತ್ತಾರೆಂಬ ನಿಶ್ಚಯವಿಲ್ಲ. ಅದರಿಂದ ಸದಾ ಜಾಗೃತನಾಗಿಯೆ ಇರಬೇಕು.... ಹಾಗೂ ಆ ಹಾವಿನ ಹಲ್ಲನ್ನು ಕಳೆಯುವ ಶಕ್ತಿ ಎಷ್ಟು ಜನಕ್ಕಿದೆ' ಗಾರುಡ ಮಂತ್ರ ಇದ್ದರೆ ತಾನೆ?

ಭಾವಿಸುತ್ತ ಭಾವಿಸುತ್ತ ಹೋದಂತೆಲ್ಲಾ ನಿಸ್ತೀರವಾಗುತ್ತ ಹೋಗುತ್ತವೆ, ಈ ರೂಪಕಗಳು. ಹೀಗೆ ಬಸವಣ್ಣನವರಲ್ಲಿ ನೂರಾರು ಪ್ರಾಣಿ ರೂಪಕಗಳನ್ನು ಆನಂದಿಸುವಾಗ ಅಲ್ಲಿ ಸ್ಪಂದಿಸಿರುವ ಅವರ ಹೃದಯದ ನೂರಾರು ಅವಸ್ಥೆಗಳನ್ನೂ ಕಂಡು ಭಾವ ಶ್ರೀಮಂತರಾದಂತೆ ಆಗುತ್ತೇವೆ. ಬಸವಣ್ಣನವರ ವಚನಗಳಲ್ಲಿ ಬರುವ ರೂಪಕಕ್ಕೆ ವಸ್ತು ಇಂಥದೆ ಎಂದೇನೂ ಮಿತಿಯಿಲ್ಲ. ಅವರ ಚೇತನದ ದರ್ಶನವನ್ನು ಪಡೆಯಬೇಕಾದರೆ ಅವರ ವಚನಗಳಿಗೆ ಶರಣುಹೋಗಬೇಕು. ಸಿಕ್ಕಿರುವ ವಚನಗಳು ಸುಮಾರು ಒಂದು ಸಾವಿರ. ಏಕಾಂತದಲ್ಲಿ ಅರಳಿ ಯಾರ ಕಣ್ಣಿಗೂ ಕಾಣದೆ ಉರುಳಿಹೋದ ವನಕುಸುಮ

ಕೋಟಿಯೆಷ್ಟೊ! ಅವರ ಶ್ರೀಮಂತ ಚೇತನವನ್ನು 'ಸಂಪೂರ್ಣ'ವಾಗಿ ಈಗಿರುವ ವಚನ ಕಾಣಿಸುತ್ತವೆಯೆಂದಲ್ಲ. ಆದರೆ ಅವು ಅವರ ಹೃದಯದ ವ್ಯಕ್ತಲೋಕದ ಒಂದು 'ಖಂಡ'ವನ್ನಿಲ್ಲಿ ಮಾತ್ರ ಕಾಣಿಸುತ್ತವೆ. ಅಷ್ಟರಿಂದಲೆ ಆ ಲೋಕ ಎಷ್ಟು ಶ್ರೀಮಂತ ಎಂದು ತಿಳಿಯುತ್ತದೆ!

ಪ್ರಾಣಿರೂಪಕಗಳು ಪ್ರಧಾನತಃ ಅಂತರಂಗದ "ತಿರ್ಯಙ್ಮಾನವ ಸ್ವಭಾವ"ದ ಸಂಘರ್ಷಣವನ್ನು ಹೆಚ್ಚಾಗಿ ಚಿತ್ರಿಸುತ್ತವೆ. ಈ ಘರ್ಷಣೆ ಸಾಧನೆಯ ಪ್ರಾರಂಭಾವಸ್ಥೆಯಲ್ಲಿ ಅಥವಾ, ಮನಸ್ಸಿನ ವಿಷಮಸ್ಥಿತಿಯಲ್ಲಿ ತೀವ್ರತರವಾಗಿ ಇರುವುದರಿಂದ ಆ ಸ್ಥಿತಿಯ ಅಭಿವ್ಯಕ್ತಿ ಆ ಮಾಧ್ಯಮದಿಂದಲೆ ಪ್ರಧಾನವಾಗಿ ವ್ಯಕ್ತವಾಗಿದೆ. ಮುಂದೆ, ಅಥವಾ, ಆ ಮಧ್ಯೆ ಮಧ್ಯೆ ಈ ಹೋರಾಟ ಶಮಗೊಳ್ಳುತ್ತ ಹೋದಂತೆ, ಅನುಭವಗಳು ತೀವ್ರ ಮಧುರವಾಗುತ್ತ ಹೋದಂತೆಲ್ಲಾ ಪ್ರಧಾನವಾಗಿ ಆಗ ಬೇರೆ ರೂಪಕಗಳು ಬರುತ್ತವೆ.

ಈ ತನಕವೂ ವಿವರಿಸಿಕೊಂಡು ಬಂದ ರೂಪಕಗಳೆಲ್ಲವೂ ಒಂದೇ ವರ್ಗದವು ಎಂದು ಯಾರೂ ಭಾವಿಸರು. ಸಾದೃಶ್ಯಮಾತ್ರವಾಗಿ ಬರತಕ್ಕ ರೂಪಕಗಳುಂಟು, 'ಸಾದೃಶ್ಯಶ್ರೀ' ಆಗತಕ್ಕವೂ ಉಂಟು; ಪ್ರತಿಮೆಗಳಾಗುವ ರೂಪಕಗಳೂ ಉಂಟು. ಹಾಗೂ ಬಸವಣ್ಣನವರದೆ ಅಲ್ಲದೆ 'ಸಾಮಾನ್ಯ'ವಾದ ರೂಪಕಗಳೂ ಉಂಟು. ಹೀಗಿದ್ದರೂ ಪ್ರಾಣಿಗಳನ್ನು ಪ್ರಧಾನತಃ ಮಾನವನ ವಿವಿಧಪ್ರಾಣಿ ಸ್ವಭಾವಗಳನ್ನು ವ್ಯಕ್ತಗೊಳಿಸಲು ವಿಶೇಷವಾಗಿ ಬಳಸಿಕೊಳ್ಳಲಾಗಿದೆ. ಉದಾಹರಣೆಗೆ ನಾಯಿ, ಹಾವು. ಇವೆರಡೂ ಕೂಡ ಬಹಳ ಉನ್ನತ ಗುಣಕ್ಕೆ ರೂಪಕಗಳಾಗಿ ಬಂದಿಲ್ಲ. ಆದರೆ ಆಧ್ಯಾತ್ಮಿಕ ಪ್ರಪಂಚದಲ್ಲಿ ನಾಯಿಗೆ ಜಾಯಾಲ, ಧರ್ಮದ ಪ್ರತಿನಿಧಿ ಎಂಬೆಲ್ಲ ವಿಶೇಷ ಭಾವಾರ್ಥಗಳಿವೆ. ನಾಗರಹಾವು ಕುಂಡಲಿನೀ ಶಕ್ತಿಯ ಸಂಕೇತವಾಗುತ್ತದೆ; ಅನಂತತೆಯ ಸಂಕೇತವಾಗುತ್ತದೆ. (ಈ ನಾಗಾರಾಧನೆಯೆ ಒಂದು ಆಚರಣೆಯಾಗಿದೆ ಎಂಬುದನ್ನೂ ನೆನೆಯಬಹುದು.) ಒಟ್ಟನಲ್ಲಿ ಹೇಳುವುದೇನೆಂದರೆ ಪ್ರಾಣಿಗಳನ್ನೂ ದಿವ್ಯಾನುಭವಗಳ ಪ್ರತೀಕ, ಪ್ರತಿಮೆಗಳನ್ನಾಗಿಯೂ ಮಾಡಿಕೊಳ್ಳಬಹುದು ಎಂದು. ಆದರೆ ಈ ವಚನಗಳ ವಲಯವೇ ಬೇರೆ. ಇಲ್ಲಿ ಪ್ರಾಣಿಗಳು ಮುಖ್ಯವಾಗಿ ಪ್ರಾಣಿತನದ ಪ್ರತೀಕವಾಗಿ ಬಂದಿವೆ. ಹಾಗೆ ಈ ರೂಪಕಗಳಲ್ಲಿ ಸೂಕ್ಷ್ಮ ಹೃದಯದ ಒಳತೋಟಿಯ ಚಿತ್ರಣ ಸ್ಪಷ್ಟವಾಗಿದೆ.

ಮತ್ತೊಂದು ದೃಷ್ಟಿಯಿಂದಲೂ ಈ ರೂಪಕಗಳನ್ನು ನೋಡುವುದು ಉಚಿತವಾದೀತು. ನಾನು ತಿಳಿದಿರುವಂತೆ ಪ್ರಾಣಿಗಳನ್ನು ರೂಪಕವಾಗಿ ಪರಿವರ್ತಿಸಿಕೊಂಡು ಹೀಗೆ ಬಳಸಿರುವ ಕವಿಯೆ ಕನ್ನಡದಲ್ಲಿ ವಿರಲ. ರೂಪಕ ಚಕ್ರೇಶನಾದ ಕುಮಾರವ್ಯಾಸನಲ್ಲಿ ಅವು ವಿಶೇಷವಾಗಿ ಬಂದಿದ್ದರೂ ಈ ವೈವಿಧ್ಯವಾಗಲಿ ಪರಿಣಾಮತೀವ್ರತೆಯಾಗಲಿ ಅವನಲ್ಲೂ ಕಂಡು ಬರುವುದಿಲ್ಲ. ಈ ಅಂಶ ಚಿಂತನಾರ್ಹವೆಂದೇ ತೋರುತ್ತದೆ.

ಪ್ರಾರಂಭದಲ್ಲೇ ಹೇಳಿದಂತೆ ಇಂದ್ರಿಯ ಪರಿಮಿತ ಚೇತನವು ಸಾಗರದ ತೆರೆಯ ಮೇಲೆ ನೊರೆಯನ್ನು ಸಂಗ್ರಹಿಸುತ್ತ ಅದರ ಮೇಲೆ ಮಿಂಚಿ ಮಿರು ಮಿರುಗುವ ಬೆಳಕಿಗಷ್ಟೆ ಮೋಹಗೊಳ್ಳುತ್ತ ಇರುತ್ತದೆ. ರತ್ನಾನ್ವೇಷಕಚೇತನ ಇಷ್ಟರಿಂದಲೆ ತೃಪ್ತವಾಗದೆ ಒಳ ಮುಳುಗಬೇಕಾಗುತ್ತದೆ. ಮೊದಲ ಬಾರಿಗೆ ನೀರು ಅದನ್ನು ಮೇಲೆತ್ತುತ್ತದೆ, ಎತ್ತೆಸೆಯುತ್ತದೆ, ಉಸಿರು ಕಟ್ಟುತ್ತದೆ. ನೀರಿನ ಅಪಾರವಾದ ಒತ್ತಡ ಅದರ ಮೈಯನ್ನು ಹಿಸುಕಿ ಹಿಪ್ಪೆಯಂತೆ ಮಾಡಿಬಿಡುತ್ತದೆ. ಇದನ್ನೂ ಒತ್ತಿಕೊಂಡು ಮುಂದೆಹೋದರೆ 'ಝಷ ವಿಕೃತಭಾವಗಳು' ಭಯಂಕರ ರೂಪದಿಂದ ಹೆದರಿಸುತ್ತವೆ. ಆ ಅವಸ್ಥೆಯಲ್ಲಿ-ಅಂತರ್ಮುಖತೆಯ ಪ್ರಾರಂಭಾವಸ್ಥೆಯಲ್ಲಿ—ಸಾಧಕನಿಗೆ ಅನಿಸುತ್ತದೆ: 'ಈ ಎಲ್ಲಾ ನನ್ನೊಳಗಿದ್ದವರೆ?' ಎಂದು. ಅಲ್ಲಿ ಸುಪ್ತ ಆಕಾಂಕ್ಷೆಗಳು, ಹತಾಶೆಗಳು ವಿವಿಧ ರಾಗಗಳು ಎಲ್ಲಾ ಬೆದರಿಸುತ್ತವೆ. ಅವುಗಳಿಗೆ ಬಲಿಯಾಗುವ ಭಯವೂ ಉಂಟು. ಆದರೆ ಧೀರ ನಿರ್ಭಯವಾಗಿ ಇನ್ನೂ ಮುಂದೆ ಹೋದರೆ ಒತ್ತಡ ಹೆಚ್ಚುತ್ತ ಹೆಚ್ಚುತ್ತ ಹೋಗುತ್ತದೆ. ಅಲ್ಲಿ ಸಹಸ್ರವರ್ಣದ ಮೀನಗಳು—ಭಾವ ಮೀನಗಳು—ಶಾಂತವಾಗಿ ಈಜುತ್ತಿರುತ್ತವೆ. ಭಯಂಕರ ನಕ್ರ ತಿಮಿಂಗಿಲಗಳಿಗೆ ಹೆದರಿದ್ದ ಚೇತನ ಅವುಗಳ ಪ್ರಥಮದರ್ಶನದಿಂದ ಅಪಾರ ಶಾಂತಿ ಪಡೆಯುತ್ತದೆ. ಅವುಗಳೇ ಪರಮವೆಂದು ಭ್ರಮಿಸಿ ಸುಖಿಸುತ್ತದೆ. ಆದರೆ ಅವು ರತ್ನಲೋಕದ ಕಾವಲಿನವರು ಮಾತ್ರ ಎಂದು ಹೊಳೆದಾಗ, ಅರಿವಾದಾಗ, ಮುಂದೆ, ಇನ್ನೂ ಮುಂದೆ ಮುಳುಗಿದಾಗ ಕತ್ತಲೋ ಕತ್ತಲು; ಹೆದರಿಸಿ ಉಸಿರು ಕಟ್ಟುವ ಕತ್ತಲು. ಆ ಮಹಾಕಾಳರಾತ್ರಿಯನ್ನು ದಾಟಿದಾಗ ಕಾಣುತ್ತದೆ: ಅದೋ! ರತ್ನಾಕರ ಅರುಣೋದಯ! ಶ್ರೀಮಂತ ರತ್ನ ಸೂರ್ಯೋದಯ! ಅದನ್ನು ಕಂಡವರು ಎಷ್ಟು ಜನ? ಕಂಡರೂ ಮುತ್ತನ್ನು ಎಲ್ಲರಿಗೂ ತಂದವರೆಷ್ಟು ಜನ? ಅಂಥವರಲ್ಲಿ ಬಸವಣ್ಣನವರೊಬ್ಬರು. ಅವರ ಹೃದಯ ರತ್ನಾಕರಾನ್ವೇಷಣದ ಪ್ರಾರಂಭಸ್ಥಿತಿಯ, ಪ್ರಥಮಸ್ತರದ ಚಿತ್ರಣವನ್ನು ಈ ಪ್ರಾಣಿ-ರೂಪಕಗಳಲ್ಲಿ ಹೆಚ್ಚಾಗಿ ಕಾಣುತ್ತೇವೆ, ಅಷ್ಟೆ!

ನಾ ಕಂಡ ಮಾತಾಜಿ ಮತ್ತು ಕೇಳಿದ ಅವರ ಪ್ರವಚನ

ರಾಜಶೇಖರಯ್ಯ,
ನಜರಾಬಾದ್, ಮೈಸೂರು

ಅಕ್ಟೋಬರ್ ೨೮, ತಿಂಗಳಿನಲ್ಲಿ ಪ್ರಜಾವಣಿ ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡು ಹಾಗೂ ಕೆಲವು ಕಡೆಗಳಲ್ಲಿ ಗೋಡೆಗಳ ಮೇಲೆ ಪ್ರಕಟಣಾಪತ್ರಗಳು ಬಿತ್ತರಗೊಂಡು, ಮೈಸೂರು ಪುರಭವನದ ಮೈದಾನದಲ್ಲಿ ಪ್ರತಿದಿನ ಸಾಯಂಕಾಲ ೬-೩೦ರಿಂದ ೯ ಘಂಟೆಯವರೆಗೂ ಮಾತಾಜಿಯವರ ಪ್ರವಚನವಾಗುತ್ತಿತ್ತು.

ಪ್ರಾರಂಭದಲ್ಲಿ ಸ್ವಲ್ಪ ಜನವಾದವರು ಬರುಬರುತ್ತಾ ಬೃಹದಾಕಾರವಾಗಿ ಮೈದಾನವೆಲ್ಲಾ ತುಂಬುತ್ತಿತ್ತು. ಮಾತಾಜಿಯುವರು ಕಾವಿಬಟ್ಟೆಧಾರಿಗಳಾಗಿ, ಸರಳವಾಗಿ, ಕ್ಲಿಪ್ತ ವೇಳೆಗೆ ಹಾಜರಾಗಿ ತಮ್ಮ ಶಿಷ್ಯರಿಂದಲೇ ಲೈಟಿನ ವ್ಯವಸ್ಥೆಯನ್ನು ಮಾಡಿಕೊಂಡು, ೮೦೦ ವರ್ಷಗಳ ಹಿಂದೆ ಆಗಿಹೋದ ಮಹಾಪ್ರವಾದಿ ಬಸವಣ್ಣನವರನ್ನು, ಅವರ ತತ್ವ ಆಚರಣೆಗಳನ್ನು ಮುಖ್ಯವಾಗಿರಿಸಿಕೊಂಡು ವಿಶ್ವಧರ್ಮ ಪ್ರವಚನ ಮಾಡುತ್ತಿದ್ದರು. ಬರುತ್ತಿದ್ದ ಜನರಲ್ಲಿ ಜಾತಿಮತ ಭೇದವಿಲ್ಲದೆ, ಅಬಾಲವೃದ್ಧರಾದಿಯಾಗಿ ಎಲ್ಲ ವರ್ಗದ ಜನಗಳೂ ಬರುತ್ತಿದ್ದರು. ಶ್ರೋತೃಗಳ ಜೊತೆಗೆ ೩-೪ ಹಸುಗಳು, ಮಾನಸಿಕವಾಗಿ ಹುಚ್ಚರಾಗಿದ್ದವರೂ ಕೇಳುತ್ತಿದ್ದರು. ಇವರ ಪ್ರವಚನವು ಬರೀ ಧರ್ಮ ಬೋಧನೆಯಲ್ಲದೆ ಎಲ್ಲ ವರ್ಗದ ಜನರೂ ಸಹ ತಾವು ಮಾಡುವ ಕೆಲಸಗಳಲ್ಲೇ ಮುಕ್ತಿ ಪಡೆಯಬಹುದೆಂಬ ಅರಿವನ್ನು ದೃಷ್ಟಾಂತ ಕತೆಗಳ ಮೂಲಕ ಹೇಳುತ್ತಿದ್ದರು. ಹಿಂದಿನ ಅಂಧಶ್ರದ್ಧಾಚರಣೆಗಳನ್ನು ಬದಿಗೊತ್ತಿ ವೈಚಾರಿಕವಾಗಿ ಚರ್ಚಿಸಿ ಸರಿಯಾದ ರೀತಿಯಲ್ಲಿ ನಮ್ಮ ಹಿಂದಿನ ಅನುಭಾವಿಗಳು ಬಿಟ್ಟುಹೋಗಿರುವ ದಾರಿಯಲ್ಲಿ ದೇವರನ್ನು ಕಾಣಲು ಸಾಧ್ಯ. 'ಮನುಷ್ಯರೆಲ್ಲಾ ಪಾಪಿಗಳಲ್ಲ; ಎಲ್ಲರಲ್ಲೂ ಪರಮಾತ್ಮನ ಅನಂತ ಚೈತನ್ಯವಿದೆ; ಎಲ್ಲರೂ ಸಮಾನರು' ಎಂದು ಹೇಳಿದರು—ಇವರ ಪ್ರವಚನಧಾರೆ ಪಾಮರರಿಂದ ಪಂಡಿತರವರೆಗೆ ಎಲ್ಲರೂ ಕೇಳಿ ಅರ್ಥಮಾಡಿಕೊಳ್ಳುವಂತಿತ್ತು. ನನ್ನ ಕೆಲವು ಸ್ನೇಹಿತರು ನಾಸ್ತಿಕವಾದಿಗಳಾಗಿ ತರ್ಕಮಾಡುತ್ತಿದ್ದವರೂ ಸಹ ಒಂದೆರಡು ದಿವಸ ಇವರ ಪ್ರವಚನ ಕೇಳಿ, ಮಂತ್ರಮುಗ್ಧರಾಗಿ ದೇವರು ಇರುವ ಅರಿವನ್ನು ತಿಳಿದರು. ಜೀವನದಲ್ಲಿ ಜಿಗುಪ್ಸೆ, ಅಧೈರ್ಯ ಹೊಂದಿದವರಿಗೆ ಇವರ ವಾಣಿ ಇವರ ಪ್ರವಚನ ಪರುಷಾಮೃತ. ಮೈಸೂರಿನ ಸುತ್ತಮುತ್ತಲಿನ ಬಹಳಷ್ಟು ಜನಮನಗಳಲ್ಲಿ ಅಚ್ಚೊತ್ತಿ ಪ್ರತಿದಿನ

ಸಾಯಂಕಾಲವಾಗುತ್ತಲೇ ಪ್ರವಚನ ಪ್ರದೇಶಕ್ಕೆ ಅವರುಗಳ ಪಾದಯಾತ್ರೆಯಾಗುತ್ತಿತ್ತು. ಇವರ ಗಂಭೀರತ್ವ, ನಿರರ್ಗಳ ವಾಕ್‌ಝುರಿ, ವೀರಘಂಟೆಯಂತೆ ಘೋಷಿಸುತ್ತಿದ್ದವು. ಎಂಥಹವರನ್ನು ಬೆರಗುಗೊಳಿಸಿ, ಧರ್ಮದಲ್ಲಿ ಶ್ರದ್ಧೆ ದೇವರಲ್ಲಿ ನಂಬಿಕೆ ಮತ್ತು ಅವನನ್ನು ಒಲಿಸಿಕೊಳ್ಳುವ ಅನೇಕ ಮಾರ್ಗಗಳನ್ನು ಕಥೆ, ಉಪಕಥೆಗಳು, ವೇದೋಪನಿಷತ್ತು ಗ್ರಂಥಗಳು, ಪುಸ್ತಕಗಳ ಆಧಾರಗಳು, ವಚನಗಳು ಮುಂತಾದ ಎಲ್ಲ ಧರ್ಮಗಳ ಮತ್ತು ಹಿಂದೆ ಆಗಿಹೋದ ಅನೇಕ ನಮ್ಮ ಸನಾತನ ಭಾರತದ, ಋಷಿಮುನಿ ಪುಂಗವರುಗಳನ್ನೆಲ್ಲಾ ಪ್ರಸ್ತಾಪಿಸಿ ಇದರ ಜೊತೆಗೆ ತಮ್ಮ ಜೀವನದಲ್ಲೇ ಆಗಿಹೋದ ಘಟನೆಗಳು ಹಾಗೂ ವಿದೇಶೀಯರು ನಮ್ಮ ಹಿಂದೂತತ್ವದಲ್ಲಿ ಇಟ್ಟಿರುವ ಭಕ್ತಿಶ್ರದ್ಧೆಗಳನ್ನು ಪ್ರಶಂಸಿಸಿ ಹೇಳುವ ಕಳಕಳಿ ಎಂಥಹವರನ್ನು ಸಹ ಮುಗ್ಧರನ್ನಾಗಿ ಮಾಡುತ್ತಿದ್ದುವೆಂದರೆ ಅತಿಶಯೋಕ್ತಿಯಾಗಲಾರದು. ಯಾವ ಧರ್ಮಗುರುಗಳ ಪ್ರವಚನಕ್ಕೂ ಇಷ್ಟು ಜನ ಇರುತ್ತಿರಲಿಲ್ಲ. ಕಾರಣ ಜನಗಳು ಅದು ಒಂದು ಪಂಥದವರ ಗುಂಪೆಂದು ಬಾವಿಸುತ್ತಿದ್ದು ಹಾಗೂ ಅದು ಪಂಡಿತರಿಗೆ ಮಾತ್ರ ಅರ್ಥವಾಗುತ್ತಿತ್ತು. ಆದರೆ ಮಾತಾಜಿಯವರು ಸದಾ ಹಸನ್ಮುಖಿಗಳಾಗಿ ಸಕಲರಿಗೂ ಜ್ಞಾನವನ್ನು ಕೊಡುವ ಗುರುವಾಗಿ ಕಂಗೊಳಿಸುತ್ತಿದ್ದರು. ಬಿಡುವಿಲ್ಲದೆ ಎಲ್ಲ ವೇಳೆಯಲ್ಲೂ ಕಾರ್ಯ ಕ್ರಮಗಳು, ಮಂತ್ರದೀಕ್ಷೆಗಳು ಹೀಗಾಗಿ, ಧರ್ಮ ನಶಿಸುವ ಈ ಕಾಲದಲ್ಲಿ, ಸಿನಿಮಾ ಪ್ರಪಂಚದಲ್ಲಿ ರಾಜಕೀಯ ತಿಕ್ಕಾಟ ಗುದ್ದಾಟಗಳಲ್ಲಿರುವ ಜನರಿಗೆಲ್ಲಾ ದೇವರಲ್ಲಿ ನಂಬಿಕೆ ಹುಟ್ಟಿಸಿ, ಜನಗಳಿಗೆಲ್ಲಾ ಧರ್ಮಸಂಸ್ಕಾರ ಹಾಗೂ ಜೀವನದಲ್ಲಿ ಆಶಾಭಾವನೆ ಹುಟ್ಟಿಸಿದರು. ಇವರು ಕೈಗೊಂಡಿರುವ ಬೃಹತ್ ಯೋಜನೆಯಾದ ಬಸವಗಂಗೋತ್ರಿಯನ್ನು ಬಹಳಷ್ಟು ಜನ ವೀಕ್ಷಿಸಿದರಲ್ಲದೆ ಅವರವರ ಯೋಗ್ಯತಾನುಸಾರ ಧನಸಹಾಯ ಮಾಡಿರುತ್ತಾರೆ.

ಬಹುಮುಖ್ಯ ವಿಷಯವೆಂದರೆ ,ಮನುಷ್ಯ ಜನ್ಮದಲ್ಲಿ ಬಂದಮೇಲೆ ಗಂಡಸಾಗಲೀ ಹೆಂಗಸಾಗಲೀ, ಸಂಸಾರಿಯಾಗಲೀ ಸನ್ಯಾಸಿಯಾಗಲೀ ಹೇಗಿರಬೇಕು? ಹಾಗೂ ಏನನ್ನು ಸಾಧಿಸಬೇಕು? ನಿರಾಕಾರ ಪರಮಾತ್ಮನನ್ನು ಹೇಗೆ ಅರ್ಥಮಾಡಿಕೊಂಡು ಪೂಜಿಸಬೇಕು? ಹಾಗೂ ಮನುಷ್ಯ ಸಾಯುವುದು ಎಂದರೇನು? ಸತ್ತಮೇಲೆ ಎಲ್ಲಿಗೆ ಹೋಗುತ್ತಾನೆ? ನಾವು ಈಗ ಗಳಿಸಿರುವುದೆಲ್ಲಾ ಸ್ಥಿರವೇ? ಇವನ್ನು ಹೇಗೆ ವಿನಿಯೋಗಿಸಬೇಕು? ಎಂಬುವ ಪರಿವೆಯೇ ಇಲ್ಲದ ಮೂಢ ಅಜ್ಞಾನಿ ಜನಗಳಿಗೆ ಜ್ಞಾನದ ಬೆಳಕನ್ನು ಉಂಟು ಮಾಡಿದರು. ಬಹಳಷ್ಟು ದಿನಗಳಿಂದ ದುಡ್ಡಿನ ಮೋಹದಲ್ಲಿ ಬಿದ್ದು ಕೂಡಿಟ್ಟಿದ್ದು ತಮ್ಮ ಸ್ವಂತ ಮಕ್ಕಳಿಗೇ ಕೊಡದ ಮತ್ತು ತೋರಿಸದೇ ಇದ್ದ ಹಣವನ್ನು ಎಷ್ಟೋ ಜನರು ಇವರ ಆರತಿತಟ್ಟೆಗೆ ಸಮರ್ಪಣೆ ಮಾಡಿದರು. ಎಂಥಹವರನ್ನು ನೋಡಿದರೂ ಸಹ ಅನುಕಂಪ, ಔದಾರ್ಯ ಮತ್ತು ಅವರಲ್ಲಿ ಧೈರ್ಯಭಾವವನ್ನು ತುಂಬುವುದು ಇವರ ಒಂದು ವಿಶೇಷ. ಇವರು ಒಂದು ಜಾತಿಪಂಗಡಗಳ ಗುರುಗಳಂತಲ್ಲದೆ ಎಲ್ಲಾ ಧರ್ಮಗಳನ್ನು ಆಳವಾಗಿ ಅಭ್ಯಾಸಿಸಿ ಎಲ್ಲ ವರ್ಗದ ಜನಗಳಿಗೂ ಅರ್ಥವಾಗುವಂತೆ ಮನುಷ್ಯ ಜೀವನದ

ಸಾರ್ಥಕತೆಯನ್ನು ಮತ್ತು ದೇವರ ಬಗ್ಗೆ ಪ್ರೀತಿ, ಮಮತೆ, ವಾತ್ಸಲ್ಯಗಳನ್ನು ಗಳಿಸಿಕೊಳ್ಳುವ ಪರಿಯನ್ನೂ ತಿಳಿಸಿರುತ್ತಾರೆ. ಅಂದರೆ ಇವರು ತಮ್ಮ ಚಿಕ್ಕ ವಯಸ್ಸಿನಲ್ಲೇ ಇಷ್ಟೆಲ್ಲಾ ಅಭ್ಯಾಸಮಾಡಿ, ಸಕಲರನ್ನೂ ಮಂತ್ರಮುಗ್ಧರನ್ನಾಗಿ ಮಾಡುವ ಚಿತ್‌ಶಕ್ತಿ ಇರುವುದರಿಂದ ಆ ಪರಮಾತ್ಮನೇ ಕಳುಹಿಸಿರುವನೆಂದು ತಿಳಿಯಬೇಕಾಗಿದೆ. ಸಾಕಷ್ಟು ಪುಸ್ತಕಗಳನ್ನು ಪ್ರಕಟಿಸಿ ನಾನು ಹೋದ ಬಳಿಕ ಇವನ್ನು ಅಭ್ಯಾಸಮಾಡಿ ಮತ್ತು ಓದುತ್ತಾ ದೇವರನ್ನು ಕಾಣಿ ಎಂಬುವ ಆಶೀರ್ವಾದ ಇತ್ತರು. ಮತ್ತೊಂದು ವೈಶಿಷ್ಟ್ಯಪೂರ್ಣತೆ ಏನೆಂದರೆ ನಗರದಲ್ಲಿ ಬೇರೆ ಏನೇ ಕಾರ್ಯಕ್ರಮಗಳಾದರೂ ೫–೬ ಜನ ಪೋಲೀಸರಾದರೂ ಇರುತ್ತಿದ್ದರು. ಆದರೆ ಇವರ ಪ್ರವಚನ ಕಾರ್ಯಕ್ರಮಕ್ಕೆ ಒಬ್ಬರೂ ಪೋಲೀಸರಿಲ್ಲ ಮತ್ತು ನಿಶ್ಶಬ್ದ ವಾತಾವರಣ. ಒಬ್ಬಿಬ್ಬ ಪೋಲೀಸರು ಹತ್ತಿರದಲ್ಲೆಲ್ಲೋ ಕಾರ್ಯ ನಿರ್ವಹಿಸುತ್ತಿದ್ದವರು ಮಾತ್ರ ಇವರ ಪ್ರವಚನ ಕೇಳುತ್ತಿದ್ದರು. ಅಕಸ್ಮಾತ್ತಾಗಿ ಬಸ್ಸಿಗೋ ಅಥವಾ ಮಾರ್ಕೆಟ್ಟಿಗೋ ಹೋಗುತ್ತಿದ್ದವರು ಸ್ವಲ್ಪಹೊತ್ತು ಇವರ ಪ್ರವಚನ ಕೇಳಿ ಆಕರ್ಷಿತರಾಗಿ ಬಂದವರು ಬಹಳ ಮಂದಿ. ಬಹಳಷ್ಟು ಜನರ ಸಂಕಲ್ಪದಿಂದ ಎಷ್ಟೋ ಪವಾಡಗಳೂ ಸಹ ಆಗಿವೆ. ಕೆಲವರು ಸಾಲಕೊಟ್ಟದ್ದು ಬಹಳಷ್ಟು ವರ್ಷ ಬರದೇ ಇದ್ದುದರಿಂದ ಕೈಬಿಟ್ಟ ಹಣ ಬಂದರೆ ಮಾತಾಜಿಯವರಿಗೆ ಕೊಡುತ್ತೇವೆಂದು ಸಂಕಲ್ಪಿಸಿದ ೨–೩ನೇ ದಿನದಲ್ಲೇ ಅವರು ಬಂದು ಹಿಂತಿರುಗಿರುವುದನ್ನು ನಾವು ಕಾಣುತ್ತಿದ್ದೇವೆ. ಏಕೆ ನನ್ನ ಜೀವನದಲ್ಲೇ ಆದ ಪವಾಡವನ್ನು ಹೇಳುತ್ತೇನೆ ಕೇಳಿ. ನಾನು ಪ್ರತಿನಿತ್ಯ ಭಕ್ತಿಶ್ರದ್ಧೆಗಳಿಂದ ಮಾತಾಜಿಯವರ ಪ್ರವಚನ ಕೇಳಿ ದಿವ್ಯ ಆರತಿ ತಟ್ಟೆಗೆ ೧೦ ಪೈಸೆ, ೪ ಆಣೆ ದಕ್ಷಿಣೆಹಾಕಿ ಬರುತ್ತಿದ್ದೆ—ಹಾಗೂ ಕೆಲವು ಪುಸ್ತಕಗಳನ್ನು ಕೊಂಡುಕೊಂಡೆನು. ಒಂದು ದಿವ್ಸ, ಇನ್ನೊಂದು ವಾರದಲ್ಲಿ ಕಾರ್ಯಕ್ರಮ ಮುಕ್ತಾಯವಾಗುತ್ತೆ, ತಾವು ತಮ್ಮ ತನು, ಮನ, ಧನಗಳಿಂದ ಆದಷ್ಟು ಸಹಾಯಮಾಡಿ ಎಂದು ಹೇಳಿದರು. ನನಗೆ ಕಿರಿಯದಾಗಿಯೇ ಮಾಡಬೇಕೆಂಬ ಬಯಕೆ ಇದ್ದರೂ ಹಣದ ಅಡಚಣೆಯಿಂದಾಗಿ ಪೇಚಲಾಟಕ್ಕೆ ಇಟ್ಟುಕೊಂಡಿತು. 'ಏನಪ್ಪ ಶಿವನೇ ಹೀಗಾಯ್ತು' ಎಂದು ಯೋಚಿಸಿ, ರಾತ್ರಿ ಮಲಗುವಾಗ್ಗೆ ಪರಮಾತ್ಮನನ್ನು ಪ್ರಾರ್ಥಿಸಿ ಮಲಗಿಕೊಂಡೆನು. ಬೆಳಗ್ಗೆ ಯಥಾಪ್ರಕಾರ ನನ್ನ ಸರ್ಕಾರಿ ನೌಕರಿಗೆ ಹಾಜರಾದೆ. ಸಾಯಂಕಾಲ ವೇಳೆಯಾದ ಬಳಿಕ ಪ್ರವಚನಕ್ಕೆ ಬರುವ ಪದ್ಧತಿ. ನಾನು ಎಂದೂ ಹಿಂದೆ ಆ ವ್ಯಕ್ತಿಯನ್ನು ನೋಡಿರಲಿಲ್ಲ. ದಾರಿಯಲ್ಲಿ ಸಿಕ್ಕಿ 'ನಿಮ್ಮಿಂದ ತುಂಬಾ ಸಹಾಯವಾಯ್ತು ಸಾರ್; ಅದಕ್ಕೆ ನನ್ನ ಅಲ್ಪಕಾಣಿಕೆ' ಎಂದು ೨೦ ರೂ ತೆಗೆದುಕೊಳ್ಳಿ ಎಂದು ಅವನು ಕೊಟ್ಟ. ನಾನು ಆಶ್ಚರ್ಯಚಕಿತನಾಗಿ ಮರುಮಾತನಾಡುವಾಗಲೆ ತನಗೆ ಜರೂರ್ ಕೆಲ್ಸವಿದೆ ಬಸ್ಸಿಗೆ ಹೋಗುತ್ತೇನೆಂದು ಹೇಳಿ ಹೊರಟೇಹೋದ. ಕೂಡಲೆ ನನಗೆ ಬಹುದಾನಂದವಾಯ್ತು, ಮನೆಗೂ ಹೋಗದೆ ಪ್ರವಚನಕ್ಕೆ ಬಂದು ೨೦ ರೂ ಕಾಣಿಕೆಯನ್ನು ಒಂದು ಚೀಟಿ ಬರೆದು ಸಲ್ಲಿಸಿದೆ. ಮೂರನೇ ದಿವ್ಸ ಆಫೀಸಿಗೆ ಹೋದೆ. ಬಹಳ ಹಿಂದೆ ಸಾಲ ಕೊಟ್ಟಿದ್ದ, ಬರುವುದೆಂದು ಬಿಟ್ಟಿದ್ದ ೨೦ ರೂ ಮನಿಯಾರ್ಡರ್ ಬಂತು. ಆ ದಿವ್ಸ ಕಲ್ಯಾಣ

ಕಿರಣಕ್ಕೆ ಚಂದಾವನ್ನು ಸಲ್ಲಿಸಿ, ಹಣ್ಣು ಹೂ, ಖರ್ಜೂರ ಕಲ್ಲುಸಕ್ಕರೆಗಳನ್ನು ಸಲ್ಲಿಸಿ ಆಶೀರ್ವಾದ ಪಡೆದು 'ಸಾಕಪ್ಪ ತಂದೆ ಇಷ್ಟು ಪ್ರವಚನ ಕೇಳಿದ್ದಕ್ಕೆ ನನ್ನಿಂದ ಇಷ್ಟಾದರೂ ಆಯ್ತು' ಎಂದು ಸಮಾಧಾನಪಟ್ಟೆ. ಇನ್ನೂ ಬಹಳಷ್ಟು ಜನಕ್ಕೆ ಇವರ ಪ್ರಭಾವ ಪವಾಡದಂತಾಗಿದೆ. ಇವರು ವೈದ್ಯರೂ ಸಹ ಅಲ್ಲದೆ ಪಾಕಶಾಸ್ತ್ರ ಬಲ್ಲಿದರು. ತಮ್ಮ ಪ್ರವಚನದಲ್ಲಿ ದೀನದಲಿತರಿಗೆ ಮತ್ತು ಕೆಲವು ರೋಗಿಗಳಿಗೆ ಮನೆಯಲ್ಲಿಯೇ ತಮಗೆ ಸಿಕ್ಕುವ ಪದಾರ್ಥಗಳಿಂದ ಚಿಕಿತ್ಸೆ ಮಾಡಿಕೊಳ್ಳುವ ವಿಧಾನ ಹಾಗೂ ಹೆಣ್ಣುಮಕ್ಕಳು ತಮ್ಮ ದಿನನಿತ್ಯದ ತಿಂಡಿ, ತಿನಿಸುಗಳನ್ನು ಮಾಡಿಕೊಳ್ಳುವುದನ್ನೂ ಸಹ ಅಲ್ಲದೆ ನಮ್ಮ ಹಿಂದೂ ಪರಂಪರೆಯ ಸಂಸ್ಕೃತಿಯ ವೈಶಿಷ್ಟ್ಯ ಅವುಗಳನ್ನು ಉಳಿಸಿಕೊಳ್ಳಬೇಕೆಂಬ ಹೇಳಿಕೆಗಳೂ ಸಹ ಪ್ರಶಂಸನೀಯವಾದವುಗಳು. ಒಂದು ದಿವ್ಸ ಜಗನ್ಮೋಹನ ಅರಮನೆಯಲ್ಲಿ ಏರ್ಪಡಿಸಿದ್ದ ಪೂಜಾದೃಶ್ಯವು ದೈವೀಪರಿವಾರದ ಕೈಲಾಸವೇ ಆಗಿತ್ತು.

ಇನ್ನೊಂದು ವಿಶೇಷವೆಂದರೆ ನಗರದ ವಯಸ್ಸಾದ ನಾಗರಿಕರು ಹೇಳಿದ ಪ್ರಕಾರ ಮೈಸೂರಿನಲ್ಲಿ ಹಿಂದೆಂದೂ ಯಾರ ಭಾಷಣ ಅಥವಾ ಪ್ರವಚನಕ್ಕೆ ಇಷ್ಟೊಂದು ಜನರು ಸೇರಿರಲಿಲ್ಲವಂತೆ. ಮಾತಾಜಿಯವರ ಕಾರ್ಯಕ್ರಮ ತಾ ೩೧–೧೨–೭೮ರಂದು ಮುಕ್ತಾಯಗೊಂಡು ಇನ್ನೇನು ಬೆಳಿಗ್ಗೆ ಹೊರಡುತ್ತಾರೆಂದು ತಿಳಿದು ಬಹಳಷ್ಟು ಜನ ದುಃಖಿತರಾಗಿ ಅತ್ತರು; ಕೆಲವರು ನೀರವವಾಗಿ ರೋದಿಸಿದರೆ ಕೆಲವರು ಬಿಕ್ಕುತ್ತಿದ್ದರು. ಆದರೆ ಮಾತಾಜಿಯವರ ಸಮಾಧಾನದ ಮಾತಿದು: "ನಾವು ನದಿಯಂತೆ ಹರಿಯುತ್ತಿರುವ ಚರ ಜಂಗಮರು, ದೇಶದ ನಾನಾ ಕಡೆ ನಿಮ್ಮಲ್ಲಿನ ಹಾಗೆ, ಜನಗಳಿಗೆ ಧರ್ಮಬೋಧೆ ಮಾಡಬೇಕಾಗಿದೆ. ಆದ್ದರಿಂದ ನೀವು ಸಾಕಷ್ಟು ಪುಸ್ತಕಗಳನ್ನು ಕೊಂಡು ಪ್ರತಿನಿತ್ಯ ಓದುತ್ತ ನಿಮ್ಮ ನಿಜಜೀವನದಲ್ಲಿ ಅಳವಡಿಸಿಕೊಳ್ಳುತ್ತ ಬನ್ನಿ. ಹಾಗೂ ಪ್ರತಿ ತಿಂಗಳೂ ನಮ್ಮ ವಿಶ್ವಕಲ್ಯಾಣ, ಮಿಷನ್ನಿನ 'ಕಲ್ಯಾಣಕಿರಣ' ಮಾಸಪತ್ರಿಕೆಯನ್ನು ಓದಿ ಅದರಲ್ಲಿ ನಮ್ಮ ಎಲ್ಲ ಕಾರ್ಯಚಟುವಟಿಕೆಗಳೂ ಪ್ರಕಟಗೊಳ್ಳುತ್ತವೆ." ಪ್ರತಿದಿನ ದೈವೀರಾಜ್ಯದಂತೆ ಸಾಯಂಕಾಲ ಶೋಭಿಸುತ್ತಿದ್ದ ಮೈಸೂರು ಪುರಭವನದ ಮೈದಾನ ಬರೀ ಬಯಲಾಯ್ತು. ಶ್ರೀ ಮಾತಾಜಿಯವರ ಮರು ಬರುವಿಕೆಯನ್ನು ನಿರೀಕ್ಷಿಸೋಣ, ಹಾಗೂ ಅವರಿಗೆ ಆ ದಯಾಮಯನಾದ ಪರಮಾತ್ಮನು ಇನ್ನು ಹೆಚ್ಚು ಚೈತನ್ಯ ಸ್ಫೂರ್ತಿಗಳನ್ನು ತುಂಬಲಿ, ಭಾರತಾದ್ಯಂತ ಅವರ ಪ್ರವಚನವಾಣಿ ತುಂಬಲೆಂದು ಪ್ರಾರ್ಥಿಸಿ, ಈ ನನ್ನ ಪುಟ್ಟ ಅಭಿಪ್ರಾಯಾತ್ಮಕ ಲೇಖನವನ್ನು ಪೂರೈಸುತ್ತೇನೆ.

★ ★ ★

ಮಾತು ಜ್ಯೋತಿರ್ಲಿಂಗ

ಷಡಕ್ಷರ ಸ್ವಾಮಿ

ಹೂವು ತಾನಾಗಿ ಪರಿಮಳ ಬೀರುತ್ತದೆ. ಅದಕ್ಕೆ ಅದರ ಗರ್ವವಿಲ್ಲ; ಅರಿವೂ ಇಲ್ಲ. ಅಷ್ಟು ಸಹಜ ಸ್ವಯಂಸ್ಫೂರ್ತ.

ಒಂದು ಹಣತೆ ಉರಿಯುತ್ತದೆ. ತನ್ನನ್ನು ತಾನೇ ಸುಟ್ಟುಕೊಂಡು ಪ್ರತಿಗಳಿಗೆಯೂ ಸುತ್ತಮುತ್ತ ಬೆಳಕನ್ನು ಚೆಲ್ಲುತ್ತದೆ. ಆದರೆ ಆದಕ್ಕೆ ಅದೊಂದು ಕಷ್ಟವೆನಿಸುವುದಿಲ್ಲ. ಹೂವಿಗೆ ಪರಿಮಳ ಬೀರುವುದರಲ್ಲಿ, ಹಣತೆಗೆ ಬೆಳಕು ಚೆಲ್ಲುವುದರಲ್ಲಿ ಆನಂದವಿದೆ. ಅದೇ ನಿಜವಾದ ತ್ಯಾಗದ ಲಕ್ಷಣ.

* * *

ಆನಂದ ಲಭಿಸುವುದು ಸೌಖ್ಯದಿಂದಲ್ಲ; ಸಂಪತ್ತಿನಿಂದಲ್ಲ; ಸ್ತುತಿಯಿಂದಲೂ ಅಲ್ಲ; ಯಾವುದಾದರೂ ಒಳ್ಳೆ ಕೆಲಸದಲ್ಲಿ ತೊಡಗುವುದರಿಂದ ಮಾತ್ರ.

—ಸರ್ ಆಲ್ಫ್ರೇಡ್ ಗ್ರೆನ್‌ಪೆಲ್

* * *

ಸೇವೆಯು ಯಾರೊಬ್ಬರ ವಂಶ ಪಾರಂಪರ್ಯ ಗುತ್ತಿಗೆಯಲ್ಲ.

—ಶೇಕ್ಸ್‌ಪಿಯರ್

* * *

ಒಳ್ಳೆಯದನ್ನು ಮಾಡುವ ಇಷ್ಟವಿದ್ದರೆ ಈಗಲೇಮಾಡು; ಕೆಟ್ಟದ್ದನ್ನಾದರೆ ನಿಧಾನಿಸು ಹಾಗೂ ಯೋಚಿಸು.

—ಈಸೋಫ್

* * *

ಕೆಲಸ ಮಾಡುವಾಗ ನೀನು ಇನ್ನೂ ನೂರುವರ್ಷ ಬದುಕಿರುವೆ ಎಂದು ತಿಳಿ; ಆದರೆ ಪ್ರಾರ್ಥಿಸುವಾಗ ನಾಳೆಯೇ ಸಾಯುವಿ ಎಂದು ತಿಳಿ.

—ಬೆಂಜಮಿನ್ ಪ್ರಾಂಕ್ಲಿನ್

ಇತರರಾಡಿಕೊಳ್ಳುವ ನಿಂದೆಯ ಮಾತುಗಳನ್ನು ಯಾವನು ಲಕ್ಷಿಸುವುದಿಲ್ಲವೋ ಅಂಥವನು ಜಗತ್ತನ್ನೆ ಜಯಿಸಲು ಸಮರ್ಥನಾಗುತ್ತಾನೆ.

* * *

—ಮಹಾಭಾರತ

ಅವಕಾಶವು ಎದುರಾದಾಗ ಅದನ್ನು ಎದುರುಗೊಳ್ಳುವ ಸಿದ್ಧತೆಯಲ್ಲಿರುವುದೇ ಯಶಸ್ವೀ ಜೀವನದ ರಹಸ್ಯವಾಗಿದೆ.

—ಡಿಸ್ರೇಲ್

"ಬೇರೆಯವರಲ್ಲಿ ಒಳ್ಳೆಯ ಗುಣಗಳನ್ನು ಅರಸು, ನಿನ್ನಲ್ಲಿರುವ ಕೆಟ್ಟದ್ದನ್ನು ಹುಡುಕು."

—ಬೆಂಜಮಿನ್ ಪ್ರಾಂಕ್ಲಿನ್

* * *

ಚಿನ್ನ-ಬೆಳ್ಳಿಗಳು ಮಾತ್ರವಲ್ಲ ಗುಣವೂ ನಾಣ್ಯವೇ. ಅದು ಜಗತ್ತಿನ ಎಲ್ಲಾ ಕಡೆಯೂ ಚಲಾವಣೆಯಾಗುತ್ತದೆ.

—ಸಾಪೋಕ್ಲಿಸ್

* * *

ನಿಮ್ಮ ಹಾದಿಯಲ್ಲಿ ಯಾರು ಮುಳ್ಳು ಚೆಲ್ಲುತ್ತಾರೋ ಅವರ ಹಾದಿಯಲ್ಲಿ ಹೂವನ್ನು ಹರಡಿರಿ.

—ಕಬೀರ್

* * *

ಜೀವನದ ಮೊದಲಲ್ಲೇ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳುವವನು ಧನ್ಯನು.

—ಎಮರ್ಸನ್

* * *

ಒಳ್ಳೆಯದನ್ನು ಮಾಡುವ ಗಳಿಗೆಯೇ ಜೀವನದ ಅತಿ ಸಾರ್ಥಕ ಗಳಿಗೆ

—ವರ್ಡ್ಸ್‌ವರ್ತ್

ಶ್ರೇಷ್ಠ ಮಟ್ಟದ ಸುಖ ದೊರಕುವುದು ಯಾವುದಾದರೂ ಘನ ಉದ್ದೇಶವನ್ನು ಸಾಧಿಸುವುದರಿಂದ ಅಥವಾ ಅದಕ್ಕಾಗಿ ಶ್ರಮಿಸುವುದರಿಂದ. ಮಧ್ಯಮ ಸುಖ ತನ್ನ ಕರ್ತವ್ಯಗಳನ್ನು ಹಿಂಜರಿಯದೆ ಮಾಡುವುದರಲ್ಲಿದೆ. ಬಯಸಿದ್ದೆಲ್ಲ ಸಿಗಬೇಕೆಂದು ಲೌಕಿಕವಾಗಿ ಹೆಣಗುವುದು ಸುಖದ ದಾರಿಯಲ್ಲ. ಸುಖ ಬೇಕೆನ್ನುವವರು ಬಯಕೆಗಳಿಗೆ ಮಿತಿ ಹಾಕುವುದು ಅನಿವಾರ್ಯ.

—ನೀರದ ಚೌಧುರಿ

* * *

ಶ್ರೇಷ್ಠ ಮನುಷ್ಯನಿಗೆ ಮೂರು ಲಕ್ಷಣಗಳಿವೆ. ಸದ್ಗುಣಿಯಾದುದರಿಂದ ಅವನಿಗೆ ಚಿಂತೆ ಇಲ್ಲ. ವಿವೇಕಿಯಾದುದರಿಂದ ಆತ ತಬ್ಬಿಬ್ಬಾಗುವುದಿಲ್ಲ. ಧೈರ್ಯಶಾಲಿಯಾದುದರಿಂದ ಆತನಿಗೆ ಹೆದರಿಕೆಯಿಲ್ಲ.

* * *

—ಕನ್‌ಫ್ಯೂಷಿಯಸ್

ಮಾತಾಜಿಯವರ ದಿವ್ಯಚರಣಕೆ

ಡಾ|| ಭಾರತಿ, ಎಂ.ಬಿ.ಬಿ.ಎಸ್.
ಮೈಸೂರು


ವಿಶ್ವಧರ್ಮವನು ಬೋಧಿಸುತಿಹ ದಿವ್ಯಬೆಳಕೆ
ಶಿರಬಾಗಿ ಮನತುಂಬಿ ನಮಿಸುವೆನು ನಿಮ್ಮ ಚರಣಕೆ
ಬಹುದಿನದಿಂದ ಕಾತರಿಸಿದ್ದೆ ನಿಮ್ಮ ದರುಶನಕೆ
(ಬರದಿದ್ದರೂ ಅರಸಿ ನಾ ನಿಮ್ಮ ಬಳಿಗೆ)
ನೀವೆ ಬಂದು ಕರೆದಿರಿ ನಮ್ಮನು ನಿಮ್ಮ ಪ್ರವಚನಕ್ಕೆ .
ಅಲ್ಲಲ್ಲಿ ಕೇಳಿದ್ದೆ ನಿಮ್ಮ ಹೆಸರನು
ಕಡೆಯಲು ಯತ್ನಿಸಿದ್ದೆ ಹೆಪ್ಪಿಟ್ಟ ಹಾಲನು
ತರಂಗ ತರಂಗವಾಗಿ ಹರಿದು ಬಂದಿಹಳು
ನಿಮ್ಮ ಕೈಯಿಂದ ತರಂಗಿಣಿ
ನಿಜದಿ ಮೆರದಳೇ ಈ ಭುಮಿಯೊಳು
ಆ ವೀರ ವಿರಾಗಿಣಿ
(ಸಂಶಯವೇಳೆ ಕುಳಿತು ಎದುರಿಗೆ ಕೇಳುತಿರಲು
ನಿಮ್ಮ ದಿವ್ಯವಾಣಿ !)
ನಿಮ್ಮ ಪ್ರವಚನ ನಿರರ್ಗಳ, ಸರಳ, ಸ್ಪಷ್ಟ
ಬಸವತತ್ತ್ವ ಬೋಧೆ
ಮೂಕರಾಗಿ ಕುಳಿತು ಈಂಟಿದೆವು
ನಿಮ್ಮ ಜ್ಞಾನಸುಧೆ
ಮಾತಾಜಿ ನಿಮಗೆ ನಮನ! ನೀಡಿದಿರಿ ನಮಗೆ
ಜ್ಞಾನದ ರಸದೌತಣ
ಜೀವನದ ಕಣಕದೊಳಗೆ
ದೈವನಂಬುಗೆಯ ಹೂರಣ
ಮೌಢ್ಯತೆಯ ಮುರ್ಖನಿಗೆ
ಜ್ಞಾನದಾ ಚಾಟಯೇಟು
ಅರಿವುಳ್ಳ ಜಾಣನಿಗೆ ತಿಳಿವಿನಾ ಚಾಕಲೇಟು
ಸ್ವರ್ಣಕಿರೀಟವನು ಧರಿಸಿ ಅಟ್ಟಹಾಸದಲ್ಲಿ ಮೆರೆದ
ಜಗದ್ಗುರು ನೀವಲ್ಲ

ಇದನೆ ಮೆಚ್ಚಿ ಗೌರವಿಸಿ ಹಿಂಬಾಲಿಸುತಿಹರು
ಅಬಾಲವೃದ್ಧರೆಲ್ಲ
ನುಡಿಯಲಷ್ಟೇ ಅಲ್ಲ ನಡೆಯಲ್ಲೂ ಉಂಟು
ಹಿರಿದಾದ ತ್ಯಾಗಜೀವನ
ಅರಿವಿನಾ ಸಸಿಗಳು ಚಿಗುರಿ
ಶುಭ್ರವಾಗಿದೆ ಬಾಳವನ
ಸತ್ಯನೀತಿಗಳ ಗೊಬ್ಬರವ ಹಾಕಿ, ಭಕ್ತಿ ನಂಬುಗೆಯ
ನೀರೆರೆವುದೆಮ್ಮ ಕೆಲಸ
ದೈವಕೃಪೆಯಿಂದ ಸಿಹಿಫಲವು ದೊರತಾಗ
ಅರ್ಪಿತವು ನಿನಗೆ ಬಸವರಸ
ನಿಮ್ಮವಾಣಿಯನಾಲಿಸಿ ತಲೆದೂಗಿದರೆ ಬಾರದು ನಿಮ್ಮ ಕರುಣ
ಹತ್ತರಲಿ ಒಂದಂಶ ದಿನನಿತ್ಯದಲಿ ಪಾಲಿಸಿದರೆ ಬೆಳಗುವುದು ನಮ್ಮ
ಬಾಳಕಿರಣ

ಬಸವ ಗಂಗೋತ್ರಿ

ಬಸವನ ನಾಮದಿ ಇಳೆಯೊಳು ನೆಲೆಸಿಹ ವಿದ್ಯೆಯ ತಾಣವು ಗಂಗೋತ್ರಿ
ಭವ ಪರಿಹಾರಕ ಬಸವನೆ ಮೆರೆದಿಹ ಉನ್ನತ ತಾಣವು ಗಂಗೋತ್ರಿ ||
ಧರ್ಮೋದ್ಧಾರಕ ತತ್ತ್ವವ ಹಿಡಿದಿಹ ಸಂಸ್ಥೆಯಿದೇ ಕರ್ನಾಟಕದಿ
ಬೆಂಗಳೂರು–ಮೈಸೂರು ಮಧ್ಯೆ ನೆಲಸಿದೆ ರಾಜಧಾನಿಗೆ ಸಮೀಪದಿ ||
ಮಕ್ಕಳಿಗಾಗಿಯೇ ತೆರೆದಿದೆ ಇಲ್ಲಿ ಹಿಂದೂ ಸಂಸ್ಕೃತಿ ಶಾಲೆಯ
ಕಳಿಸಿರಿ ನಿಮ್ಮಯ ಮಕ್ಕಳನಿಲ್ಲಿಗೆ ಕಲಿಯಲು ಒಳ್ಳೆಯ ಸಂಸ್ಕೃತಿಯ ||
ಧರ್ಮದ ರಕ್ಷಣೆ, ಧರ್ಮದ ಪ್ರಸಾರಣೆ, ಧರ್ಮವೆ ಶ್ವಾಸೋಛ್ವಾಸದಲಿ
ಕರ್ಮದಿ ತೋರಿದೆ, ಕೃತಿಯಲಿ ಹರಿದಿದೆ, ಮಾತೂ ಕೂಡ ಧರ್ಮದಲಿ ||
ಬಸವನ ಬೃಹದಾಕಾರದ ಶಿಲೆಯನು ನಿಲ್ಲಿಪ ಕಾರ್ಯವ ನೋಡಿನ್ನು
ಧರ್ಮ ಧ್ವಜವಿದು ಅರ್ಪಿಸಿ ನಿಮ್ಮಯ ತನುಮನ ಧನವನು ಪದಕಿನ್ನು ||
ಸದ್ಗುರು ಲಿಂಗಾನಂದರ ನೇತ್ರದಿ ಶ್ರೀಮಾತಾಜಿಯೆ ಕ್ರಿಯಾಮೂರ್ತಿ
ಕನ್ನಡಿಗರಿಗಿದು ಹೆಮ್ಮೆಯ ಸಂಗತಿ ಪಡೆವುದು ಮುಂದಿದು ಚಿರಕೀರ್ತಿ ||
ಕರಗಳ ಜೋಡಿಸಿ ಬೇಡುವೆ ನಿಮ್ಮಲಿ "ಧರ್ಮೋ ರಕ್ಷತಿ ರಕ್ಷಿತಃ"
ಪರ ಸಂಸ್ಕೃತಿಯನು ನಂಬಿ ಕೆಡದಿರಿ ಒಮ್ಮನದಿಂದೆನ್ನಿ ಅರ್ಪಿತಃ ||

—ಎಂ. ಹೆಚ್. ತಿಪ್ಪೇಸ್ವಾಮಿ, ಮೈಸೂರು



ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು

ಷಟ್ಪುರುಷ ಸಿದ್ಧಿಪುರುಷ ಬಸವಣ್ಣ

ಬಸವಣ್ಣನ ನಡೆಪರುಷ, ನುಡಿಪರುಷ, ದೃಷ್ಟಿಪರುಷ
ಹಸ್ತಪರುಷ, ಮನಪರುಷ, ಭಾವಪರುಷ
ತನುಮನಧನವ ಗುರುಲಿಂಗಜಂಗಮಕ್ಕೆ ನಿವೇದಿಸುವಾತ ಬಸವಣ್ಣನು
ಬಸವಣ್ಣನ ನೆನೆವುದೇ ಲಿಂಗಾರ್ಚನೆ ಎನಗೆ
ಬಸವಣ್ಣನ ನೆನೆವುದೇ ಜಂಗಮಾರ್ಚನೆ ಎನಗೆ
ಬಸವಣ್ಣನ ನೆನೆವುದೇ ಪರತತ್ವ, ಪರಮಕಲ್ಯಾಣವೆನಗೆ
ಕಲಿದೇವಯ್ಯಾ, ನಿಮ್ಮ ಶರಣ ಬಸವಣ್ಣ
ನಿಂತಹ ಘನಮಹಿಮ ನೋಡಯ್ಯಾ.

—ಮಡಿವಾಳ ಮಾಚಿದೇವ

ಮನದ ಮಾಯಾಂಬರದ ಮೈಲಿಗೆಯ ಭಕ್ತಿರಸ ಪ್ರವಾಹದಲ್ಲಿ ತೊಳೆದು, ಶರಣ ಪದವಿಗೆ ಭಕ್ತರನ್ನು ಏರಿಸುವ ವೀರಗುರು, ಮಡಿವಾಳ ವೃತ್ತಿಯ ಮಾಚಿದೇವರು ತಾವು ವಿಶ್ವಗುರು ಬಸವಣ್ಣನವರ ಒಡನಾಡಿ, ಅವರ ದರ್ಶನ-ಸ್ಪರ್ಶನಗಳಿಂದ ಪುನೀತರಾಗಿ ಈ ರೀತಿಯಲ್ಲಿ ಸ್ತುತಿಸುವರು. ಬಸವಣ್ಣನವರ ಸಮಕಾಲೀನರೇ ಆದ ಶರಣ ಮಾಚಿದೇವರು ಭಕ್ತಿ-ಉತ್ಸಾಹ ತುಂಬಿ ಸ್ತುತಿಸುವ ಪರಿ ನೋಡಿದರೆ ಅಚ್ಚರಿಯಾಗದಿರದು.

ಪರುಷದ ಗುಣವೆಂದರೆ ಸ್ಪರ್ಶಿಸಿದ, ತಾನೇ ಅದನ್ನು ಸ್ಪರ್ಶಿಸಲಿ ಅಥವಾ ವಸ್ತುವೇ

ತಾನಾಗಿ ಪರುಷವನ್ನು ಸ್ಪರ್ಶಿಸಲಿ, ಕಬ್ಬಿಣವನ್ನು ಹೊನ್ನನ್ನಾಗಿ ಮಾಡುವುದು; ಅಂದರೆ ಪರಿವರ್ತನೆ ತರುವುದು. ಆ ಪರಿವರ್ತನೆ ಊರ್ಧ್ವಮುಖ ಮತ್ತು ದೈವೀಮುಖ ವಾದುದು. ಕಬ್ಬಿಣ ಬಂಗಾರವಾದಾಗ ಈ ಪರಿವರ್ತನೆ ಮೇಲ್ಮುಖವಾದುದು. ತುಕ್ಕು ಹಿಡಿವ, ವಿಕಾರಕ್ಕೊಳಗಾಗುವ ಶಕ್ತಿಯನ್ನು ದಾಟನಿಲ್ಲುವಂಥಾದ್ದು. ನಿರ್ವಿಕಾರವಾದ ಕೊಳೆಯದ-ಹುಳಿಯದ, ಕಿಲುಬದ-ಕರಗದ ಸ್ಥಿತಿಯನ್ನು ಸಂಪಾದಿಸಿಕೊಳ್ಳುವಂಥಾದ್ದು. ನೀರಿನ ಸಂಗಮಾಡಿದ ಕಬ್ಬಿಣ ತುಕ್ಕುಹಿಡಿಯುತ್ತದೆ; ನಿಷ್ಪ್ರಯೋಜಕವಾಗುತ್ತದೆ. ಇದು ಕೆಳಮಟ್ಟಕ್ಕೆ ಇಳಿಯುವಿಕೆ. ಇದು-ಪತನವಾದರೆ ಕಬ್ಬಿಣ ಪರುಷಸ್ಪರ್ಶದಿಂದ ಹೊನ್ನಾಗುವುದು ಉತ್ಥಾನ. ಹೀಗೆ ಉತ್ಥಾನದ ಮಾರ್ಗಕ್ಕೆ ಅನೇಕರನ್ನು ಮೇಲೆತ್ತುವ ಸಾಮರ್ಥ್ಯ ಪರುಷಮೂರ್ತಿ ಬಸವಣ್ಣನವರಿಗೆ ಇದ್ದಿತ್ತು.

ಅವರ ಜೀವನವೇ ಪರುಷವಾಗಿತ್ತು. ನೋಡಿದವರು ತಮ್ಮನ್ನು ತಾವು ಅವಲೋಕಿಸಿ ಕೊಳ್ಳುವುದಷ್ಟೇ ಅಲ್ಲ; ಪರಿವರ್ತನೆಗೆ ಈಡಾಗುತ್ತಿದ್ದರು. 'ನಡೆಪರುಷ'ವೆಂದರೆ ಪಾದ ಪರುಷವೆಂದೂ ಅರ್ಥೈಸಬಹುದು. ಆ ದಿವ್ಯಮೂರ್ತಿಯ ಶ್ರೀಪಾದಕ್ಕೆ ಎರಗಿದವರು ಅವಲೋಹತ್ವ ಕಳೆದುಕೊಂಡು ಸುವರ್ಣತ್ವಕ್ಕೆ ಏರುತ್ತಿದ್ದರು. ಬಸವಣ್ಣನವರ ನುಡಿ ಅಂದರೆ ವಾಣಿ ಪರುಷವಾಗಿತ್ತು. ಅದು 'ಮಾತೃವಾಣಿ'ಯಾಗಿ ಹರಿದುಬಂದು ಲೋಹಿಗ ಶಿಶುಗಳನ್ನು ಉದ್ಧರಿಸುತ್ತಿತ್ತು. ಗುರುವಾಣಿಯಾಗಿ ಭುವಿಯ ಜೀವಿಗಳನ್ನು ಪಾವನ ಗೈಯುತ್ತಿತ್ತು. ಆ ವಾಣಿ ಶತಶತಮಾನಗಳಿಂದ ತಲೆಯಲ್ಲಿ ಜಡ್ಡುಗಟ್ಟಿದ್ದ ಕೀಳ್ತನದ ಕಾಳಿಕೆಯನ್ನು ತೊಡೆಯಿತು; ಮೇಲೆಂಬ ಅಹಂಭಾವದ ಕಸವನ್ನು ಕೊಚ್ಚಿಹಾಕಿತು. ಮಾನವ ಸ್ವಾತಂತ್ರ್ಯ ಸಾರಿತು; ಮಲಗಿದವರನ್ನು ಮೇಲಕ್ಕೆಬ್ಬಿಸಿ ಶಿವಗುರಿಯತ್ತ ಕೊಂಡೊಯ್ಯಿತು; ಅವರ ದೃಷ್ಟಿ ಪರುಷವಾಗಿತ್ತು. ನಯನದಲ್ಲೆಲ್ಲಾ ಶಿವಸ್ವರೂಪ ವನ್ನೇ ತುಂಬಿಕೊಂಡ ಆ ದೃಷ್ಟಿ ತಾನಷ್ಟೇ ದಿವ್ಯವಾಗಿರದೆ ನೋಡಿದವರನ್ನೂ ದಿವ್ಯ ಗೊಳಿಸುತ್ತಿತ್ತು. ಆಕಳ ಕದ್ದೊಯ್ದ ಕಳ್ಳರು ಶರಣರಾದುದು; ಕೊಲೆಗೈಯಲು ಬಂದ ಕಟುಕರ ಭದ್ರ ಶಿವನ ಕಟ್ಟಾಳು ವೀರಭದ್ರನಾದುದು ಪರುಷದೃಷ್ಟಿಯ ಬಲದಿಂದಲೇ. ಆ ದೃಷ್ಟಿ ಅನೇಕ ಮಾನವರನ್ನು ಮಹಾಂತರನ್ನಾಗಿ ಮಾಡಿತು. ಅದರಲ್ಲಿ ಮಾನವ ಸಮುದಾಯದ ಬಗ್ಗೆ ಅಪಾರ ಪ್ರೇಮವಿತ್ತು; ಪತಿತರ ಬಗ್ಗೆ ಅನುಕಂಪವಿತ್ತು, ದುರ್ಜನರ ಬಗ್ಗೆ ಮಮತಾಸಹಿತ ಮರುಕವಿತ್ತು.

ಬಸವಣ್ಣನವರ ಹಸ್ತ ಪರುಷವಾಗಿತ್ತು. ಆ ಪರುಷಹಸ್ತ ಮಸ್ತಕವ ಮುಟ್ಟಿದಾಗ ಪಾವನರಾದರೆಲ್ಲರು. ಇದಕ್ಕೆ ಡೋಹಾರ ಕಕ್ಕಯ್ಯನವರ ಮತ್ತೊಂದು ವಚನ ಸಾಕ್ಷಿ:

ಕಷ್ಟಕುಲದಲ್ಲಿ ಹುಟ್ಟಿದೆನೆಂಬ ಸೂತಕವ ಕಳೆದು
ಮುಟ್ಟಿ ಪಾವನವ ಮಾಡಿದನಯ್ಯಾ ಬಸವಣ್ಣನು.

ಅದರಿಂದ ಅನುಗ್ರಹಿತರಾದವರ ಬಾಳು ನಂದನವನವಾಯಿತು. ಬಸವಣ್ಣನವರ ಮನ

ಪರುಷ. ಅವರ ಸಂಕಲ್ಪಸಿದ್ಧಿಯಾಗಿ ಬಯಸಿದ ವಸ್ತುಗಳು ಸಿಕ್ಕುತ್ತಿದ್ದವಷ್ಟೇ ಅಲ್ಲ; ಅವರು ಸಂಕಲ್ಪಿಸಿ ಇತರರನ್ನು ಉದ್ಧರಿಸಬಲ್ಲವರಾಗಿದ್ದರು. 'ಅವರ ಸ್ಮರಣೆ ಮಾಡುವವರನ್ನು ಬಹುದೂರದಿಂದಲೇ ಆಶೀರ್ವದಿಸಿ, ಅನುಗ್ರಹಿಸುತ್ತಿದ್ದರು, ಬನ್ನಗಳಿಂದ ಪಾರು ಮಾಡಬಲ್ಲವರಾಗಿದ್ದರು. ಬಸವಣ್ಣನವರ ಭಾವ ಅಂದರೆ will ಅಥವಾ ಇಚ್ಛಾಶಕ್ತಿ ಮತ್ತು ಸುಪ್ತಮನಸ್ಸು ಸಹ ಪರುಷವಾಗಿತ್ತು. ನಂಬಿದ ಭಕ್ತರು ಸ್ಮರಿಸಿಕೊಂಡರೆ ಸಾಕು, ತಮ್ಮ ಕಾರುಣ್ಯವನ್ನು ಅಲ್ಲಿಗೆ ಪ್ರವಹಿಸುತ್ತಿದ್ದರು. ಇದಕ್ಕೆ ಗೊಲ್ಲತಿಯ ಪವಾಡವೇ ಸಾಕ್ಷಿ. ಒಮ್ಮೆ ಅವರು ಬಿಜ್ಜಳನರಮನೆಯಲ್ಲಿ ಕಾರ್ಯಕಲಾಪ ನಡೆಸುತ್ತಿದ್ದಾಗ ಕೆರೆಯ ಕಟ್ಟೆಯನ್ನೇರುವ ಹಾಲು ಮಾರುವ ಗೌಳಗಿತ್ತಿ ಕಾಲು ಜಾರಿದಾಗ 'ಬಸವಾ, ಬಸವಾ' 'ರಕ್ಷಿಸು ತಂದೆ' ಎಂದಳು. ತಟ್ಟನೆ ಬಸವಣ್ಣನವರು ತಮ್ಮ ಕೈಗಳನ್ನೆತ್ತಿ 'ನಿಲ್ಲು ತಾಯಿ, ನಿಲ್ಲು ತಾಯಿ' ಎಂದರು. ಆಗ ಬೀಳುತ್ತಿದ್ದವಳನ್ನು ಯಾವುದೋ ಶಕ್ತಿ ಹಿಡಿದು ನಿಲ್ಲಿಸಿದಂತಾಯಿತು. ಮೊಸರಿನ ಗಡಿಗೆಯೂ ಉರುಳದೆ ನಿಂತಿತು. ಬಸವ ಸ್ಮರಣೆ ಮಾಡುವವರ ಮೇಲೆ ಬಸವಣ್ಣನವರ ಕೃಪಾದೃಷ್ಟಿ ಬೀಳುವುದೆಂಬುದಕ್ಕೆ ಈ ಉದಾಹರಣೆ ಸಾಕ್ಷಿ. ಮತ್ತು ಬಸವಣ್ಣನವರ ಭಾವವು ಪರುಷವಾದುದಕ್ಕೆ ಈ ಪವಾಡವೆ ಜೀವಂತಸಾಕ್ಷಿ. ಇಂಥ ಪರುಷ ಸಿದ್ಧಿತ್ವ ಸಮನಿಸಲು ಕಾರಣವೇನು? ಬಸವಣ್ಣನವರು ತಮ್ಮ ತನುವನ್ನು ಅರ್ಥಾತ್ ಜೀವನವನ್ನು ಗುರುವಿಗೆ ಮೀಸಲಿಟ್ಟಿದ್ದರು. ಗುರುವೆಂದರೆ ಅರಿವು, ಗುರಿ, ಸತ್ಯದ ಅನ್ವೇಷಣೆ ಎಂದು ಮುಂತಾಗಿ ಅರ್ಥೈಸಬಹುದು. ಅವರ ಮನವು ಲಿಂಗಾರ್ಪಿತವಾಗಿತ್ತು. ಅಲ್ಲಿ ದಿವ್ಯ ವಿಚಾರಗಳಿಗಲ್ಲದೆ ಬೇರೆಯದಕ್ಕೆ ಆಸ್ಪದವೇ ಇರಲಿಲ್ಲ. ಪರಮಾತ್ಮನ ಪಾದಕಮಲದಲ್ಲಿ ಝೇಂಕರಿಸುವ ದುಂಬಿಯಾಗಿದ್ದ ಮನ ದೇವನ ಮೀಸಲ ವಸ್ತುವಾಗಿತ್ತು. ಅವರ ಧನ ಅಂದರೆ ಸಂಪತ್ತು, ಗಳಿಕೆ ಎಲ್ಲವೂ ಜಂಗಮಕ್ಕೆ ಅಂದರೆ ಸಮಾಜಕ್ಕೆ ಅರ್ಪಿತವಾಗಿತ್ತು. ಆದ್ದರಿಂದ ಅದೂ ದಿವ್ಯವಾಗಿತ್ತು. ಇಂತಹ ದಿವ್ಯತ್ವ ಪಡೆದ ಬಸವಣ್ಣನವರನ್ನು ಅರ್ಚಿಸುವುದು, ಪ್ರಾರ್ಥಿಸುವುದು, ಧ್ಯಾನಿಸುವುದು ಅತ್ಯಂತ ಸಂತೋಷಕರ ದೈವೀಸಾಕ್ಷಾತ್ಕಾರದ ಸಾಧನಾಪಥ; ಮುಕ್ತಿದಾತನಾದ ಪರಮಾತ್ಮನಡಿಗೆ ಕರೆದುಕೊಂಡು ಹೋಗುವ ಮುಕ್ತಿದಾಯಕ ಧರ್ಮಗುರು ಬಸವಣ್ಣ ಎಂಬುದನ್ನು ಪರಿಣಾಮಕಾರಿಯಾಗಿ ಬಣ್ಣಿಸಿದ್ದಾರೆ ಮಡಿವಾಳ ಮಾಚಿದೇವ ಶರಣರು.

* * *

ನಗೆಹನಿ

ಒಬ್ಬ–ಏನಯ್ಯಾ, ಯಾವುದೊ ಎತ್ತು ಗದ್ದೆ ಮೇಯ್ತಾ ಇದೆ. ನೀನಿಲ್ಲಿ ಬೇಲಿ ಕಟ್ತಾ ಇದಿಯಾ! ದೊಡ್ಡಿಗೆ ಹೊಡಿಬಾರ್ದೇ?

ಒಕ್ಕಲಿಗ–ಮತ್ತೇನು ಮಾಡ್ತಿದೀನಿ ಎಂದುಕೊಂಡಿ. ಗದ್ದೆ ಸುತ್ತಲೂ ಬೇಲಿ ಕಟ್ಟಿ ಅದನ್ನು ಹಿಡ್ದು ದೊಡ್ಡಿಗೆ ಎಳೆದುಕೊಂಡು ಹೋಗಬೇಕು ಅಂತಿದ್ದೀನಿ. ಅದ್ಕೇ ಈ ಬೇಲಿ ಹಾಕ್ತಿರೋದು.

ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ವರದಿ: ಸ್ವಾಮಿ ದಯಾನಂದ

ಹೇಮಾವತಿಯ ದಂಡೆಯ ಮೇಲೆ ನೆಲೆಸಿರುವ ಹೊಳೆನರಸೀಪುರದಲ್ಲಿ ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳ ಪ್ರವಚನವು ೨೬–೧೧–೧೯೭೮ರಂದು ಆರಂಭವಾಯಿತು. ಪುರದ ಬಸ್‌ಸ್ಟಾಂಡ್ ಎದುರಿನ ಮುನಿಸಿಪಲ್ ಪಾರ್ಕಿನ ಮೈದಾನದಲ್ಲಿ ಹಾಕಿರುವ ಗಣಪತಿ ಪೆಂಡಾಲಿನಲ್ಲಿ ಆರಂಭವಾಯಿತು. ದಿನದಿನಕ್ಕೆ ವರ್ಧಿಸಿ ಅಸಂಖ್ಯಾತರನ್ನು ಆಕರ್ಷಿಸಿತು. ಗುಡಿಗೆ ಕಳಸವಿಟ್ಟಂತೆ ಪೂಜ್ಯ ಮಾತಾಜಿಯವರ ಬರವು ಕಳೆಯನ್ನು ವರ್ಧಿಸಿತು. ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ೯–೧–೭೯ರಂದು ವೈಭವಪೂರ್ಣವಾಗಿ ಮುಕ್ತಾಯಗೊಂಡಿತು.

ಇನ್ನೊಂದು ವೈಶಿಷ್ಟ್ಯಪೂರ್ಣ ಪ್ರಸಂಗವೆಂದರೆ, 'ಅಂಬೇಡ್ಕರ್ ನಗರ' ನಿವಾಸಿಗಳಾದ ಹರಿಜನ ಬಂಧುಗಳು ಭಕ್ತಿಪೂರ್ವಕವಾಗಿ ಬಿನ್ನವತ್ತಳೆ ಸಮರ್ಪಿಸಿದುದು. ಬಸವಣ್ಣನವರು ಹಿಂದುಳಿದವರ ಮತ್ತು ನಿಮ್ನ ವರ್ಗದವರ ಉದ್ಧಾರಕ್ಕೆ ಹಾಕಿಕೊಂಡ ಮಹಾನ್ ಯೋಜನೆಯನ್ನು ಇಂದು ಪೂಜ್ಯಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ವಿಶ್ವಕಲ್ಯಾಣ ಮಿಷನ್ ಮುಖಾಂತರ ಮುಂದುವರಿಸುತ್ತಿದ್ದಾರೆ ಎಂಬ ಭಾವನೆ ತಾಳಿದ ಹರಿಜನ ಬಂಧುಗಳು ಸಮರ್ಪಿಸಿದ ಬಿನ್ನವತ್ತಳೆಯ ಪಾಠಾಂತರ ಇಲ್ಲಿದೆ:

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥

ವಿಶ್ವಕಲ್ಯಾಣ ಮಿಷನ್ ಸಂಸ್ಥಾಪಕರು, ಛೇರ್ಮನ್ನರೂ, ಜಗನ್ಮಾತಾ
ಅಕ್ಕಮಹಾದೇವಿ, ಜಗದ್ಗುರು ಪೀಠ ನಿರ್ಮಾಪಕರು, ಕ್ರಾಂತಿಯೋಗಿಗಳು,
ಮಾನವತಾವಾದಿಗಳು, ಅಪೂರ್ವ ವಾಗ್ಮಿಗಳು, ಸಮತಾವಾದಿಗಳು ಆಗಿರುವ,

ಪರಮ ಪೂಜ್ಯ

ಸದ್ಗುರು ಶ್ರೀ ಶ್ರೀ ಲಿಂಗಾನಂದಸ್ವಾಮಿಗಳು, ಬಿ. ಎ., ಆನರ್ಸ್.

ಅವರ ಪವಿತ್ರ ಪಾದಾರವಿಂದಗಳಲ್ಲಿ

ಹೊಳೆನರಸೀಪುರ ಅಂಬೇಡ್ಕರ್‌ನಗರದ ಹರಿಜನ ಬಂಧುಗಳು.
ದಿನಾಂಕ ೮–೧–೧೯೭೯ರ ಸೋಮವಾರದಂದು ಸಮರ್ಪಿಸಿದ
ಸನ್ಮಾನ ಪತ್ರ

ಸನ್ಮಾನ ಪತ್ರ

ಪೂಜ್ಯ ಶ್ರೀ ಸದ್ಗುರುಗಳೇ

ರಾಷ್ಟ್ರಾದ್ಯಂತ ಅವಿಶ್ರಾಂತವಾಗಿ ಸಂಚರಿಸುತ್ತ ಆಧ್ಯಾತ್ಮಿಕ, ನೈತಿಕ ಮತ್ತು ರಾಷ್ಟ್ರ ಧರ್ಮ ಪ್ರಜ್ಞೆಯನ್ನು ಉದ್ದೀಪಿಸಿ, ಪವಿತ್ರವಾದ ಜ್ಞಾನಗಂಗೆಯನ್ನು ಅನಂತ ಹೃದಯಗಳಿಗೆ ಹರಿಸುವ ಜ್ಞಾನತರಂಗಿಣಿಯಾಗಿದ್ದೀರಿ. ತಾವು ದುಷ್ಟ ಪರಿವರ್ತನೆ, ಶಿಷ್ಟ ಮಾರ್ಗದರ್ಶನಗಳ ಮಣಿಹ ಹೊತ್ತ ಜಂಗಮಮೂರ್ತಿಯಾಗಿ ಎಮ್ಮಗಳ ಪಾಲಿಗೆ ಅವತರಿಸಿದ್ದೀರಿ. ಕಾರ್ಯಬಾಹುಳ್ಯದ ನಡುವೆಯೇ ಬಿಡುವು ಮಾಡಿಕೊಂಡು ನಮ್ಮೂರಿಗೆ ಆಗಮಿಸಿ ಪ್ರವಚನದ ಅಮೃತವನ್ನು ನೀಡಿದ್ದೀರಿ. ಇಂಥ ತಮ್ಮ ದಿವ್ಯಚರಣಕ್ಕೆ ಈ ಸನ್ಮಾನವನ್ನರ್ಪಿಸುವ ಸುಯೋಗ ನಮ್ಮ ಪಾಲಿಗೆ ಒದಗಿಸಿದುದಕ್ಕಾಗಿ ಕೃತಜ್ಞರಾಗಿದ್ದೇವೆ.

ಏಕೈಕ ಶ್ರೇಷ್ಠ ಪ್ರವಚನಕಾರರೇ,

ಭಕ್ತಿಯ ಬೀಡಾಗಿಹ ವಿಶ್ವಗುರು ಬಸವೇಶ್ವರರ ಜನ್ಮಭೂಮಿಯಾದ ಬಿಜಾಪುರ ಜಿಲ್ಲೆಯ ಮಣಿಗವಳ್ಳಿಯ ಮಾಣಿಕ್ಯವಾಗಿ ಜನ್ಮಿಸಿ; ಕನ್ನಡದ ಗಂಡು ಮೆಟ್ಟಿನ ನೆಲವಾದ ಬೆಳಗಾವಿಯಲ್ಲಿ ತತ್ವಜ್ಞಾನ ಆನರ್ಸ್ ಪದವೀಧರರಾಗಿ, ಕ್ರಾಂತಿಯ ಕಿಡಿಯಾಗಿ, ಅವಿಶ್ರಾಂತ ಸ್ಫೂರ್ತಿಯಾಗಿ ಸಂಚರಿಸುತ್ತಾ ತಾವು ಪರಮಪಾವನವಾದ ಹೇಮಾವತಿ ನದಿಯ ದಂಡೆಯಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಪುಣ್ಯಕ್ಷೇತ್ರವಾದ ಈ ಹೊಳೇನರಸೀಪುರಕ್ಕೆ ಆಗಮಿಸಿ ತಾ|| ೨೬–೧೧–೭೮ರಿಂದ ೮–೧–೧೯೭೯ರ ವರೆಗೆ ಅಖಂಡವಾಗಿ, ಅವ್ಯಾಹತವಾಗಿ, ನಿರ್ವಿಘ್ನವಾಗಿ, ಪ್ರವಚನವಾಹಿನಿಯನ್ನು ಹೇಮಾವತಿ ತುಂಬುಪ್ರವಾಹದಂತೆ ಹರಿಸಿ, ಅಸಂಖ್ಯಾತ ಹೃದಯಕ್ಕೆ ಜ್ಞಾನ ಸೇಚನೆ ಮಾಡಿದ್ದೀರಿ.

ಹೊಳೆನರಸೀಪುರದ ಜನತೆಯ ಪೂರ್ವ ಪುಣ್ಯದ ಫಲವೇನೋ ಎಂಬಂತೆ ತಾವು ಇಲ್ಲಿಗೆ ಆಗಮಿಸಿ ಗಣಪತಿ ಭವ್ಯಮಂಟಪದ ಆವರಣದಲ್ಲೇ ಅಪೂರ್ವವಾದ ಕಾರ್ಯಕ್ರಮ ನಡೆಸಿ ಎಂದೆಂದೂ ಸಮಾವೇಶವಾಗದಷ್ಟು ಜನತೆಯನ್ನು ಆಕರ್ಷಿಸಿ ಈ ಊರಿನ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವಂತಹ ಅನುಪಮ ಘಟನೆಯನ್ನು ಸೃಷ್ಟಿಸಿದ್ದೀರಿ. ನಿಮ್ಮ ದಯೆಯಿಂದ ಭುವಿಯಲ್ಲಿ ಕೈಲಾಸವನ್ನು ಕಾಣುವ ಭಾಗ್ಯ ನಮ್ಮದಾಯಿತು.

ಕ್ರಾಂತಿ ಯೋಗಿಗಳೇ,

ಈ ಭರತಭೂಮಿಯಲ್ಲಿ ಜಾತಿಪದ್ಧತಿಯು ಒಂದು ಮಹಾನ್‌ಶಾಪವಾಗಿ, ಈ ಹೋಮರೂಪದಲ್ಲಿ ಹಲವಾರು ಮುಗ್ಧರು ಬಲಿಯಾಗುತ್ತಿದ್ದಾಗ, ಮಾನವರು ಮಾನವರನ್ನೇ ದೇವರು–ಧರ್ಮಗಳ ಹೆಸರಲ್ಲಿ ಶೋಷಣೆ ಮಾಡುತ್ತಿದ್ದಾಗ ೧೨ನೇ ಶತಮಾನದಲ್ಲಿ

ಕ್ರಾಂತಿಕಾರಿ ಯುಗಪುರುಷ ಬಸವೇಶ್ವರರು ಅವತರಿಸಿದರು. ಜಾತಿ ಮತ ಪಂಥಗಳ ಭೇದವಿಲ್ಲದೆ ಎಲ್ಲರನ್ನೂ ಉದ್ಧರಿಸುವ ಮಹಾಮಣಿಹ ಹೊತ್ತರು. 'ಜಾತಿಗಳು ಮಾನವನ ಕಲ್ಪನೆ, ಮಾನವ ಜನಾಂಗದಲ್ಲಿ ಮೇಲು ಕೀಳೆನ್ನುವುದು ಸಲ್ಲದು, ಎಲ್ಲರೂ ದೇವರ ಮಕ್ಕಳು, ಸಮಾನರು, ಮುಕ್ತಿಗೆ ಅರ್ಹರು' ಎಂಬ ದಿವ್ಯ ಸಂದೇಶ ನೀಡಿ, ಮನುಕುಲದ ಬೆಳಕಾದರು. ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯರಂತಹ ಶರಣರನ್ನು ರೂಪುಗೊಳಿಸಿದರು. ಅಂಥ ತತ್ವವನ್ನು ಮತ್ತೊಮ್ಮೆ ಮಾರ್ಮಿಕವಾಗಿ ಹೇಳಿ, ನಮ್ಮೆಲ್ಲರನ್ನೂ ಎಚ್ಚರಿಸಿ ಆತ್ಮಜ್ಞಾನದ ದಾರಿಗೆ ಕರೆದೊಯ್ದು ವಿಶ್ವಗುರು ಬಸವೇಶ್ವರರ ವಿರಾಟ್ ರೂಪವನ್ನು ತೋರಿಸಿದ್ದೀರಿ.

ಸ್ತ್ರೀ ಜಗದ್ಗುರು ಪೀಠ ಸಂಸ್ಥಾಪಕರೇ,

ಸ್ತ್ರೀಕುಲ ಸಮಾನತೆಯನ್ನು ೧೨ನೆಯ ಶತಮಾನದಲ್ಲಿ ಬಸವಣ್ಣನವರು ಸಾರಿದರು ಮಹಿಳಾಕುಲಕ್ಕೆ ಜ್ಞಾನಪೀಠವೊಂದಿರಲಿಲ್ಲ. ಅಂಥ ಗುರುಪೀಠವನ್ನು ನಿರ್ಮಾಣ ಮಾಡಿದ ಕೀರ್ತಿಗೆ ಭಾಜನರು ತಾವು. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯಂತಹ ಜ್ಞಾನನಿಧಿಯನ್ನು ಜಗತ್ತಿಗೆ ಕೊಟ್ಟು, ಪ್ರಪ್ರಥಮ ಮಹಿಳಾ ಜಗದ್ಗುರು ಪೀಠ ಸಂಸ್ಥಾಪನೆಮಾಡಿದ ತಮ್ಮ ಸಾಹಸವನ್ನು ಎಷ್ಟು ಕೊಂಡಾಡಿದರೂ ಕಡಿಮೆಯೆ. ಇಂಥ ಮಹಾಂತರನ್ನು ಪಡೆದ ನಮ್ಮ ನಾಡು–ನುಡಿಗಳು ಧನ್ಯ ಮತ್ತು ಮಾನ್ಯ.

ವಿಶ್ವಕಲ್ಯಾಣ ಮಿಷನ್ ಸಂಸ್ಥಾಪಕರೇ,

ದಿವ್ಯ ತೇಜಸ್ವಿಗಳಾಗಿ, ಸ್ವಾಮಿ ವಿವೇಕಾನಂದರ ಪ್ರತಿರೂಪವಾಗಿ, ನಿರ್ಗತಿಕ ಮಾನವ ಕುಲಕೋಟಿಯ ಉದ್ಧಾರಕ್ಕಾಗಿ ಲಕ್ಷಾಂತರ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡಿರುವ ತಮ್ಮ ಉದ್ದೇಶ ದಿವ್ಯ ಮತ್ತು ಭವ್ಯ. ಈ ನಿಮ್ಮ ಘನತರವಾದ ಯೋಜನೆಯು ಸಮಸ್ತ ಮಾನವ ಕುಲಕೋಟಿಗೆ ಉಪಯೋಗವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ನಿಮ್ಮ ಎಲ್ಲ ಯೋಜನೆಗಳು ಯಶಸ್ವಿಯಾಗಲಿ, ಪರಮಾತ್ಮನು ತಮಗೆ ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ನೀಡಲಿ, ತಮ್ಮ ಉದ್ದೇಶಗಳೆಲ್ಲ ಬೇಗನೆ ಈಡೇರಿ ನಮ್ಮೆಲ್ಲರಿಗೆ ಮಾರ್ಗದರ್ಶಕವಾಗುವ ದಿವ್ಯಧಾಮವು ರೂಪುಗೊಳ್ಳಲಿ ಎಂದು ಪರಮಾತ್ಮನನ್ನು ಪ್ರಾರ್ಥಿಸಿ, ತಮ್ಮ ದಿವ್ಯಪಾದ ಪದ್ಮಂಗಳಲ್ಲಿ ಭಕ್ತಿ ಮತ್ತು ಕೃತಜ್ಞತಾಪೂರ್ವಕವಾಗಿ ಈ ಸನ್ಮಾನ ಪತ್ರವನ್ನು ಸಮರ್ಪಿಸುತ್ತೇವೆ.

ಗೊರೂರು ಹೇಮಾವತಿ ಪ್ರಾಜೆಕ್ಟ್ ಕಾಲನಿಯಲ್ಲಿ

ಜುಳುಜುಳು ಮಂಜುಳನಾದದೊಡನೆ ಹರಿಯುವ ಹೇಮಾವತಿಯ ಮೇಲೆ ಹಾಯ್ದು ಬರುವ ತಂಗಾಳಿಯಿಂದ ಸೇಚಿತವಾಗಿರುವ ಗೊರೂರು ಗ್ರಾಮದ ಮಗ್ಗುಲಿನ

ಹೆಚ್. ಆರ್. ಪಿ. ಕಾಲನಿಯಲ್ಲಿ ೧೦–೧–೧೯೭೯ರಿಂದ ಪ್ರವಚನ ಪ್ರಾರಂಭವಾಯಿತು. ಮಗ್ಗುಲಲ್ಲೇ ನಿರ್ಮಾಣ ಹಂತದಲ್ಲಿರುವ ಹೇಮಾವತಿ ಜಲಾಶಯ. ಮೇಲಿನ ಆಗಸ ನೆಲದ ಮೇಲೆ ಮಲಗಿರುವಂತೆ ಹರಹಿ ನಿಂತಿರುವ ನೀಲ ಪ್ರಶಾಂತ ಜಲ. ಶಾಂತವಾದ ಪರಿಸರದಲ್ಲಿ ಪ್ರವಚನಾರಂಭ. ವಿದ್ಯಾವಂತರ ವಸತಿಯೇ ಮುಖ್ಯವಾದ ಕಾಲನಿಯಲ್ಲಿ ಪ್ರಾರಂಭವಾದ ಕಾರ್ಯಕ್ರಮ ದಿನದಿನಕ್ಕೆ ಅಧಿಕ ಸಂಖ್ಯೆಯಲ್ಲಿ ಶ್ರೋತೃಗಳನ್ನಾಕರ್ಷಿಸಿತು. ಮುಖ್ಯ ಎಂಜಿನಿಯರಾದ ಶ್ರೀ ವೆಂಕಟರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಎಕ್ಸಿಕ್ಯುಟಿವ್ ಎಂಜಿನಿಯರ್ ಶ್ರೀ ಶಿವಕುಮಾರರು ಸ್ವಾಗತಿಸಿದರು. ಶ್ರೀ ಗೊ. ರು. ಪರಮೇಶ್ವರಪ್ಪನವರು ಪೂಜ್ಯ ಮಾತಾಜಿಯವರ ಪರಿಚಯವನ್ನು, ಶ್ರೀ ಈಶ್ವರಗೌಡರು ಪೂಜ್ಯ ಸದ್ಗುರುಗಳ ಪರಿಚಯವನ್ನು ಮಾಡಿಕೊಟ್ಟರು. ಪೂಜ್ಯ ಮಾತಾಜಿಯವರು ನಂದಾದೀವಿಗೆಯನ್ನು ಬೆಳಗಿ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದರು. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಪ್ರವಚನವನ್ನು ಮಾಡಿದರು. ಕಾರ್ಯದರ್ಶಿ ಶಂಕರಪ್ಪನವರು ವಂದನಾರ್ಪಣೆ ಮಾಡಿದರು. ದಿ. ೧೯–೧–೧೯೭೯ ರಂದು ಸೂಪರಿಂಟೆಂಡ್ ಇಂಜಿನಿಯರ್ ಶ್ರೀ ಜನಾರ್ಧನ್‌ರವರ ಅಧ್ಯಕ್ಷತೆಯಲ್ಲಿ ಪ್ರವಚನವು ಅದ್ದೂರಿಯಾಗಿ ಮುಕ್ತಾಯಗೊಂಡಿತು.

* * *

[ಸಮಸ್ಯೆ ? ಸಮಾಧಾನ! ೧೬ನೇ ಪುಟದಿಂದ ಮುಂದುವರಿದುದು]

ಕುಮಾರಸ್ವಾಮಿ ಸಿಹಿಮೊಗ

★ ತಾವು ನಮ್ಮೂರಿಗೆ ಬಂದು ಪ್ರವಚನ ಮಾಡಿ, ಧರ್ಮಜಾಗೃತಿ ಮಾಡಿ ಹೋದಾನಂತರ ಆಡಂಬರದ ಜಾತಿವಾದಿ ಗುರುಗಳೊಬ್ಬರು ಬಂದರು. ಆಗ ವಿಚಾರವಾದಿಗಳಾದ ನಾವುಗಳು ಹೋಗಿ 'ಯಾವ ಕಾಸಿನ ಖರ್ಚಿಲ್ಲದೆ ಅಪೂರ್ವ ಜನಜಾಗೃತಿ ಮಾಡಿ ನಮ್ಮಲ್ಲಿ ಅಧ್ಯಾತ್ಮ ಪ್ರಜ್ಞೆ ಉದ್ದೀಪಿಸಿ, ಮಾತಾಜಿಯವರು ಜನರ ಮನಸ್ಸನ್ನು ಅರಳಿಸಿದರು. ನೀವು ಇಷ್ಟೇಕೆ ಅಪವ್ಯಯ ಮಾಡುವಿರಿ ?' ಎಂದು ಕೇಳಿದೆವು. ಆಗವರು 'ಅವರು (ಮಾತಾಜಿಯವರು) ಮಾಡಿದ್ದೇನು ಮಹಾ. ನಮ್ಮ ಪೂಜೆಯಿಂದಲೇ ನಿಮಗೆ ಒಳ್ಳೇದಾಗುವುದು' ಎಂದು ನುಡಿದಾಗ, ಮತ್ಸರವು ಸ್ಪಷ್ಟವಾಗಿ ವ್ಯಕ್ತವಾಯಿತು. ಆಗ ನಮಗನಿಸಿತು: 'woman', thy name is jealousy ಎಂಬ ಶೇಕ್ಸಪಿಯರನ ಮಾತನ್ನು Guru, the name is jealousy ಎಂದು ಏಕೆ ಅನ್ನಬಾರದು' ಎಂದು. ಇಂತಹ ಮತ್ಸರ ಬುದ್ಧಿಯವರನ್ನೇನು ಮಾಡಬೇಕು ?

* ಕೆಲವು ಗುರುಗಳು 'ಗುರ್‌ಗುರ್' ಅನ್ನುತ್ತಾರೆಂದ ಮಾತ್ರಕ್ಕೆ ಎಲ್ಲ ಗುರುಗಳನ್ನೂ ಒಂದೇ ಸಾಲಿಗೆ ಸೇರಿಸಬೇಡಿ. ಮತ್ಸರವು ಮಾನವನ ಹುಟ್ಟುಗುಣ. ಹುಟ್ಟುಗುಣಗಳಲ್ಲಿ ಬಾಳುವುದು ಪ್ರಾಣಿಯ ಸ್ವಭಾವ, ಕಲಿತ ಗುಣಗಳಲ್ಲಿ ಬಾಳುವುದು ಮಾನವನ

ಸ್ವಭಾವ; ದೈವೀಗುಣಗಳಲ್ಲಿ ಬಾಳುವುದು ಮಹಾತ್ಮರ ಸ್ವಭಾವ. ಆದ್ದರಿಂದ ಮತ್ಸರಿಸುವವರ ಮಟ್ಟನೋಡಿ ಅನುಕಂಪ ಪಡಿರಿ. ನೀವೂ ದ್ವೇಷಿಸಿ ಅವರ ಮಟ್ಟಕ್ಕೆ ಇಳಿಯಬೇಡಿರಿ.

ರಾಮಾನಂದ ಪರಮಹಂಸ

★ ನಾನೋರ್ವ ಸಾಧಕ ಸ್ವಾಮಿ. ಸಿರಿವಂತರ ಮನೆಯಲ್ಲೇ ಜನಿಸಿದರೂ, ತ್ಯಾಗ-ವೈರಾಗ್ಯಗಳಿಂದ ಪ್ರೇರಿತನಾಗಿ ಸನ್ಯಾಸ ಸ್ವೀಕರಿಸಿದೆ. ದೈವಾನುಗ್ರಹವೋ ಏನೋ ದಿನದಿನಕ್ಕೆ ಅಭಿವೃದ್ಧಿ ಸಾಧಿಸಿರುವೆ. ಜನರ ಅಭಿಮಾನ, ಹಣ, ಗೌರವ ಎಲ್ಲ ಸಿಕ್ಕಿವೆ. ಅಭಿಮಾನದಿಂದ ಹೇಳಬೇಕೆಂದರೆ ನನ್ನ ನಿಷ್ಠೆ. ಸನ್ಯಾಸ ಜೀವನದ ನಿಯತ್ತು ಕಾಪಾಡಿಕೊಂಡೇ ಬಂದಿದ್ದೇನೆ. ಆದರೂ ಕೆಲ ಸ್ವಾಮಿಗಳು ಕಾಲ್ಪನಿಕ ಹೆಸರು ಸೇರಿಸಿ, ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿರುವರು. ನಾನು ನೊಂದಿರುವೆ. ತಮ್ಮ ಸಲಹೆ ಏನು ?

* ನೀವು ನೋಯಬಾರದು; ಇನ್ನೂ ಹೆಚ್ಚಿನ ಆತ್ಮ ಬಲದಿಂದ ಮುಂದುವರಿಯಬೇಕು. ಪರಮಾತ್ಮನ ಕರುಣೆಗೆ ನೀವು ಪಾತ್ರರಾಗಿದ್ದೀರೆಂದೇ ನಿಮ್ಮಲ್ಲಿ ಪ್ರಗತಿಯಾಗುತ್ತಿದೆ. ನಿಮ್ಮ ನಿಷ್ಠೆ ನೀವು ಕಾಪಾಡಿಕೊಂಡರೆ ಸಾಕು. ಅದಕ್ಕೆ ಸಾಕ್ಷಿ ಅವರವರ ಅಂತರಂಗ ಮಾತ್ರ. ನಿಮ್ಮ ವಿರೋಧಿಗಳ ಅಪಪ್ರಚಾರ ಅವರ ಹತಾಶ ಭಾವನೆಯ ಪ್ರತೀಕ. ಅವರು ಸಾಧಿಸಲಾಗದುದನ್ನು ನೀವು ಸಾಧಿಸುತ್ತಿರುವಿರಾದ ಕಾರಣ, ಕಂಡು ಸಂತೋಷ ಪಡುವ ಸೌಜನ್ಯವಿಲ್ಲ ಮತ್ಸರಪಡುತ್ತಿದ್ದಾರೆ. ಮತ್ಸರವೂ ಅಭಿಮಾನದ ಇನ್ನೊಂದು ಮುಖವೇ. ಅದು ಅಪ್ರತ್ಯಕ್ಷವಾಗಿ ನಿಮಗೆ ಪ್ರೋತ್ಸಾಹ.

ಚಂದ್ರಕಾಂತ ಶೆಣೈ, ಮಂಗಳೂರು

★ ಓರ್ವ ಮನುಷ್ಯ ವಿನಾಕಾರಣ ಇನ್ನೊಬ್ಬರನ್ನ ನಿಂದಿಸುವುದು, ದ್ವೇಷಿಸುವುದು ಏಕೆ?

* ದ್ವೇಷಕ್ಕೆ ಮೂರು ಕಾರಣ. ೧. ಸತ್ಯವನ್ನು ನೇರವಾಗಿ ತಿಳಿಸಿದಾಗ ಅಪ್ರಿಯಗೊಂಡ ಕೆಲವರು ದ್ವೇಷಿಸುವರು ೨. ಏನಾದರೂ ಧೂರ್ತಾಲೋಚನೆ ಇಟ್ಟುಕೊಂಡು ಬರುವರು. ಆಗ ತಮ್ಮ ಸ್ವಾರ್ಥಸಾಧನೆಯಾಗದಿದ್ದಾಗ ಅವಕಾಶ ಕೊಡದವರನ್ನು ನಿಂದಿಸುವರು. ೩. ಓರ್ವನ ಪ್ರತಿಭೆ ಅಧಿಕಗೊಂಡಾಗ ಅದನ್ನು ಕಂಡು ಸಹಿಸಿಕೊಳ್ಳಲಾರದೆ ಕುಹಕವನ್ನು ಆಡುವರು.

★ ಆಧ್ಯಾತ್ಮಿಕವಾದ ಮನೋಭಾವದವರು ಕರ್ತವ್ಯ ತಪ್ಪಿಸಿಕೊಳ್ಳುವುದರಲ್ಲಿ ಯಾವಾಗಲೂ ಮುಂದು ಎಂದು ಸಾಮಾನ್ಯರ ಅಭಿಪ್ರಾಯ. ಇದು ಸರಿಯೆ ?

* ಇದು ಆಧ್ಯಾತ್ಮದ ಸೋಗು ಹಾಕಿದ ಬಾಳಲಾರದವರ ಪರಿ. ನಿಜವಾದ ಆಧ್ಯಾತ್ಮ ಪ್ರಜ್ಞೆಯುಳ್ಳವರು ಎಲ್ಲ ಎಡರು-ತೊಡರು, ನಿಂದೆ-ವಂದನೆ ಸಹಿಸಿಕೊಂಡೂ, ಹೆಚ್ಚಿನ ಕರ್ತವ್ಯ ಮಾಡುವರು. ಬಸವಣ್ಣನವರು, ಸ್ವಾಮಿ ವಿವೇಕಾನಂದರು—ಈ

ಮುಂತಾದವರು ಆಧ್ಯಾತ್ಮ ಜೀವಿಗಳಲ್ಲವೆ? ಅವರು ಹೊರುತ್ತಿರುವ ಸಮಷ್ಟಿ ಉದ್ಧಾರದ ಕರ್ತವ್ಯವನ್ನು ಮತ್ತಾವ ಲೌಕಿಕನು ಹೊರಬಲ್ಲ.

ಶಿವಲಿಂಗದೇವರು ಭಾಲ್ಕಿ, ಕ್ಯಾಂಪ್ ಹೂಷಾ

★ ಮಂತ್ರ-ತಂತ್ರ ಮುಂತಾದ ಮಾಟ ವಿದ್ಯೆ ಕಲಿತರೆ ಹೆಚ್ಚು ಜನರು ಮರುಳಾಗಿ ಬರುವರು; ಬರೀ ಜ್ಞಾನಬೋಧೆ ಮಾಡಿದರೆ ಬರರು. ಆದ್ದರಿಂದ ಮಂತ್ರ-ತಂತ್ರ ಮಾಟಗಳಿಂದ ಜನರನ್ನು ಆಕರ್ಷಿಸಿ, ನಂತರ ಆತ್ಮಜ್ಞಾನದ ಬೋಧೆ ಮಾಡಿದರೆ ಒಳ್ಳೆಯದಲ್ಲವೆ?

* ಸಾತ್ವಿಕವಾದ ಆತ್ಮಜಾಗೃತಿಯ ಮಾರ್ಗದಿಂದ ಜನರನ್ನು ಆಕರ್ಷಿಸಬೇಕೇ ವಿನಾ, ಮೂಢನಂಬಿಕೆಗಳ ಮುಖಾಂತರವಲ್ಲ. ಎರಡನೆಯದಾಗಿ ಯಾವಾಗ ಮೂಢವಿಚಾರಗಳ ಜನರು ಬಂದು ಸ್ತುತಿ ಮಾಡಹತ್ತುತ್ತಾರೋ ಆಗ ತನ್ನ ಶಕ್ತಿಯ ಬಗ್ಗೆ ಆವಶ್ಯಕತೆಗಿಂತ ಹೆಚ್ಚಿನ ಅಹಂ ಬೆಳೆದು, ಜ್ಞಾನಬೋಧೆಯ ಧ್ಯೇಯವನ್ನೇ ಮರೆಯಬಹುದು. ಆದ್ದರಿಂದ ಪಾಚಿಕಟ್ಟಿದ ಆ ಶಿಲಾಪಥದಲ್ಲಿ ಸಾಗುವ ಪ್ರಯತ್ನಬೇಡ.

ಎಸ್. ವಿ. ಸಾಗರ, ತಾಲ್ಲೂಕಾ ಚಿಂಚೋಳಿ

★ ದೇವಾಲಯಕ್ಕೆ ಹೋದಾಗ ಗಂಟೆ ಬಾರಿಸುವುದೇಕೆ?

* ಮಲಗಿದವರನ್ನು ಎಚ್ಚರಿಸಿ, ನಿಮ್ಮತ್ತ ಆಕರ್ಷಿಸಲು ಅವರ ಹೆಸರನ್ನು ಕೂಗುವಿರಿ. ಹಾಗೆಯೇ ಓಂಕಾರ ಆತ್ಮನ ಸ್ವರೂಪಾತ್ಮಕ ಹೆಸರು. ಗಂಟೆಯಿಂದ ಹೊಮ್ಮುವ ಓಂಕಾರನಾದ ಸುಪ್ತ ಆತ್ಮವನ್ನು ಜಾಗೃತಿಸಲಿ ಎಂಬುದೇ ಉದ್ದೇಶ. ಇಂದ್ರಿಯಗಳನ್ನು ದೇವನತ್ತ ಆಕರ್ಷಿಸುವುದೇ ಗುರಿ.

ಗಂಗಾಧರ್, ಹುಬ್ಬಳ್ಳಿ

★ ಕೆಲವರಿಗೆ ನಿಮ್ಮ ಕ್ರಾಂತಿಕಾರಿ ವಿಚಾರಗಳು, ನೀವು ಮಾಡುವ ಒಳ್ಳೆಯ ಕಾರ್ಯ, ಹಾಕಿಕೊಳ್ಳುವ ಯೋಜನೆಗಳು ಯಾವೂ ಸರಿಬರವು. ಅದೇಕೆ?

* ಉತ್ತಮ ಊದಿನ ಕಡ್ಡಿಯ ವಾಸನೆ ಬಹುಪಾಲು ಜನಕ್ಕೆ ಸರಿಬರುತ್ತಿದ್ದರೂ ಕೆಲವರಿಗೆ ಅದು ಅಲರ್ಜಿ (Allergy). ತಮಗೆ ಸರಿಬರದೆಂದು ಅವರು ಊದಿನ ಕಡ್ಡಿಯನ್ನು ದ್ವೇಷಿಸತೊಡಗುವರು. ಆದ್ದರಿಂದ ಅವರ ಮೂಗಿನಲ್ಲೇ ಇರುವ ದೋಷವೆಂದು ತಿಳಿದು ನಾವು ಮರುಕಪಡಬೇಕೇ ವಿನಾ ಊದಿನ ಕಡ್ಡಿಯನ್ನು ದ್ವೇಷಿಸಬಾರದು.

ವಿದ್ಯಾಸಾಗರ ಸೀಳಿನ, ಚಿಂಚೋಳಿ

★ ಸಮಾಜದಲ್ಲಿ ಓರ್ವ ವ್ಯಕ್ತಿಯ ಸ್ಥಾನಮಾನ ಹೆಚ್ಚುವದು ಹಣದಿಂದಲೋ ಅಥವಾ ಗುಣದಿಂದಲೋ?

* ಮೂರ್ಖ ಸಮಾಜದಲ್ಲಿ ಹಣದಿಂದ; ಜ್ಞಾನಿಗಳ ಸಮಾಜದಲ್ಲಿ ಗುಣದಿಂದ. ಅದೇನೇ ಇರಲಿ, ಮೂರ್ಖ ಸಮಾಜದಲ್ಲಿಯೂ ಸಹ ಬದುಕಿದಾಗ ಹಣದಿಂದ ದೊಡ್ಡವನಾದರೂ ಸತ್ತನಂತರ ಉಳಿಯುವುದು ಗುಣದಿಂದ ಮಾತ್ರ.

ಮಂಜು, ಶಿವಮೊಗ್ಗ

★ ಮಾನವನ ಮೊದಲ ಗುರಿ ಏನು?

* ತಾನು ಒಳ್ಳೆಯವನಾಗುವುದು, ಅಂತರಂಗ ಶುದ್ಧಿ ಮಾಡಿಕೊಳ್ಳುವುದು; ನಂತರ ಪರಹಿತಾರ್ಥಕ್ಕಾಗಿ ಬಾಳುವುದು.

ದೇವರಾಜ ಅಂಗಡಿ, ಊರು ಬೇಡ

★ ನಾನೊಂದು ಸೋಜಿಗವ ಕಂಡೆ: ನೀವು ಸಂಪಾದಿಸಿದ "ನುಡಿ-ನೈವೇದ್ಯ" ಎಂಬ ಕೃತಿಯಲ್ಲಿ ಬಸವಣ್ಣನವರ ಬಗೆಗೆ ಬರೆದ ಒಂದು ಕವನ ಸೇರಿಸಿದ್ದೀರಿ. ಅವರು ನಿಮ್ಮ ದ್ವೇಷಿಗಳ ನಿಂದಕರ ಗುಂಪಿನ ಒಂದಂಗವಾಗಿದ್ದಾರೆ. ನಿಮಗಿದು ತಿಳಿದಿಲ್ಲವೆ?

* ಚೆನ್ನಾಗಿ ತಿಳಿದಿದೆ. ನಮ್ಮನ್ನು ದ್ವೇಷಿಸಿದರೇನಾಯ್ತು. ಬಸವಣ್ಣನವರಿಗೆ ಗೌರವ ಸಲ್ಲಿಸಿದ್ದಾರೆ ತಾನೆ! ಸಾಹಿತ್ಯ ರಚನೆಯ ಅವರ ಪ್ರತಿಭೆಯನ್ನು ನಾವೇಕೆ ಕಡೆಗಣಿಸಬೇಕು. ಅವರೂ ಬಸವಣ್ಣನವರ ಆರಾಧಕರಾದ ಕಾರಣ ಗುರುಬಂಧುಗಳೇ ನಮಗೆ.

* * *

ದೇಶ ದೇಹವಾದರೆ ಧರ್ಮ ಆತ್ಮ. ಆದ್ದರಿಂದ ದೇಶರಕ್ಷಣೆಯು ವಾಸ್ತವವಾಗಿ ಧರ್ಮರಕ್ಷಣೆಯೇ ರಾಷ್ಟ್ರ ರಕ್ಷಣೆಗಿಂತ ಮಿಗಿಲಾದ ಧರ್ಮವು ಇದೆಯೆ? ಈಗ ರಾಷ್ಟ್ರವೇ ದೇವರು. ರಾಷ್ಟ್ರ ರಕ್ಷಣೆಯೇ ಧರ್ಮ.

—ಶ್ರೀ ಸಿದ್ದಯ್ಯ ಪುರಾಣಿಕ

ಆನು ಒಲಿದಂತೆ ಹಾಡುವೆ-೪

—ಜಗದ್ಗುರು ಮಾತೆ ಮಹಾದೇವಿ

ಮೂಢಪಥ

೧೬. ತೊರೆಯ ಮೀವಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ
ತೊರೆಯಿಂ ಭೋ, ತೊರೆಯಿಂ ಭೋ.
ಪರನಾರಿಯ ಸಂಗವ ತೊರೆಯಿಂ ಭೋ !
ಪರಧನದಾಮಿಷವ ತೊರೆಯಿಂ ಭೋ !
ಇವ ತೊರೆಯದೆ ಹೋಗಿ ತೊರೆಯ ಮಿಂದರೆ
ಬರುದೊರೆ ಹೋಹುದು, ಕೂಡಲ ಸಂಗಮದೇವಾ.

ಅರ್ಥ : ತೊರೆಯಲ್ಲಿ ಮಿಂದು ಪುನೀತರಾದೆವು; ಹಿಂದಿನ ಪಾಪಗಳೆಲ್ಲವನ್ನೂ ಕಳೆದುಕೊಂಡೆವೆಂದು ಬೀಗುವ ಅಣ್ಣಗಳಿರಾ, ಪರಧನ—ಪರನಾರಿಯರ ಸಂಗವನ್ನು ತೊರೆಯಿರಿ. ಇವನ್ನು ತೊರೆಯದೆ ಕೇವಲ ಮೂಗುಮುಚ್ಚಿ ನೀರಲ್ಲಿ ಮುಳುಗಿದರೆ ಎಲ್ಲವೂ ವ್ಯರ್ಥ.

ವ್ಯಾಖ್ಯೆ : ಹಿಂದೂಗಳಲ್ಲಿ ತುಂಬಾ ವಿಚಿತ್ರವಾದ, ಹಾಸ್ಯಾಸ್ಪದವಾದ ಕೆಲವು ನಂಬಿಕೆಗಳಿವೆ. ತೀರ್ಥಕ್ಷೇತ್ರಗಳಲ್ಲಿ ಹರಿವ ನದಿಗಳಲ್ಲಿ ಮುಳುಗುಹಾಕಿ ಬಂದರೆ ಪಾಪ ಪರಿಹಾರವಾಯಿತು, ತಾವು ಶುದ್ಧರಾದೆವು ಎಂದು ಭಾವಿಸಿಕೊಳ್ಳುತ್ತಾರೆ. ಮಾತ್ರವಲ್ಲ ಮಾಡುವ ಮಿತಿ ಇಲ್ಲದ ಅನ್ಯಾಯ, ಕಾಳಸಂತೆ, ಮುಂತಾದವುಗಳನ್ನು ಮುಚ್ಚಿಕೊಂಡು ಮಹಾಧಾರ್ಮಿಕರೆಂದು ತೋರಿಸಿಕೊಳ್ಳಲು ತೀರ್ಥಕ್ಷೇತ್ರಯಾತ್ರೆ ಕೈಗೊಳ್ಳುವರು. ಪ್ರಕೃತಿಯಲ್ಲಿ ಹರಿಯುವ ನೀರು ಸ್ಥೂಲವಸ್ತು. ಅದು ಸ್ಥೂಲವಸ್ತುವಾದ ದೇಹವನ್ನು ತೊಳೆಯುವ ಸಾಮರ್ಥ್ಯ ಮಾತ್ರ ಹೊಂದಿದೆಯೇ ವಿನಾ, ಸೂಕ್ಷ್ಮವಾದ ಸ್ಪರ್ಶಾತೀತ ಮನವನ್ನಲ್ಲ. ಸ್ನಾನದಿಂದ ದೇಹ ಸ್ವಚ್ಛವಾಗುವುದೇ ವಿನಾ ಶುದ್ಧ (Pure) ವಾಗದು. ದಿವ್ಯ (Divine)ವೂ ಆಗದು. ಆದ್ದರಿಂದ ದೇಹದ ಶುಚಿತ್ವ ಸ್ನಾನದಿಂದ, ಅದರ ಶುದ್ಧತ್ವ ಸದಾಚಾರಸಮ್ಯಕ್‌ಚಾರಿತ್ರ್ಯದಿಂದ, ಪರಧನ–ಪರಸ್ತ್ರೀಯನ್ನು ತೊರೆಯುವುದರಿಂದ ; ಮತ್ತು ಅದರ ದಿವ್ಯತ್ವ ಅರ್ಚನೆ, ಸಾಧನೆ ಮುಂತಾದ ಯೋಗಾಭ್ಯಾಸಗಳಿಂದ. ಅದು ಬಿಟ್ಟು ಪಾಪಪರಿಹಾರಕ್ಕಾಗಿ ತೀರ್ಥಕ್ಷೇತ್ರ ದರ್ಶನ, ನದಿ ಸ್ನಾನ ಕೈಗೊಳ್ಳುವುದು ಸಾರಥಿಯು ಮೈಕೊಳೆಯಾದಾಗ ರಥವನ್ನು ತೊಳೆದಂತೆ ; ಅದೇ ರೀತಿ ದೇಹವು ಕೊಳೆಯಾದಾಗ ಕೇವಲ ಧ್ಯಾನದಿಂದ ಶುಚಿಯಾದೆ ಎನ್ನುವುದು ರಥ ಕೊಳೆಯಾದಾಗ ಸಾರಥಿಯ ಮೈ ತೊಳೆದಂತೆ. ಇದನ್ನರಿಯದೆ, ಕತ್ತಲೆ ಹೋಗಲೆಂದು ಕಸಬರಿಕೆ ತೆಗೆದುಕೊಂಡು ಗುಡಿಸಿದರೆ ಎಷ್ಟು ಅವಿವೇಕ ರಮಣೀಯವಾಗಿ ತೋರುವುದೋ ಅಷ್ಟೇ ಅವಿವೇಕ ರಮಣೀಯ ಸ್ನಾನಮಾಡಿ ಪವಿತ್ರನಾದೆನೆಂಬುವುದು.

ನೈತಿಕತೆ (Morality) ಮತ್ತು ಧಾರ್ಮಿಕತೆ (Spirituality) ಅವಿನಾಭಾವ ಕ್ರಿಯೆಗಳು. ನೈತಿಕತೆ ಇಲ್ಲದ ಧಾರ್ಮಿಕತೆಯನ್ನು ಕಲ್ಪಿಸಿಕೊಳ್ಳುವುದು ಅಸಾಧು ಮತ್ತು ಅಸಂಭವ. ಧಾರ್ಮಿಕತೆಯ ಮುಂಚಿನ ಮೆಟ್ಟಿಲು ನೈತಿಕತೆ. ಹೇಗೆ ಅಶುದ್ಧರಾಜಕಾರಣದಿಂದ ರಾಷ್ಟ್ರದ ವ್ಯವಸ್ಥೆ ಕೆಡುವುದೋ ಹಾಗೆ ಅಶುದ್ಧ, ಮೂಢ ಧಾರ್ಮಿಕ ನಂಬುಗೆಗಳಿಂದ ಜೀವನ ವ್ಯವಸ್ಥೆಯೇ ಕೆಡುವುದಾದ ಕಾರಣ ವಿಡಂಬನಾತ್ಮಕವಾಗಿ ಬಸವಣ್ಣನವರು ಇಲ್ಲಿ ಮೂಢ ಜನರನ್ನು ಪರಿಹಾಸ ಮಾಡುತ್ತಾರೆ. ಧಾರ್ಮಿಕತೆ ಇಲ್ಲದ ನೀತಿವಂತಿಕೆ ಅಷ್ಟೊಂದು ಅಪಾಯಕಾರಿಯಲ್ಲ ; ನೈತಿಕತೆ ಇಲ್ಲದ ಧಾರ್ಮಿಕತೆ (ಯ ಸೋಗು) ಮಹದಪಾಯಕಾರಿ, ಸಮಷ್ಟಿಗೆ ಹಾನಿಕರ. ಯಾವುದೋ ಮೂಢನಂಬಿಕೆಯ ಕವಚದಲ್ಲಿ ಹುದುಗಿಕೊಂಡು ಮಾಡುವ ಅರ್ಥರಹಿತ ಆಚರಣೆಗಳು ಯಾವುದೇ ರೀತಿಯ ಪ್ರಗತಿ, ಪರಿವರ್ತನೆಗಳನ್ನು ಜೀವನದಲ್ಲಿ ತಂದೀಯವು.

ಶರಣರೊಡನೆ ಸರಸಬೇಡ

೧೭. ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುರಿಸುವಂತೆ
ಉರಿವ ಕೊಳ್ಳಿಯ ಕೊಂಡು ಮಂಡೆಯಸಿಕ್ಕ ಬಿಡಿಸುವಂತೆ,
ಹುಲಿಯ ಮೀಸೆಯ ಹಿಡಿದುಕೊಂಡು
ಒಲಿದುಯ್ಯಾಲೆಯಾಡುವಂತೆ,
ಕೂಡಲ ಸಂಗನ ಶರಣರೊಡನೆ ಮರೆದು ಸರಸವಾಡಿದರೆ
ಸುಣ್ಣದ ಕಲ್ಲ ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ !

ಯಾರೋ ಒಬ್ಬನಿಗೆ ತುಂಬಾ ನವೆಯಾಗುತ್ತಿತ್ತು. ತಡೆಯಲಾರದೆ ಹರಿದುಬಂದ ನಾಗರವನ್ನೇ ಹಿಡಿದು ಕೆನ್ನೆಯನ್ನು ತುರಿಸಿಕೊಳ್ಳಲು ಹೋದನಂತೆ. ಓರ್ವ ಹೆಂಗೆಳೆ ಎಣ್ಣೆಯ ಸ್ನಾನ ಮಾಡಿದ್ದಳು, ಕೂದಲೆಲ್ಲ ಸಿಕ್ಕುಸಿಕ್ಕಾಗಿದ್ದುವು. ಬಿಡಿಸಿಕೊಳ್ಳಲು ಒಲೆಯುರಿಸುತ್ತಿದ್ದ ಆಕೆ ಕೊಳ್ಳಿಯನ್ನೇ ತೆಗೆದುಕೊಂಡು ಸಿಕ್ಕು ಬಿಡಿಸಿಕೊಳ್ಳಲು ಯತ್ನಿಸಿದಳಂತೆ. ಓರ್ವನಿಗೆ ತುಂಬಾ ಬೇಸರವಾಗಿತ್ತು. ಮನರಂಜನೆಯನ್ನು ಬಯಸಿದ. ಆಗ ಸನಿಹದಲ್ಲೇ ಹುಲಿಯೊಂದು ಓಡಾಡುತ್ತಿತ್ತು. ಅದರ ಮೀಸೆಯನ್ನು ಹಿಡಿದು ಉಯ್ಯಾಲೆಯಾಡಲು ಇಚ್ಛಿಸಿದನಂತೆ. ಎಂಥಾ ವಿಚಿತ್ರ ವರ್ತನೆ, ಬಯಕೆಗಳಲ್ಲವೆ? ಅದೇ ರೀತಿ ಮಹಾತ್ಮರು, ತ್ಯಾಗಿಗಳೊಡನೆ ಮರೆತು ಸರಸವಾಡುತ್ತ, ಕುಹಕ-ಕುತ್ಸಿತ ಮಾತುಗಳಲ್ಲಿ ತಲ್ಲೀನನಾದರೆ ನಿಂದಕನ ಪರಿಸ್ಥಿತಿ ಸುಣ್ಣದ ಕಲ್ಲನ್ನು ಮಡಿಲಲ್ಲಿ ಕಟ್ಟಿಕೊಂಡು ಮಡುವಿನಲ್ಲಿ ಬಿದ್ದಂತಾಗಿ, ಅವನು ಬೆಂದುಹೋಗುವನು, ಭಸ್ಮೀಭೂತನಾಗು

ವನು. ಪೌರಾಣಿಕ ಕಥೆಗಳಲ್ಲಿ ಅಷ್ಟಾಗಿ ನಂಬಿಕೆ ನಮಗಿಲ್ಲ. ಆದರೆ ಈ ಹಿನ್ನೆಲೆಯಲ್ಲಿ ಭಸ್ಮಾಸುರನ ಕಥೆ ಪ್ರಸ್ತಾಪಿಸಬಹುದು. ಭಸ್ಮಾಸುರ ಮೊದಲು ಸಾತ್ವಿಕನೆ. ಅವನಿಗೆ ತಪಸ್ಸುಮಾಡುವ ಇಚ್ಛೆಯಾಯ್ತು. ಆದರೆ ದೇವನು ಪ್ರತ್ಯಕ್ಷನಾದಾಗ ಸಾತ್ವಿಕ ವರ ಕೇಳುವುದು ಬಿಟ್ಟು ಅಹಂ ಸಹಿತವಾದ ವರ ಕೇಳಿದ. ಮುಟ್ಟಿದ್ದೆಲ್ಲ ಭಸ್ಮವಾಗುವಂತಹ ಶಕ್ತಿಯನ್ನು ಬೇಡಿದ. ಅದು ಸಿಕ್ಕಿತೂ ಸಹ. ಆದರೆ ಪಡೆದುಕೊಂಡ ಶಕ್ತಿಯಿಂದ ಮದೋನ್ಮತ್ತನಾದ. ಎಲ್ಲರ ಮೇಲೆ ಹಗೆ ತೀರಿಸಿಕೊಳ್ಳತೊಡಗಿದ. ಅವನ ದುಷ್ಟಪ್ರವೃತ್ತಿಯಿಂದಲೇ ಅವನು ನಾಶವಾಗುವ ಉಪಾಯವನ್ನು ವಿಷ್ಣು ಯೋಜಿಸಿ ವೈಮರೆತು ತನ್ನ ತಲೆಯಮೇಲೆ ತಾನು ಕೈ ಇಟ್ಟುಕೊಳ್ಳುವಂತೆ ಮಾಡಿದಾಗ, ತನ್ನ ಪ್ರತಿಭೆ ಅಥವಾ ವರವೇ ತನ್ನ ಪತನಕ್ಕೆ ಕಾರಣೀಭೂತವಾಯಿತು.

ಹಾಗೆಯೇ ಕೆಲವರು ಆಧುನಿಕ ಭಸ್ಮಾಸುರರಿರುವರು. ಅವರಿಗೆ ಯಾವುದೋ ಪುಣ್ಯಬಲದಿಂದ ವಾಗ್ಮಿತ್ವ (Oratory) ಅಥವಾ ಬರವಣಿಗೆ (Writing) ಅಥವಾ ಪ್ರಭಾವ (Influence) ಬೆಳೆದಿರುತ್ತದೆ. ಬರುಬರುತ್ತ ಈ ಶಕ್ತಿಗಳನ್ನು ಅವರು ಸದುಪಯೋಗಕ್ಕೆ ಬಳಸುವುದಕ್ಕಿಂತ, ಅನ್ಯರ ಬೆದರಿಕೆ, ಶೋಷಣೆಗೆ ಬಳಸತೊಡಗುತ್ತಾರೆ. ತಾವೇನೋ ಅನ್ಯರನ್ನು ನಿಂದಿಸಿ, ಅವರ ತೇಜೋವಧೆ ಮಾಡಿ ದೊಡ್ಡವರಾದೆವೆಂಬ ಭ್ರಾಂತಿಯಿಂದ ಭಸ್ಮಾಸುರನಂತೆ ಬೀಗತೊಡಗುತ್ತಾರೆ. ಅವರ ವಿನಾಶಕ್ಕಾಗಿಯೇ ಕೇಡುಬುದ್ಧಿ ಬಂದಿರುತ್ತೋ ಏನೋ! ಒಂದಾನೊಂದು ದಿನ ಪಾಪದ ಕೊಡ ತುಂಬುತ್ತಿದ್ದಂತೆಯೇ, ಅವರ ಕುಹಕ ಗುಣವೇ ಅವರಿಗೆ ಪರಮ ಶತ್ರುವಾಗಿ ಭಸ್ಮಾಸುರನನ್ನು ಆಹುತಿ ತೆಗೆದುಕೊಂಡಂತೆ ಮಾಡುತ್ತದೆ. ಆದ್ದರಿಂದ 'ಈ ಸರಸ-ವಿರಸಗಳ ಜೂಜಾಟಕ್ಕೆ ಕೈ ಹಾಕದಿರು ಮನುಜಾ' ಎಂದು ಬಸವಣ್ಣನವರು ಎಚ್ಚರಿಸುವುದರೊಡನೆ ನಿಂದಕನ ಮನಸ್ಸನ್ನು ಹಂತ ಹಂತವಾಗಿ ಚಿತ್ರಿಸುತ್ತಾರೆ.

'ಕೆನ್ನೆಯ ನವೆ' ಸುಮ್ಮನೆ ಇರಗೊಡದು. ಹಾಗೆ ಕೆಲವರಿಗೆ ಅನ್ಯರನ್ನು ಬೆದರಿಸುವ, ನಿಂದಿಸುವ, ಕುಹಕ-ಕುತ್ಸಿತವಾಡುವ ಸ್ವಭಾವ. ಆ ತೀಟೆ (ನವೆ) ತೀರಿಸಿಕೊಳ್ಳಲು ಅವರಿವರೆಂದೇನೂ ಇಲ್ಲ; ಕೈಗೆ ಯಾರು ಸಿಕ್ಕಿದರು ಆಯಿತು. ಆಕಸ್ಮಿಕವಾಗಿ ನಾಗರಹಾವು ಹರಿದುಬಂದರೂ ಅದನ್ನೇ ತನ್ನ ನವೆ ತೀರಿಸಿಕೊಳ್ಳಲು ಬಳಸುವಂತೆ, ಇವರು ಯಾರು ಕಣ್ಣಿಗೆ ಕಾಣುತ್ತಾರೋ ಅವರನ್ನೇ ತಮ್ಮ ಬಾಯಿಗೆ, ನಾಲಿಗೆಗೆ ಆಹಾರವಾಗಿ ತೆಗೆದುಕೊಳ್ಳುವರು.

ಮುಂಡೆ ಸಿಕ್ಕಾದಾಗ ಕೊಳ್ಳಿಯನ್ನು ತೆಗೆದುಕೊಳ್ಳುವ ಹೆಂಗಸು ಇನ್ನೊಂದು ಬಗೆಯ ಸ್ವಭಾವದವಳು. ತಮ್ಮ ಹುಳುಕು, ಸಿಕ್ಕು, ಲೋಪ ಮುಚ್ಚಿಕೊಳ್ಳಲು ಇವರು ಇನ್ನೊಬ್ಬರನ್ನು ದೂರತೊಡಗುವವರು. ಆದರೆ ಆ ನಿಂದಾಸ್ವಭಾವದ ಉರಿಗೆ ತಮ್ಮ ಮುಂಡೆಯನ್ನು (ಔನ್ನತ್ಯವನ್ನು, ವ್ಯಕ್ತಿತ್ವವನ್ನು) ಬಲಿಗೊಡಬೇಕಾದೀತೆಂಬ ಪ್ರಜ್ಞೆ ಇಲ್ಲದವರು ಇವರು. ಇನ್ನು ಮೂರನೆಯವನು, ಮನರಂಜನೆಗಾಗಿ ಹುಲಿಯ ಮೀಸೆಯ ಹಿಡಿದು ಉಯ್ಯಾಲೆಯನ್ನಾಡುವವನು. ಕೆಲವರಿಗೆ ಅನ್ಯರನ್ನು ಅಪಹಾಸ್ಯಮಾಡಿ ಮಾತನಾಡುವ

ಚಟವಿರುತ್ತದೆ. ಅದವರಿಗೆ ಮನರಂಜನೆಯ ವಿಷಯ. ಅವರಿಗೆ ತಾತ್ಕಾಲಿಕವಾಗಿ ಮನರಂಜನೆಯಾದರೂ ಹುಲಿಯ ಮೀಸೆಯನ್ನು ಹಿಡಿದು ಉಯ್ಯಾಲೆಯನ್ನಾಡುವಷ್ಟೇ ಅಪಾಯಕಾರಿ ಎಂದರಿತಿರುವುದು ಒಳ್ಳೆಯದು. ಕೂಡಲ ಸಂಗನ ಶರಣರು, ತ್ಯಾಗಿಗಳು, ನಿಸ್ವಾರ್ಥಿಗಳು ಮುಂತಾದವರೊಡನೆ ಲಘುವಾಗಿ ವ್ಯವಹಾರ ಮಾಡುವುದು, ಅವರನ್ನು ಕಟಕಿಯಾಡಿ ನೋಯಿಸುವುದು, ನಿಂದಿಸುವುದು ಭಯಾನಕ ಪರಿಣಾಮಕ್ಕೆ ಎಡೆಮಾಡಿಕೊಡುವುದು. ಹೊಸದಾದ ಸುಣ್ಣವನ್ನು ಮಡಿಲಲ್ಲಿ ಕಟ್ಟಿಗೊಂಡು ನೀರಿನ ಮಡುವಿಗೆ ಹಾರಿದಂತೆ! ಅದು ಶಾರೀರಿಕವಾಗಿಯಾದರೂ ಸುಡಬಹುದು, ಮಾನಸಿಕ ಪಶ್ಚಾತ್ತಾಪದ ಬೇಗೆಯಲ್ಲಾದರೂ ಬೇಯುವಂತೆ ಮಾಡಬಹುದು. ಅಥವಾ ಪಾಪದ ಕಾಡ್ಗಿಚ್ಚಿನಲ್ಲಾದರೂ ಸುಡುವಂತೆ ಗೈಯಬಹುದಾದ ಕಾರಣ ಈ ದುಃಸಾಹಸಕ್ಕೆ ಕೈಹಾಕದಿರಲು ಬಸವಣ್ಣನವರು ಎಚ್ಚರಿಸುತ್ತಾರೆ.

ಕಾಯಕ ನಿಷ್ಠೆ

೧೮. ಹೊತ್ತಾರೆ ಎದ್ದು ಕಣ್ಣು ಹೊಸೆಯುತ್ತ
'ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿ-ಮಕ್ಕಳಿಗೆ'ಂದು
ಕುದಿದೆನಾದರೆ ಎನ್ನ ಮನಕ್ಕೆ ಮನವೇ ಸಾಕ್ಷಿ!
ಆಸನೇ ಶಯನೇ ಯಾನೇ! ಸಂಪರ್ಕೇ ಸಹ ಭೋಜನೇ
ಸಂಚರಂತಿ ಮಹಾಘೋರೇ! ನರಕೋ ಕಾಲಮಕ್ಷಯಂ,
ಎಂಬ ಶ್ರುತಿಯ ಬಸವಣ್ಣನೋದುವನು ಎಂಬರು
'ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿರ್ದು
ಓಲೈಸಿಹನೆ'ಂದು ನುಡಿವರಯ್ಯ ಪ್ರಮಥರು.
ಕೊಡುವೆನುತ್ತರವನವರಿಗೆ, ಕೊಡಲಮ್ಮುವೆ
ಹೊಲೆಯ ಹೊಲೆಯರ ಮನೆಯ ಹೊಕ್ಕು,
ಸಲೆ ಕೈಕೂಲಿಯ ಮಾಡಿಯಾದರೆಯೂ
ನಿಮ್ಮ ನಿಲವಿಂಗೆ ಕುದಿವೆನಲ್ಲದೆ
ತಲೆದಂಡ! ಕೂಡಲ ಸಂಗಮದೇವ.

ಅರ್ಥ : "ಸುಪ್ರಭಾತದಲ್ಲಿ ಏಳುವಾಗ ಏಳುತ್ತಲೇ, ಕಣ್ಣನ್ನು ಹೊಸೆಯುತ್ತ ನನ್ನ ಹೊಟ್ಟೆಯ ತೃಪ್ತಿಗೆಂದು, ಆಸ್ತಿಯ ವರ್ಧನೆಗೆಂದು, ಹೆಂಡತಿ-ಮಕ್ಕಳ ತೃಪ್ತಿಗೆಂದು ಚಿಂತೆಯನ್ನು ಮಾಡಿ, ಕುದಿದೆನಾದರೆ ನನ್ನ ಅಂತರಾತ್ಮವೇ ನೋಡಿಕೊಳ್ಳಲಿ. 'ಕುಳಿತುಕೊಂಬಲ್ಲಿ, ಮಲಗುವಲ್ಲಿ, ವ್ಯವಹಾರ-ಊಟೋಪಚಾರಗಳಲ್ಲಿ ಭವಿಗಳೊಡನೆ ಒಡನಾಡಿದನಾದರೆ ಅನಂತಕಾಲದವರೆಗೆ ಘೋರ ನರಕದಲ್ಲಿ ಪರಿತಪಿಸಬೇಕಾಗುವುದು' ಎಂಬ ಶಾಸ್ತ್ರವಾಕ್ಯವನ್ನು ಬಸವಣ್ಣನವರು ಓದುತ್ತಾರೆ. ಆದರೆ ತಾವು ಧರ್ಮಗುರುವಾಗಿ ಭವಿ

ಬಿಜ್ಜಳನ ಸಿಂಹಾಸನದ ಕೆಳಗೆ ಪ್ರಧಾನಿಯಾಗಿ ಕುಳಿತು ರಾಜನ ಸೇವೆ ಮಾಡುತ್ತಿರುವವರು ಎನ್ನುತ್ತಾರೆ ಶರಣರು. ಅವರಿಗೆ ಉತ್ತರ ಕೊಡುವೆ, ಕೊಡಲಿಚ್ಛಿಸುವೆ, ನಾನು ಮಾಡುತ್ತಿರುವದು ಒಂದು ಕಾಯಕ, ಬಿಜ್ಜಳನ ವೈಯಕ್ತಿಕ ಸೇವೆಯನ್ನಲ್ಲ. ಈ ಕಾಯಕವನ್ನು ನಾನು ಬಿಜ್ಜಳನ ಪ್ರಧಾನಿಯಾಗಿ ಮಾಡಬೇಕೆಂದೇನೂ ಇಲ್ಲ ; ಹೊಲೆಯರ ಮನೆಯಲ್ಲಿ ಕೈಕೂಲಿಯನ್ನು ಮಾಡೆಂದರೂ ಮಾಡುತ್ತೇನೆ. ಪ್ರಧಾನಿಯ ಕಾಯಕವನ್ನೇ ಮಾಡಲಿ, ಹೊಲೆಯರ ಮನೆಯಲ್ಲಿ ಕೂಲಿಯನ್ನೇ ಮಾಡಲಿ ನನಗೆ ಅವೆರಡೂ ಒಂದೇ. ಉದ್ದೇಶ ಮಾತ್ರ ಒಂದೇ ಒಂದು. ಅದು ಪರಮಾತ್ಮನಿಗಾಗಿ ಕುದಿಯುವುದು, ತನ್ಮೂಲಕ ಅವನ ಕರುಣೆಯನ್ನು ಪಡೆಯುವುದು ; ಸಮಾಜಕ್ಕಾಗಿ ದುಡಿಯುವುದು. ಈ ಮಾತನ್ನು ಕೂಡಲ ಸಂಗಮನ ಸಾಕ್ಷಿಯಾಗಿಯೇ ಹೇಳುವೆ".

ವ್ಯಾಖ್ಯೆ : ಬಸವಣ್ಣನವರು ತುಂಬಾ ಗಂಭೀರವಾದ ಒಂದು ವಿಷಯವನ್ನಿಲ್ಲಿ ಪ್ರಸ್ತಾಪಿಸುತ್ತಾರೆ. ಅವರು ರಾಜಕೀಯದಲ್ಲಿ ಅತ್ಯುನ್ನತ ಹುದ್ದೆಯಾದ ಪ್ರಧಾನಿತ್ವ ವಹಿಸಿಕೊಂಡಿದ್ದರು. ಆದರೆ ಅವರು ಕೆಲಸ ನಿರ್ವಹಿಸಬೇಕಾದುದು ಮಾತ್ರ ವಿಧರ್ಮೀಯನಾದ ಬಿಜ್ಜಳನ ಕೈಕೆಳಗೆ. ಅವನು ಜೈನನಾಗಿದ್ದರೂ, ಅದು ಪರಧರ್ಮವೆ. ಅಥವಾ ಅನೇಕ ಇತಿಹಾಸಕಾರರು ನಿರ್ಣಯಿಸಿರುವಂತೆ ಶೈವನಾಗಿದ್ದರೂ ವಿಧರ್ಮವೆ! ಏಕೆಂದರೆ ಬಸವಣ್ಣನವರು ಕಟ್ಟುನಿಟ್ಟಾದ ಏಕದೇವೋಪಾಸಕರು, ದೇವಾಲಯ ವಿರೋಧಿಗಳು, ಜಾತ್ಯತೀತವಾದಿಗಳು. ಬಿಜ್ಜಳನು ಈ ವೈಚಾರಿಕ ಧರ್ಮವನ್ನು ಅನುಸರಿಸುವ ಮನಸ್ಸಾಮರ್ಥ್ಯವನ್ನಂತೂ ಹೊಂದಿರಲಿಲ್ಲ. ಅವನಿಗೆ ಕಣ್ಣಮುಂದಿದ್ದುದು ಧರ್ಮಾಚರಣೆಯಲ್ಲ, ಸಿಂಹಾಸನಾಧಿಕಾರದ ಸ್ವಾಮಿತ್ವ. ಇಂಥ ಪ್ರಸಂಗಗಳಲ್ಲಿ ತೀರ ವೈಯಕ್ತಿಕ ಧರ್ಮಾಚರಣೆಗಳ ಪ್ರಸಂಗದಲ್ಲಿ ತಿಕ್ಕಾಟ ನಡೆಯಲಿಕ್ಕೂ ಸಾಕು. ಇಂಥ ಪ್ರಸಂಗದಲ್ಲಿ ಧರ್ಮಗುರು, ಮಂತ್ರಪುರುಷ, ಭಕ್ತರ ಆರಾಧ್ಯಮೂರ್ತಿ, ಯುಗಪ್ರವರ್ತಕ ಬಸವಣ್ಣನವರು ಬಿಜ್ಜಳನ ಕೈಕೆಳಗೆ ಕೆಲಸಮಾಡುವುದು (ಪ್ರಧಾನಿಯ ಹುದ್ದೆಯಾದರೂ ಕಾಯಕ ತಾನೆ) ಅವರ ಭಕ್ತರಿಗೆ, ಅನುಯಾಯಿಗಳಿಗೆ ಸರಿಬರುತ್ತಿರಲಿಲ್ಲ. ಆಗ ಅವರು ನುಡಿಯುತ್ತಿದ್ದರು: "ಭವಿಗಳೊಡನೆ, ಅರ್ಥಾತ್ ಲೌಕಿಕರೊಡನೆ (ವಿಧರ್ಮೀಯರೊಡನೆ) ವ್ಯವಹಾರವನ್ನು ಮಾಡಬಾರದೆಂದು ಹೇಳುವ ಶಾಸ್ತ್ರಗಳನ್ನು ಬಸವಣ್ಣನವರು ಓದಿಯೇ ಓದುತ್ತಾರೆ. ಆದರೆ ಭವಿಯಾದ (ಕೇವಲ ರಾಜ್ಯಾಧಿಕಾರದಲ್ಲೇ ಆಸಕ್ತನಾದ, ಲೌಕಿಕ ಪ್ರವೃತ್ತಿಯ ಪರಧರ್ಮಿ) ಬಿಜ್ಜಳನ ಕೈಕೆಳಗೆ ಕಾಯಕ ಮಾಡಬಹುದೆ?"

ಈ ಪ್ರಶ್ನೆಗೆ ಬಸವಣ್ಣನವರು ಉತ್ತರವನ್ನು ಕೊಡಲು ಇಚ್ಛಿಸುವರು. ಅವರು ಹೇಳುತ್ತಾರೆ : "ಯಾರಾದರೇನು ಕಾಯಕ ಮಾಡಲೇಬೇಕು. ಗುರುವಾಗಲಿ, ಲಿಂಗವಾಗಲೀ, ಜಂಗಮನಾಗಲಿ ಕಾಯಕ ಮಾಡಬೇಕು. ನನಗೆ ಯಾವ ಕಾಯಕವೆಂದೇನೂ ಇಲ್ಲ. ಹೊಲೆಯರ ಮನೆಯಲ್ಲಿ ಕೂಲಿ ಮಾಡಿದರೂ ಸಂತೋಷಕರವೇ. ಬಿಜ್ಜಳನ ಪ್ರಧಾನಿತ್ವವೂ ಅಷ್ಟೇ. ಎರಡನೆಯದಾಗಿ ದೊಡ್ಡ ಅಧಿಕಾರಗಳು, ವೀರನ ಕೈಯಲ್ಲಿ ಶೋಭಿಸುವ ಕತ್ತಿಯಂತೆ, ಯೋಗ್ಯರ ಕೈಯಲ್ಲಿ ಶೋಭಿಸುವವು. (ಎಷ್ಟೋ ಬಾರಿ

ಬಿಜ್ಜಳ-ಬಸವಣ್ಣನವರುಗಳಲ್ಲಿ ಭಿನ್ನಾಭಿಪ್ರಾಯ ಬಂದಾಗ, ಸಂಪ್ರದಾಯವಾದಿಗಳ, ಚಾಡಿಕೋರರ ಮಾತಿಗೆ ಮರುಳಾಗಿ ಬಿಜ್ಜಳ ಕಟುವಾಗಿ ವರ್ತಿಸಿದಾಗ ಬಸವಣ್ಣನವರಿಗೆ ಅಧಿಕಾರ ತ್ಯಾಗಮಾಡುವ ಮನಸ್ಸು ಬಂದಿರಬಹುದು. ಆದರೆ ದುಡುಕಿ ತಾವು ತೊರೆದುದಾದರೆ ಕುಹಕಿಗಳು, ದುರ್ಜನರು, ಅಯೋಗ್ಯರಾದ ಮಂಚಣ್ಣ, ನಾರಣಕ್ರಮಿತರುಗಳ ಕೈಗೆ ಅಧಿಕಾರ ಸಿಕ್ಕಿ ಪ್ರಜೆಗಳು ನಲುಗುವರು. ಆದ್ದರಿಂದ ತಾವು ಸಹನೆಯಿಂದಿರಬೇಕು ಎಂದು ಸಂತೈಸಿಕೊಂಡಂತೆ ಕಾಣುತ್ತದೆ. ಮತ್ತು ಬಿಜ್ಜಳನು ಚಾಡಿಕೋರರ ಮಾತಿಗೆ ಮರುಳಾಗಿ ಉದ್ವಿಗ್ನನಾಗಿ ವರ್ತಿಸಿ ಕೆಲವೊಮ್ಮೆ ಮನ ನೋಯಿಸಿದರೂ, ಮತ್ತೆ ಸತ್ಯವನ್ನು ತಿಳಿದುಕೊಂಡು ಶಾಂತನಾಗಿ, ವಿನೀತನಾಗಿ ಕ್ಷಮೆ ಕೇಳುವ ಸ್ವಭಾವದವನಾಗಿ ತೋರುತ್ತಾನೆ.) ಮೂರನೆಯದಾಗಿ ಉನ್ನತ ಅಧಿಕಾರ, ಅದರಿಂದ ದೊರೆಯುವ ವಿಶೇಷ ಹಕ್ಕುಗಳನ್ನು ಚಲಾಯಿಸಿ ಏನಾದರೂ ಸಮಾಜ ಸೇವೆ, ಜನೋಪಯೋಗಿ ಕಾರ್ಯಗಳನ್ನು ಮಾಡಲು ಸಾಧ್ಯವೆಂದು ಬಸವಣ್ಣನವರು ಭಾವಿಸಿದ್ದರು. ಕೇವಲ ಕುಟೀರವಾಸಿಯಾದ, ಲಂಗೋಟಿಯ ಗುರುವಾಗಿ ಕ್ರಾಂತಿಕಾರಿ ಜಾತ್ಯತೀತವಾದ ಮಾಡುವುದಕ್ಕಿಂತಲೂ, ಒಂದು ಉನ್ನತ ಹುದ್ದೆಯಲ್ಲಿದ್ದು ಸಮಾಜಕ್ಕೆ ಬೇಕಾದ ಪ್ರಗತಿಪರ ಮೌಲ್ಯಗಳನ್ನು ಬಿತ್ತರಿಸುವುದು ಸುಲಭ ಮತ್ತು ಪರಿಣಾಮಕಾರಿ ಎಂದು ಮನಗಂಡಿದ್ದರು.

ಅಂತೆಯೇ ದೃಢವಾಗಿ ಹೇಳುತ್ತಾರೆ : "ಬಿಜ್ಜಳನ ಕೈಕೆಳಗೆ ಕೈಗೊಂಡ ಕಾಯಕ ಅವನನ್ನು ಓಲೈಸಲು, ಹೊಗಳು ಭಟ್ಟಂಗಿಯಾಗಲು ಅಲ್ಲ. ದೇವರ ಮುಖವಾದ ಸಮಾಜದ ಕೈಂಕರ್ಯ ಮಾಡಲಿಕ್ಕೆ. ಆದ್ದರಿಂದ ಬೆಳಗಾಗುತ್ತಲೇ ಹಾಸಿಗೆಯಿಂದ ಮೇಲೇಳುವಾಗ ನನ್ನ ಹೊಟ್ಟೆಯ ತೃಪ್ತಿಗಾಗಿ, ಆಸ್ತಿಸಂಗ್ರಹಕ್ಕಾಗಿ, ಹೆಂಡತಿಯ ಅಲಂಕಾರ— ಆಡಂಬರಗಳಿಗಾಗಿ, ಮಕ್ಕಳ ಭವಿಷ್ಯಕ್ಕಾಗಿ ಕುದಿದೆನಾದರೆ ನನ್ನ ಅಂತರಾತ್ಮವೇ ನನ್ನನ್ನು ಹತಿಸಲಿ. ನನ್ನ ಗುರಿ, ಯಾವ ಕಾಯಕವೇ ಮಾಡಲಿ, ವೈಯಕ್ತಿಕ ಸುಖಭೋಗವಲ್ಲ ಸಮಾಜದ ಶ್ರೇಯಸ್ಸು." ಇಂದಿನ ಸಮಾಜಕ್ಕೂ ಇಲ್ಲಿ ಬುದ್ಧಿವಾದವಿದೆ. ಉದಾಹರಣೆಗೆ, ಭಾರತ ಪ್ರಜೆಗಳಾದ ಮುಸ್ಲಿಮರು ಭಾರತ-ಪಾಕಿಸ್ಥಾನ ನಡುವೆ ಯುದ್ಧವಾದಾಗ ಭಾರತಕ್ಕೆ ಜಯವಾದಾಗ ಸಂತೋಷ ಪಡಬೇಕೇ ವಿನಾ ಪಾಕಿಸ್ಥಾನ ಗೆದ್ದಾಗಲ್ಲ. ಏಕೆಂದರೆ ಅವರು ಭಾರತದ ಪ್ರಜೆಗಳೆಂದು ಘೋಷಿಸಿಕೊಂಡಿರುತ್ತಾರೆ. ಈ ನೆಲದ ಅನ್ನವನ್ನುಣ್ಣುತ್ತಿರುತ್ತಾರೆ. ರಾಷ್ಟ್ರದ ಪ್ರಸಂಗ ಬಂದಾಗ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ ಧರ್ಮಾಚರಣೆಯನ್ನು ಬದಿಗಿಡಬೇಕು. ರಾಷ್ಟ್ರ-ಸಮಾಜಗಳ ಉಳುವಿಗಾಗಿ ಧರ್ಮಾಂಧತೆ ತೊರೆಯಬೇಕು.

ದೇವನು ಚುಳುಕಾದ ಬಗೆ

೧೯. ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮಕುಟ।

ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ
ಕೂಡಲ ಸಂಗಮದೇವಯ್ಯ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ ||

ವ್ಯಾಖ್ಯೆ: ಪರಮಾತ್ಮನು ಜಗದಲ್ಲೆಲ್ಲ ಹಾಸುಹೊಕ್ಕಾಗಿ, ಸರ್ವವ್ಯಾಪಿಯಾಗಿ ಇದ್ದಾನೆ. ಆಕಾಶದ ಪೊಳ್ಳಿನಲ್ಲೆಲ್ಲ ತುಂಬಿ ತುಳುಕುತ್ತ ಎಷ್ಟು ಘನನಾಗಿದ್ದಾನೆಂದರೆ ತನ್ನಷ್ಟೇ ಘನನಾಗಿದ್ದಾನೆ. ಲೋಕದಲ್ಲಿ ಅತ್ಯಂತ ಕೆಳಗಿನ ಸ್ತರವೊಂದಿದ್ದರೆ, ಅದನ್ನು ದಾಟಿವೆ ಅವನ ಪಾದಗಳು. ಮೇಗಡೆ ಇನ್ನಾವ ಊರ್ಧ್ವಲೋಕವೇನಾದರೂ ಇದ್ದರೆ ಅದನ್ನು ದಾಟಿದೆ ಅವನ ಶಿರಸ್ಸು. ಇವನು ಗಮನವಿಲ್ಲದ ಅಗಮ್ಯ; ಇಂದ್ರಿಯಾನುಭವಕ್ಕೆ ಅಗೋಚರ, ಹೋಲಿಕೆಗೆ ಯಾರೂ ಇಲ್ಲದ ಅಪ್ರತಿಮ. ಇಂಥ ದೇವನು ಬಸವಣ್ಣನವರು ಕಂಡುಹಿಡಿದ ಇಷ್ಟಲಿಂಗ ರೂಪದಲ್ಲಿ ಸಾಕಾರಗೊಂಡು ಚುಳುಕಾಗಿ ಬಂದು ಸ್ಥಾಪಿತವಾಗಿದ್ದಾನೆ.

ಇದು ಹೇಗೆಂದರೆ; ದೇವನು ನಿರಾಕಾರ. ಅವನು ಅಭಿವ್ಯಕ್ತಗೊಳ್ಳುವುದು ತನ್ನ ಕಾರ್ಯವಾದ ಸೃಷ್ಟಿಯಲ್ಲಿ. ಈ ಬ್ರಹ್ಮಾಂಡವು ಗೋಲಾಕಾರದಲ್ಲಿದೆ. ಆದ್ದರಿಂದ ಆ ಆಕಾರದಲ್ಲಿ ಪೂಜೆಗೆ ಅವಶ್ಯಕವಾದ ಸಾಕಾರವೊಂದನ್ನು ಬಸವಣ್ಣನವರು ಸೃಷ್ಟಿಸಿದರು. ಬೃಹದಾದ ಕರಿಯು ಕಿರಿದಾದ ಕನ್ನಡಿಯಲ್ಲಿ ಚುಳುಕಾಗಿ ಪ್ರತಿಬಿಂಬಿಸುವಂತೆ, ದೇವನು ಇಷ್ಟಲಿಂಗದಲ್ಲಿ ಚುಳುಕಾಗಿ ವ್ಯಕ್ತನಾಗುತ್ತಾನೆ.

ತತ್ತ್ವನಿಷ್ಠೆ

೨೦. ಆರು ಮುನಿದು ನಮ್ಮನೇನ ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವದು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ
ನಮ್ಮ ಸೊಣಗಂಗೆ ತಳಿಗೆಯನಿಕ್ಕಬೇಡ !
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲದೆ
ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ ?

ತತ್ತ್ವನಿಷ್ಠರಾಗಿ, ನಿಷ್ಠುರವಾದಿಗಳಾಗಿ ಸಾಗುವ ಅನೇಕ ಪ್ರಗತಿಪರ ವಿಚಾರವಾದಿಗಳಿಗೆ ಕಷ್ಟಸಮೂಹ ಎದುರಾಗುವ ಪ್ರಸಂಗಗಳು ಬಹಳ. ಬೆಳಕನ್ನು ಕಂಡು ಕತ್ತಲೆ ಮುನಿಯುವಂತೆ ಅನೇಕ ಸಂಕುಚಿತ ವಿಚಾರದವರು ಮುನಿಯುವರು. ಕೆಲವೊಮ್ಮೆ ಊರಿಗೆ ಊರೇ ಮುನಿದು, ಬಹಿಷ್ಕರಿಸಿ ನೀರು, ದವಸ-ಧಾನ್ಯಗಳನ್ನೂ ಕೊಡಲಿಕ್ಕಿಲ್ಲ. ಮಗನಿಗೆ ಹೆಣ್ಣು ಕೊಡಲಿಕ್ಕಿಲ್ಲ; ಅವರ ಮನೆಯ ಮಗಳನ್ನು ಸೊಸೆಯನ್ನಾಗಿ ಸ್ವೀಕರಿಸಲಿಕ್ಕಿಲ್ಲ. ಮಾತ್ರವಲ್ಲ ಈ ದ್ವೇಷ ಎಷ್ಟುಮಟ್ಟಿಗೆ ಮುಂದರಿಯುವುದೆಂದರೆ ಇವರ ಮನೆಯ ನಾಯಿ ಹಸಿದು ಸಾಯುತ್ತಿದ್ದರೂ ಒಂದು ತುತ್ತು ಅನ್ನ ಎಸೆಯಲಿಕ್ಕಿಲ್ಲ

"ಏಯ್, ಅದು ಅವನ ಮನೆ ನಾಯಿ, ಸಾಯ್ತಿದ್ದರೂ ಅನ್ನ ಹಾಕಬೇಡಿರಿ. ಅಷ್ಟು ದೊಡ್ಡ ದೊಡ್ಡ ಮಾತಾಡ್ತಾನೆ. ಹಿಂಗೇ ಕಷ್ಟ ಬರಬೇಕವನಿಗೆ...." ಎಂದು ಮುಗ್ಧ ಪ್ರಾಣಿಗೆ ಸಹ ಹಿಂಸೆ ಕೊಡಬಹುದು. ಇಷ್ಟೆಲ್ಲ ಪರಿಸ್ಥಿತಿ ಗಂಭೀರವಾದರೂ ಸತ್ಯವಾದಿಯಾದ ಶರಣನು ಬೆಚ್ಚಬಾರದು, ಬೆದರಬಾರದು. ಏಕೆಂದರೆ ಅವನು ಸಾಗುತ್ತಿರುವುದು ಒಂದು ಆನೆಯ ಮೇಲೆ. ಬೀದಿಯ ನಾಯಿಗಳು ಏನೇನೂ ಮಾಡಲಾರವು, ಬೊಗಳುವುದನ್ನು ಬಿಟ್ಟು. ಅವನು ಹತ್ತಿರುವ ಆನೆ ಯಾವುದು?— ಸತ್ಯನಿಷ್ಠೆ. ಇದು ಯಾವ ಸಂಕುಚಿತ ವಿಚಾರದ ಕುನ್ನಿಯ ಕೈಗೂ ಸಿಗದಷ್ಟು ಎತ್ತರವಾಗಿದೆ. ಪರಮಾತ್ಮನ ಕಾರುಣ್ಯಬಲದ ಆನೆಯನೇರಿಕೊಂಡು ಹೊರಟ ಶರಣನು ಹುಲುಮಾನವರ ಚೀರಾಟಕ್ಕೆ ಬೆದರಿ ಬೇಗುದಿಗೊಳ್ಳದೆ ಏಕನಿಷ್ಠೆಯಿಂದಲೇ ಮುಂಸಾಗಬೇಕು.

(ಸಶೇಷ)

* * *

ದೇವರನ್ನು ಕಾಣುವುದು ಹೇಗೆ ?

ಈ ಬಗ್ಗೆ ಸ್ವಾಮಿ ಶಿವಾನಂದರು ಹೀಗೆ ಹೇಳುತ್ತಾರೆ:

ಹೃದಯ ಶುದ್ಧಿಯನ್ನು ಹೊಂದಲು, ಭಗವಂತನಿಂದ ದಿವ್ಯವಾದ ಬೆಳಕನ್ನು ಪಡೆಯಲು ಸ್ವಾರ್ಥರಹಿತ ಸೇವೆಯನ್ನು ನೀಡುವುದಕ್ಕಾಗಿ ಸೇವಾಶಿಬಿರಗಳನ್ನು ಶೀಘ್ರವಾಗಿ ಆರಂಭಿಸಿ. ಕ್ರಮಬದ್ಧವಾದ ನಿಯಮ ನಿರತವಾದ ರೀತಿಯಲ್ಲಿ ಶ್ರಮಿಸಿರಿ. ಸೇವೆಯಲ್ಲಿ ಮಾತ್ರ ಉಜ್ವಲತೆಯಿರಲಿ. ಸೇವಾದೃಷ್ಟಿ ಇರಲಿ. ಕೆಲವೇ ಹೊತ್ತು ಅಲ್ಪ ನಿದ್ರೆ ಮತ್ತು ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳಿ. ನೋವಿಲ್ಲ ಮತ್ತು ನಷ್ಟವಿಲ್ಲ. ಆದರ ಫಲವು ಅಮರತೆಯೇ.

ಒಬ್ಬ ವೈದ್ಯನು ಬಡವರನ್ನು ಸರಿಯಾದ ಮನೋಭಾವದಿಂದ ಸೇವೆ ಮಾಡಿದರೆ, ಅವನ ಹೃದಯವು ಶೀಘ್ರದಲ್ಲೇ ಶುದ್ಧವಾಗುವುದು. ಈ ಶುದ್ಧಿಯ ಮೂಲಕ ತನ್ನ ಆತ್ಮಶುದ್ಧಿಗೂ, ಆತ್ಮಸಾಕ್ಷಾತ್ಕಾರಕ್ಕೂ ಮುಂಬರಿಯಬಹುದು. ಆತನು ಕರ್ಮಯೋಗಿಯ ಸತ್ಯಭಾವವನ್ನು ತಳೆದರೆ, ದೇವನನ್ನು ಅಥವಾ ಆತ್ಮನನ್ನೆ ಸೇವಿಸುತ್ತಿರುವೆನೆಂದು ಭಾವಿಸಿದರೆ, ಆ ವೈದ್ಯನು ದೇವರನ್ನು ಶೀಘ್ರವಾಗಿ ಕಾಣಬಹುದು.

ಸಂಗ್ರಹ: ಷಡಕ್ಷರೀ

ಷಡಕ್ಷರದೇವ

ಆರು ವರ್ಣದ 'ಶ್ರೀ ಷಡಕ್ಷರದೇವ' ಕನ್ನಡ-ರಸಋಷಿ
ಮಾರಮರ್ದನ ಸುಶಿವಲಿಂಗನ ನುತಿಸಿ ಧನ್ಯತೆನಡೆದನು ॥ ಪ ॥

ಹರನನಲ್ಲದೆ, ಅನ್ಯದೈವನ ಹೊಗಳೆನೆಂಬುವ ಶಪಥದಿಂ
ಹರಿಹರನ—ಅಭಿಮತವ ಲಕ್ಷಿಸಿ ಸೂರೆಗೈದನು ಕೋಶವಂ
ವರಕೃತಿಗಳಂ ರಚಿಸುತಲಿ ಕವಿ ಭಕ್ತಿಮಾರ್ಗವ ತೋರಿದಂ
ಪರಮ 'ಪಂಚಾಕ್ಷರಿ'ಯ ಚಿತ್ರಿಸಿ ಸತ್ಯಸಾಕ್ಷಾತ್ಕರಿಸಿದಂ ॥ ೧ ॥

'ರಾಜಶೇಖರ'ಮೆಂಬ ಅದ್ಭುತ ಕೃತಿಯ ಲಿಖಿಸಿದ ಸುಂದರಂ
ರಾಜಿಸುತ್ತಿದೆ ರಾಜರಸದಿಂ ಸೂರ್ಯಚಂದ್ರರ ತೆರದೊಳು
ಸಾಜವಾಗಿದೆ ಮಂತ್ರಶಕ್ತಿಯು ರೂಪುದಳೆದೊಲು ಕೂಡುತೆ
ತೇಜದಿಂ ಮಿರುಮಿರುಗುತಿದೆ ನವಕೃತಿಯದೆನ್ನುತೆ ಜಗದೊಳು ॥ ೨ ॥

ಬಸವರಾಜನ ಪಾತ್ರವನುಪಮಸಿದ್ಧಿ—ಈಶ್ವರ ಸೃಷ್ಟಿಯು
ಅಸಮ ಮಹಿಮೆಯ ಮೆರೆದನೆರದನೆ ಶಿವನ-ಅಂಶದಿ ತಾನವಂ
ಜಸವು ತುಂಬಿದ ಸತ್ಯಮೂರ್ತಿಯನರಿತನವ ಕವಿಕಣ್ಣೊಳು
'ವೃಷಭದೇವನ ವಿಜಯ'ವೆನ್ನುತೆ ಉಸುರಿ ಗಳಿಸಿದ ವಿಜಯವ ॥ ೩ ॥

'ಚೋಳಭೂಪಾಲೀಯ' ವರ್ಣನೆಯು 'ಕವಿಕರ್ಣರಸಾಯನವು'
ಚೋಳ ಸುಂದರ ಚೋಳ ವಿಕ್ರಮ ಮಾನಕಂಜರು ಪಾಂಡ್ಯರ
ಭಾಳಲೋಚನ ಭಕ್ತಿವರ್ಣನ ಕವಿಯ ಶಕ್ತಿಯ ಸೂಚಕ
ಆಳವಾಗಿಹ ವಿದ್ವದುದ್ಯಮ ಶಿವನ ಕೊಡುಗೆಯು ಈತಗೆ ॥ ೪ ॥

ಶಬರರೂಪನ ತಾಳ್ದ ಶಂಕರಲೀಲೆ ರಚಿಸಿದ ಭಕ್ತಿಯಿಂ
ಉಭಯಭಾಷಾಕೋವಿದನು ಮೇಣ್ ಶಿವನ ಕರುಣೆಯ ಪಡೆದವಂ
ಶಬರಿಗಂದೊಲಿದಂಥರಾಮಗೆ ಮಿಗಿಲು ರಮ್ಯವು ಬಣ್ಣನೆ
ಸಬಲ ಪಾರ್ಥನ ಬೆನ್ನ ದೇವಿಗೆ ತೋರ್ದ ಬಿನ್ನಣ—ಚಿತ್ರವು ॥ ೫ ॥

'ವೀರಭದ್ರೋದಾಹರಣ'ವನು, 'ಶಿವ-ಸ್ತೋತ್ರ—ಸುಮಂಗಲಾ'
ಸಾರಿ 'ಬಸವನ ಸುಪ್ರಭಾತ'ವ ಭಕ್ತಿಯನು ತಾ ಮೆರೆದನು
ಮಾರಹರನಪರಾವತಾರೀ 'ಸಿದ್ಧಲಿಂಗ'ನ ನುತಿಸಿದ
ನೀರೆ 'ನೀಲಮ್ಮಗಳ—ಸ್ತೋತ್ರ'ವ ಲಿಖಿಸಿ ಕೃಪೆಯನು ಗಳಿಸಿದ ॥ ೬ ॥

ಜನಿಸಿ ಧನುಗೂರಿನಲಿ ಬೆಳೆಯುತೆ ಬೆಳೆಯೆ ಕವಿತೆಯು ಜೊತೆಯೊಳು
ಕನಿಕರಿಸಿ ಭೂಪತಿಗೆ ಸೇರಿದ ಬಾಲಚರಿದಿರಪುರವನು
ಮನದಪೇಕ್ಷೆಯ ಸಲಿಸುತಲಿತಾಂ ಪ್ರೌಢಕೃತಿಗಳ ರಚಿಸುತೆ
ಅನುವಿನಿಂದಲಿ-ಐಕ್ಯವಾದನು ನೆನೆಯುತಲಿ 'ಶಿವಲಿಂಗ'ನ ॥ ೭ ॥

ಪುಟ್ಟಲಿಂಗಪ್ಪಾರ್ಯರಿಚ್ಛೆಯ ಫಲಿಸಿ ಕೊಟ್ಟರು ಪುತ್ರರು
ಪಟ್ಟ-ಶ್ರಮವನು ಲೆಕ್ಕಿಸದೆ ತಾವ್ ಗದ್ದುಗೆಯ ನಿರ್ಮಿಸಿದರು
ಕಟ್ಟಕಡೆ ಬೇಡಿಕೆಯು: ದೇವನು ಅವರಿಗೀಯಲಭೀಪ್ಸಿತವ
ಕೊಟ್ಟ ಶಕ್ತಿಯು ಕೊಟ್ಟ ಶಿವನಿಗೆ—ಅಗಲದು ಸಾರ್ಥಕ್ಯವು ॥ ೮ ॥

—ಪುಲಿಕೇಶಿ



ಬಸವಣ್ಣನವರನ್ನು ಸಮಕಾಲೀನರು, ನಂತರದ ಶಿವಯೋಗಿಗಳು, ಇಂದಿನ ಶಿವಗಣ ಕಂಡು, ಬರೆದ ನುಡಿಮುತ್ತುಗಳ ಸಂಕಲನವಾದ ಬಸವ ಚರಣ "ನುಡಿ ನೈವೇದ್ಯ" ಎಂಬ ಸಂಪಾದನಾಕೃತಿಯನ್ನು ದಿನಾಂಕ ೨೩-೦೨-೧೯೮೭ರಂದು ಸುಜನಾರವರು ಮೈಸೂರು ನಗರದಲ್ಲಿ ಬಿಡುಗಡೆ ಮಾಡುತ್ತಿರುವುದು.



ದಿನಾಂಕ ೩೦-೧೨-೧೯೭೮ರಂದು ರಾಷ್ಟ್ರಕವಿ ಕುವೆಂಪು ದಂಪತಿಗಳೊಂದಿಗೆ ಮಾತಾಜಿ

Phone : Basava Mantapa 82335

Phone: Basava Gangotri 34

Correspond to :

BASAVA MANTAPA
No. 24, Chord Road, 2nd Block, Rajajinagar
BANGALORE-560 010